CC-O. In Public Domain. Digitized by eGangotri

ಕರ್ತಾರನ ಕಮ್ಮಟ

ದೃಶ್ಯ ೧.

[ಇಳಿಹೊತ್ತಿನ ಸಮಯ. ಒಂದು ಹಳ್ಳಿಯ ಭಾಗ. ರಂಗಸ್ಥಲದ ಮೇಲೆ ಎದುರು ಮೂರಡಲ್ಲಿ ಮುಳುಗುವ ಸೂರ್ಯ ಕಾಣುತ್ತಾನೆ. ತೆರೆಯ ಹಿಂದಿನಿಂದ ಮನೆಗೆ ಮರಳುತ್ತಿರುವ ದನಗಳ ಗಂಟೆಗಳ ಮತ್ತು ದನಗಳನ್ನು ಸಾಗಿಸುತ್ತಿರುವ ದನಗಾಹಿಗಳ ಸದ್ದು ಆಗಾಗ ಕೇಳಿಸುತ್ತಿರುವುದು. ರಂಗದ ಮುಂಬದಿಗೆ (ಪ್ರೇಕ್ಷಕರ) ಎಡ-ಬಲ ಎರಡೂ ಕಡೆ ಒಂದಕ್ಕೊಂದು ಇದಿರಾದ ಎರಡು ಮನೆಗಳ ಮುಂಭಾಗ, ಛಾವಣಿ, ಒಂದೆರಡು ಕಂಬಗಳು ಕಾಣಿಸುತ್ತಿವೆ. ಹಳ್ಳಿಗೆ ರೂಢವಾದಂತಹ ಸ್ವರೂಪ ಈ ಮನೆಗಳಿಗಿದೆ.

ತೆರೆಯು ಮೇಲೆದ್ದಾಗ ಎರಡೂ ಮನೆಗಳ ಮುಂದೆ ಒಂದೇ ತರಹ ಚಿತ್ರ ಕಾಣುವುದು. ಅದೆಂದರೆ ಮನೆಯ ಹೆಂಗಸು ತನ್ನ ಮನೆಯ ಮುಂಭಾವಣಿಯ ಕಂಬಕ್ಕೆ ಆತು ಸೋಜಿಗ-ಉದ್ವಿಗ್ನ ಮಿಶ್ರಿತ ಕಳೆಯಿಂದ ನೋಡುತ್ತಿದ್ದಾಳೆ. ಹೀಗೆ ಎರಡೂ ಮನೆಗಳ ಹೆಂಗಸರು ಒಬ್ಬರೊಬ್ಬರಿಗೆ ಇದಿರಾಗಿ ನಿಂತಿದ್ದಾರೆ. ಮನೆಗಳ ಮುಂದೆ-ಎಂದರೆ ರಂಗಸ್ಥಲದಲ್ಲಿ-ಇಬ್ಬರು ಗಂಡಸರು ಗುದ್ದಲಿಗಳಿಂದ ಅಗಿಯುತ್ತಿದ್ದಾರೆ. ಬದಿಗೆ ಸರಿಸಿದ ಮಣ್ಣು ಗುಂಪನ್ನು ನೋಡಿದರೆ ಇಬ್ಬರೂ ಒಂದೇ ತರದ ಕಾವಲಿಯನ್ನು ಅಗಿಯುತ್ತಿದ್ದಾರೆಂದು ಹೇಳಬಹುದು. ನಡನಡುವೆ ಅಗಿಯುವುದನ್ನು ತಡೆದು ಮುಖ ತಿರುಗಿಸಿ ಹಿಂದಿನ ಮನೆಯನ್ನು ನೋಡುತ್ತಿದ್ದಾರೆ. ಒಂದೆರಡು ನಿಮಿಷ ಬೇರೆ ಯಾವ ಸದ್ದೂ ಇಲ್ಲದೆ ಇದೇ ಕೆಲಸ ನಡೆಯುವುದು.

ಕೊನೆಗೆ ಇಬ್ಬರೂ ಹೆಂಗಸರು ಒಬ್ಬರನ್ನೊಬ್ಬರು ನೋಡುವರು, ಇಬ್ಬರೂ ಉಸುರ್ಗರೆಯುವರು. ಗಂಡಸರ ಲಕ್ಷ್ಯ ಇನ್ನೂ ಕೆಲಸದಲ್ಲಿಯೆ ತೊಡಗಿದ್ದನ್ನು ಕಂಡು ಬೇಸರದ ದನಿಯಲ್ಲಿ –]

ಎಡದ ಹೆಂಗಸು:- ಛೆಂಜೀ ಯಾಳೇ ಆತು– (ಎಡದ ಗಂಡಸು ಕಳ್ಳ ನೋಟದಿಂದ ಇನ್ನೊಬ್ಬನನ್ನು ನೋಡಿ ಹಾಗೇ ಅಗಿಯುತ್ತ ಸಾಗಿಸುವನು).

Sri Vidyabharathi Book Centre, Sringeri

CC-O. In Public Domain. Digitized by eGangotri

ಬಲದ ಹೆಂಗಸು:-ದನ ಸೈತ ದಿನಗೆಲಸ ಮುಗಿಸಿ ಮನೀಗ ಹೊಂಟಾವ (ಬಲದ ಗಂಡಸು ಸಿಟ್ಟಿನಿಂದ ಆಕೆಯನ್ನೂ ಕಳ್ಳನೋಟದಿಂದ ಎಡದ ಗಂಡಸನ್ನೂ ನೋಡುತ್ತಲೆ ಕೆಲಸವನ್ನು ಹಾಗೇ ಸಾಗಿಸುವನು).

ಎಡದ ಹೆಂಗಸು:– (ಸಿಟ್ಟಿನ ದನಿಯಲ್ಲಿ) ಭೆಂಜಿ ಆತುಳು ಆಂದೆ! ಕೇಳಿಸ್ತೈನು?

ಎಡದ ಗಂಡಸು:– (ಕೆಲಸವನ್ನು ತಡೆದು, ಗುದ್ದಲಿಯನ್ನು ಎಡಗೈಯಿಂದೂರಿ, ಬಲಗೈಯನ್ನು ಸೊಂಟದ ಮೇಲಿಟ್ಟು ಅವಳನ್ನು ದಿಟ್ಟಿಸುತ್ತ ನಿಲ್ಲುವನು).

ಬಲದ ಹೆಂಗಸು:– ಮನಸ್ಯಾ ಆದ ಮಾತಿಗೆ ಬುದ್ದಿ ಇರ್ಬೇಕಾಗ್ತೈತಿ. ದನಾ ಸೈತ– (ಬಲದ ಗಂಡಸು, ಬಲಗೈಯಿಂದ ಗುದ್ದಲಿಯನ್ನೂರಿ, ಎಡಗೈಯನ್ನು ಸೊಂಟದ ಮೇಲಿಟ್ಟು ತನ್ನನ್ನು ಒಂದೇ ಸವನೆ ದಿಟ್ಟಿಸಲು ಮಾತನ್ನು ತಡೆಯುವಳು).

ಎಡದ ಗಂಡಸು:– (ಎರಡೂ ಕೈಗಳನ್ನು ಬಡಿದು ಧೂಳನ್ನು ಜಾಡಿಸಿ) ಒಂಚೆರಿಗೆ ನೀರ್ತ ಕೊಂಡ್ಬಾ.

ಎಡದ ಹೆಂಗಸು:– ಮತ್ತ ಒಳಗೇ ನಡೀಬಾರ್ದ? ಕೈತೊಳ್ಕೊಂಡು ರೊಟ್ಟಿ ತಿನ್ನಲಾಕ.

ಎಡದ ಗಂಡಸು:– (ದರ್ಪದ ದನಿಯಲ್ಲಿ) ನೀ ಮೊದ್ಲು ಚೆರಿಗೆ ನೀರು ತಕ್ಕೊಂಡು ಬಾ. ಹಸುವಾಗಿದ್ರ ನೀ ತಿನ್ನು. ಕೆಲಸಾ ಮುಗಿಸದೇ ನಾ ಇಲ್ಲಿಂದ ಕಾಲು ಕೆತ್ತೋದಿಲ್ಲ (ಎಂದು ಮತ್ತೆ ಅಗಿಯಲು ತೊಡಗುವನು. ಹೆಂಗಸು ಬೆರಗಾಗಿ ನಿಂತಲ್ಲಿಯೆ ನಿಲ್ಲುವಳು).

ಬಲದ ಗಂಡಸು:– (ಎರಡೂ ಕೈಗಳಿಂದ ಸಲಿಕೆಯನ್ನು ನೆಲಕ್ಕೆ ಬಡೆದು ನಟಿದು ನಿಂತು) ಏ, ಒಂದ್ಸೊಡಾ ತಕೊಂಡು ಬಾ.

ಬಲದ ಹೆಂಗಸು:– (ತಿಳಿಯದೆ) ಕೊಡಾ! ಖಾಲಿ ಇಲ್ಲ ಕೊಡ.

ಬಲದ ಗಂಡಸು:– (ತಿರಸ್ಕಾರಸೂಚಕ ದನಿಯಲ್ಲಿ) ನನಗ್ಗೊತ್ತೈತಿ! ಖಾಲಿ ಇದ್ದದ್ದು ನಿನ್ನ ತೆಲಿ! ತುಂಬಿದ ಕೊಡ ತತಾ ಹೋಗು. (ಮತ್ತೆ ಕೆಲಸಕ್ಕೆ ಜಾಗುತ್ತ) ನಿಂತ ಮೆಟ್ಟಿಗೀ ವ್ಯಾಗ ಇದನ್ನ ಖಾತ್ರಿ ಮಾಡಿಕೊಂಡೇ ಹೋಗವ ನಾನು. (ಕೆಲಸಕ್ಕೆ ತೊಡಗುವನು)

Sri Vidyabharathi Book Centre, Sringeri

CC-O. In Public Domain. Digitized by eGangotri

ಎಡದ ಗಂಡಸು:– (ಮುಖವನ್ನೆತ್ತಿ ಎಡದ ಹೆಂಗಸಿಗೆ) ಎಲ ! ನಿಂತ್ಯಾಕ ಹಾಂಗೇ ? ಒಂಚೆರಿಗೆ ನೀರು ತಂದು ಸುರುವು ಅಂದೆ ! (ಮತ್ತೆ ಕೆಲಸಕ್ಕೆ ತೊಡಗುವನು)

ಬಲದ ಗಂಡಸು:– (ಮುಖವನ್ನೆತ್ತಿ ಬಲದ ಹೆಂಗಸಿಗೆ) ಎಲಾ ! ಕಂಬದಾಗ ಕೊರಿದ ರಂಬಿ ಅಂತ ತಿಳ್ಕೊಂಡಿಯೊ ಏನು ? ಒಂದ್ಕೊಡ ತುಂಬಿ ನೀರು ತಂದು ಬರಕು ಅಂದೆ ! (ಮತ್ತೆ ಕೆಲಸಕ್ಕೆ ತೊಡಗುವನು) .

ಎಡದ ಗಂಡಸು:– (ಕೆಲಸ ಮಾಡುತ್ತಲೆ) ಚೆರಿಗೆ ಮ್ಯಾಗ ಚೆರಿಗೆ, ಚೆರಿಗೆ ಮ್ಯಾಗ ಚೆರಿಗೆ ಹಾಂಗೇ ಸುರುವ್ತಾನೇ ಹೋಗು — ಎಲ್ಲಿ ತನಕ ಮುಟ್ತದ ನೋಡಾಣ.

ಬಲದ ಗಂಡಸು:– (ಕೆಲಸ ಮಾಡುತ್ತಲೆ) ಕೊಡದ ಮ್ಯಾಗ ಕೊಡ, ಕೊಡದ ಮ್ಯಾಗ ಕೊಡ ಹಾಂಗs ಬರಕ್ತಾನೇ ಹೋಗು. ಅಲ್ಲಿ ಮಟ ಮುಟ್ಟ ಬೇಕು !

ಎಡದ ಗಂಡಸು:– (ಮೇಲಿನಂತೆಯೆ) ಅಲ್ಲಿ ಮಟ ಮುಟ್ಟಿಸಿ ನೋಡಿಯೆ ಬಿಡೋಣ.

ಬಲದ ಗಂಡಸು:– (ಮೇಲಿನಂತೆ) ಅಲ್ಲಿ ಹೋಗಿ ನಿಂತ ಮ್ಯಾಗ ಗೊಂ ಅಂದಿರಬೇಕು. ಆಗ ತಿಳೀತೇತಿ !

ಎಡದ ಗಂಡಸು:– (ಮೇಲಿನಂತೆ) ಮನ್ಯಾಗ ಒಂದ್ಹನೀ ನೀರು ಉಳೀದಿದ್ರೂ ಹರಕತಿಲ್ಲ; ಆದರ ವಂ ಬುದ್ದಿ ಬರಲಿ.

(ಇಬ್ಬರೂ ಹೆಂಗಸರು ಕಕ್ಕಾವಿಕ್ಕಿಯಾಗಿ ಒಬ್ಬರನ್ನೊಬ್ಬರು ನೋಡುವರು) .

ಎಡದ ಹೆಂಗಸು:– (ಮೆಲ್ಲನೆ ನಡೆದು ಬರುತ್ತ) ಬುದ್ದಿ ಬಿಟ್ಟು ಕೆಲಸಾ ಮಾಡಿದರ ಬುದ್ದಿ ಹ್ಯಾಂಗ ಬರ್ಬೇಕು ?

(ಎಡದ ಗಂಡಸು ಸಿಟ್ಟಿನಿಂದ ನೋಡಿ ಮತ್ತೆ ಕೆಲಸದಲ್ಲಿ ತೊಡಗುವನು) .

ಬಲದ ಗಂಡಸು:– (ಮೆಲ್ಲನೆ ನಡೆದು ಬರುತ್ತ, ಬಲದ ಗಂಡಸನ್ನುದ್ದೇಶಿಸಿ) ಕೊಡ ನೀರು ತಂದು ತೆಲೀ ಮ್ಯಾಗ ಸುರುವಿದರ ಎಚ್ಚರ ಬಂದೀತೋ ಏನೋ !

(ಬಲದ ಗಂಡಸು ಬಂದ ಸಿಟ್ಟನ್ನು ಕೆಲಸದ ಭರದಿಂದ ಸೂಚಿಸುತ್ತಾನೆ) .

Sri Vidyabharathi Book Centre, Sringeri

CC-O. In Public Domain. Digitized by eGangotri

(ಅವನ ರಭಸವನ್ನು ಕಂಡು ಎಡದವನೂ "ಹುಂ" ಎಂದು ಉಸಿರೆಳೆದು ಅಗಿಯಲು ತೊಡಗುವನು. ಕೂಡಲೆ ಚಿದ್ದಿಗೆ ಬಿದ್ದಂತೆ ಇಬ್ಬರೂ "ಹುಂ" "ಹುಂ" ಎಂದು ಜೋರಿನಿಂದ ಗುದ್ದಲಿಯನ್ನು ಬೀಸುತ್ತ ಹಿಂದೆ ಸರಿಯುತ್ತ ಕೆಲಸವನ್ನು ನಡೆಸುವರು. ಕೊನೆಗೆ ಎದಡವನು ಬಲಡ ಮನೆಯ ಹತ್ತರ, ಬಲಡವನು ಎಡಡ ಮನೆಯ ಹತ್ತರ ಅಗಿಯುತ್ತಿರುವಾಗ -)

ಎಡದ ಹೆಂಗಸು:–(ಬಲಡ ಹೆಂಗಸನ್ನು ನೋಡುತ್ತ) ನೀಲವ್ವಾ, ಇದೇನ ಹುಡುಗಾಟ ನಡೀತ, ಯಕ್ಕಾ? ಯಾರು ಹೇಳವ್ರ ಕೇಳವ್ರೆ ಇಲ್ಲ ಅಂಥಾಂಗಾತಲ್ಲ?

ನೀಲವ್ವ:– (ಹಿಂತನದಿಂದ) ಅದ್ಯಾಕ? ನಾ ಹೀಂಗೇ ಹೋಗಿ ಸಣ್ಣಪ್ಪಜ್ಜನ್ನ ಕರ್ಕೊಂಡು ಬರ್ತೀನಿ.

[ಇಬ್ಬರೂ ಗಂಡಸರು ಕುಳಿತುಕೊಂಡು ತಂತಮ್ಮ ಹೆಂಡಂದಿರನ್ನು ಕಿಡಿಗಣ್ಣಿನಿಂದ ನೋಡುವರು]

ನೀಲವ್ವ:– (ಹೆಜ್ಜೆ ಅಪ್ಪಳಿಸುತ್ತ ಮುಂದೆ ನಡೆದು) ಹೊತ್ತು ಸರಿದು ಕತ್ತಲಾಗೋದ್ರಾಗ ಕರ್ಕೊಂಡು ಬರ್ತೀನಿ ತಡೀ, ಬಂಗಾರೆವ್ವ. ಇಲ್ಲಾ ಅಂದ್ರ ಬಂದವ್ರು ತೆಗ್ಗಿನಾಗ ಮುಗ್ಗರಿಸಿ ಕಾಲ್ಮುರಿಕೋಬೇಕಾದೀತು.

ಬಂಗಾರೆವ್ವ:– ಬ್ಯಾಗ ಬಾರ, ಯಕ್ಕಾ. ನನಗ—

ನೀಲವ್ವ:–(ರಂಗಭೂಮಿಯಿಂದ ಮರೆಯಾಗುವಾಗ ತಿರುಗಿ ನಿಂತು, ಕೆಣಕುವ ಧಾಟಿಯಲ್ಲಿ) ಹೆದರತಿ ಯಾಕ, ತಂಗೀ? ಅವೇನು ಕಾದೋಡೋ ಹೋರಿಯ? ನೀಯೇನು ಬಿಡಿಸ್ಬೇಕಾಗ್ತೇತೆ? (ಹೋಗುವಳು)

[ಇಬ್ಬರೂ ಗಂಡಸರು ಅಂಗೈಗಳಲ್ಲಿ ಉಗುಳಿಕೊಂಡು ಮತ್ತೆ ಕೆಲಸಕ್ಕೆ ಸಜ್ಜಾಗುವುದನ್ನು ಸೂಚಿಸುತ್ತಾರೆ. ಬಂಗಾರೆವ್ವ ಬಲಗೈ ಬೆರಳನ್ನು ಗದ್ದದ ಕೆಳಗಿಟ್ಟು ಎಡಗೈ ಬೆರಳುಗಳನ್ನು ಮಡಚಿ ಎಡಗಂಡಸ್ಥಳಕ್ಕಿಟ್ಟು ಅತ್ಯಂತ ವಿಸ್ಮಿತ ಮುದ್ರೆಯಿಂದ ನೋಡುತ್ತ ನಿಲ್ಲುತ್ತಾಳೆ. ಇಬ್ಬರೂ ಗಂಡಸರು ಗಂಟಲಗಳನ್ನು ಸರಿಪಡಿಸಿಕೊಳ್ಳುತ್ತಾರೆ. ಒಬ್ಬನಿಗಿಂತ ಇನ್ನೊಬ್ಬ ಮುಂದೆ ಕೆಲಸಕ್ಕೆ ತೊಡಗಬಯಸುವಂತೆ ತೋರಿಕೆಯ ನಟನೆಯನ್ನು ಮಾಡಿದರೂ ಇಬ್ಬರೂ ದಣಿದುದನ್ನು ಬಚ್ಚಿಡಲಾರದ ಅವಸ್ಥೆಯಲ್ಲಿದ್ದಾರೆ. ಒಂದು ನಿಮಿಷದಲ್ಲಿ ಇಬ್ಬರದೂ ನಟನೆ ಎಂದು ಇಬ್ಬರಿಗೂ ತಿಳಿಯುವುದು. ಕಳ್ಳನೋಟದಿಂದ ಒಬ್ಬರನ್ನೊಬ್ಬರು ಕಣ್ತಪ್ಪಿಸಿ ನೋಡುತ್ತ ಮೆಲ್ಲಗೆ ಚಲುವೆಯನ್ನು ತೆಗೆಯುವರು. ಒಬ್ಬನಿಗೆ ಚಲುವೆ ದೊರೆಯುವುದು, ಎಸ್ಟು ಪ್ರಯತ್ನಿಸಿದರೂ ಕಡ್ಡಿ ಕೆಟ್ಟಿಗೆ ದೊರೆಯಲೊಲ್ಲದು; ಇನ್ನೊಬ್ಬನಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ತಟ್ಟನೆ ಕಡ್ಡಿಪೆಟ್ಟಿಗೆ ದೊರೆಯುವುದು, ಎಷ್ಟು ಪ್ರಯತ್ನಪಟ್ಟರೂ ಚಿಲುಮೆ ದೊರೆಯಲೊಲ್ಲದು. ಇಬ್ಬರೂ ಪೆಚ್ಚಾಗುವರು; ಹಗ್ಗ ಕಟ್ಟಿ ಎಳೆಯಲ್ಪಟ್ಟವರಂತೆ ಒಬ್ಬರನ್ನೊಬ್ಬರು–ಕಣ್ತಪ್ಪಿಸಿ ನೋಡಬೇಕೆಂದರೂ–ಇದಿರಾಗಿ ನೋಡಿ ಒಮ್ಮೆಲೆ ಸಿಡುಕಿನ ಮುದ್ರೆಯಿಂದ ಮುಖ ತಿರುಗಿಸಿ ಕುಳಿತುಕೊಳ್ಳುವರು. ಸಂಜೆಯ ಸಮಯ ಸಮೀಪಿಸುತ್ತಲಿದೆ. ದೂರದಿಂದ ಮನೆಗೆ ಮರಳುವ ದನಕರುಗಳ 'ಪಂಬಾ' ಸದ್ದು ಆವಾಗ ಕೇಳಿಬರುತ್ತಿದೆ. ಶಕ್ಕವಾದರೆ ಪಕ್ಕಿಗಳ ಕಿಲಕಿಲಾಟವನ್ನೂ ಕೇಳಿಸಬೇಕು. ಕೊನೆಗೆ ಚಿಲುಮೆಯವನು ಆಡನ್ನು ಬಾಯಿಗಿಡುತ್ತಾನೆ—ಮುಖ ತಿರುಗಿಸಿಕೊಂಡೇ; ಆ ಮೇಲೆ ಆಡನ್ನು ಕಳ್ಳನೋಟದಿಂದ ನೋಡಿದ ಇನ್ನೊಬ್ಬ ಕಡ್ಡಿಯನ್ನು ಕೊರೆದು ಹೊತ್ತಿಸುತ್ತಾನೆ—ಮುಖ ತಿರುಗಿಸಿಯೆ; ಒಂದೆರಡು ನಿಮಿಷಗಳಲ್ಲಿ ಚಿಲುಮೆಯವನು ಇನ್ನೊಬ್ಬನಿಗೆ ಆವನ ಕಡೆ ನೋಡದೆಯೆ — ಚಿಲುಮೆಯನ್ನು ಸಾಗಿಸುತ್ತಾನೆ. ಬಂಗಾರೆವ್ವ ಮೊದಲು ಬೆರಗಾಗಿ, ಆ ಮೇಲೆ ಕಜಕುಳಿ ತಿಂದವಳಂತೆ ಬೊಳ್ಳನೆ ನಗುವಳು. ಎರಡನೆಯವನು ಚಿಲುಮೆಯದ್ದು ಬೀಸಾಡುವನು; ಮೊದಲನೆಯವನು ಸಿಟ್ಟನಿಂದೆದ್ದು ಆದನ್ನೆತ್ತಿ ಆದೇ ಸಿಟ್ಟಿನ ಭರದಲ್ಲಿ ಗುದ್ದಲಿಯನ್ನೆತ್ತಿ ಕೆಲಸಕ್ಕೆ ಸಿದ್ಧನಾಗಲು ಎರಡನೆಯವನೂ ಜಿಗಿದೆದ್ದು ಹಾಗೇ ಮಾಡುವನು. ಇಬ್ಬರೂ ಗುದ್ದಲಿಯನ್ನೆತ್ತಿ ಕೆಳಗೆ ಬೀಸಬೇಕೆಂದಾಗ ನೀಲವ್ವ ಸಣ್ಣಪ್ಪಜ್ಜನೊಡನೆ ಬರುವಳು. ಆಕೆಯ ದನಿಯನ್ನು ಕೇಳಿದೊಡನೆ ಇಬ್ಬರೂ—ಚಿತ್ರಿತರಾದವರಂತೆ—ಗುದ್ದಲಿಯನ್ನೆತ್ತಿಕೊಂಡೇ ನಿಲ್ಲುವರು. ಆದರೆ ಆವಸರದ ಭರದಲ್ಲಿ—ತಿಳಿಯದೆಯೆ—ಒಬ್ಬರೊಬ್ಬರ ಇದಿರಾಗಿ ನಿಂತಿದ್ದಾರೆ.]

ಸಣ್ಣಪ್ಪಜ್ಜ :– (ಸಂದರ್ಭ ತಿಳಿಯದೆ ಆವಸರದಿಂದ ಕೈಯೆತ್ತಿ ತಡೆಯುವವನಂತೆ ಬರುತ್ತ) ಎಲೆ-ಎಲೆ! ಹುಚ್ಚುಗೊಟ್ಟೆಗೊಳಿರಾ–ಇವೇನು ಖೂನಿ ಮಾಡಾಕ ನಿಂತೀರಾ ಯೇನ್? (ಬಂಗಾರೆವ್ವ ತಡೆಯುದಾಗಿ ನಗಲು ಆಕೆಯನ್ನು ಸಿಟ್ಟನಿಂದ ನೋಡುತ್ತ) ಎಲೆ–ನಗ್ತೀ ಯೇನ್? ಯೆಂತಾ ಹೆಣ್ಣು ಅಂತೀನಿ! ಗಂಡಂದಿರು ಖೂನಿ ಮಾಡಾಕ ನಿಂತಾಗ—

ನೀಲವ್ವ:– (ನಡುವೆಯೆ) ಬಿಡೊ, ಯಜ್ಜಾ! ನಿನಗೂ ಹೊಳೀಬಾರದ? ಖೂನಿ ಮಾಡೋ ಗಂಡಸಗೋಳು ಮನೀಮುಂದೇ ಯಾಕ ಗುದ್ದಾಡ್ತಿದ್ದುವು ಮುಂಜಾಳೇಯಿಂದ ಛೆಂಜಿಯ ಮಟ?

ಸಣ್ಣಪ್ಪಜ್ಜ :– (ಇನ್ನೂ ತಿಳಿಯದೆಯೆ ಇಬ್ಬರನ್ನೂ ಮಿಕಿಮಿಕಿಸಿ) ಅಂದ್ರ? ಇಂತಾ ಪರಿ ಗುದ್ದಲಿ ಹಿಡಿಕೊಂಡು—

ನೀಲವ್ವ :– (ಮತ್ತೆ ನಡುವೆಯೆ) ಇಡೀ ಧಿನ ಕೈಯಾಗ ಹಿಡಿದ್ದಿಡಿದ್ದು ಮುಷ್ಟಿಗೆ ಕಳೆ ಹಿಡಿದಿರಬೇಕು! ಬಿಡಲಾಕ ಬರಬೇಕಲ್ಲ?

Sri Vidyabharathi Book Centre, Sringeri

CC-O. In Public Domain. Digitized by eGangotri

[ಇಬ್ಬರೂ ಗಂಡಸರು ಒಮ್ಮೆಲೆ ಗುದ್ದಲಿಯನ್ನು ಕೆಳಗೆ ಬಿಟ್ಟುಬಿಡುವರು]

ಸಣ್ಣಪ್ಪಜ್ಜ :– (ಎಡದ ಗಂಡಸಿಗೆ) ಯೇನೊ, ಕಾಳಪ್ಪಾ, ಯೇನ್ನಡಿಸಿ ಬ್ದಾದ್ರೂ ಏನು? (ಅವನು ಪೂತನಾಡದೆ ಬಲದ ಗಂಡಸನ್ನು ನೋಡಲು) ಯೇ, ರುದ್ರಾ೪, ಬುದ್ದಿಗಿದ್ದಿ ಯೆಲ್ಲಾ ಮಣ್ಣೊಳಗ ಹುಗಿದು ಬಿಟ್ಟೇ ಏನು? (ರುದ್ರಪ್ಪ ಮಾತನಾಡದೆ ಕಾಳಪ್ಪನನ್ನು ದುರುದುರು ನೋಡಲು) ಎಲೆ ನಿಮು! ನಾಯಿಲ್ಲಿ ಮಾತಾಡಿಸ್ತೀನಿ, ಅಲ್ಲಿ ನೀವು ಒಬ್ಬರೊಬ್ಬರ ಮಕ ನೋಡ್ತಾ ನಿಂತೀರಲ್ಲ?

ನೀಲವ್ವ :–ನೆರೆಹೊರೇರು-ಗುರುತು ಮಾಡಿಕೊಂತಾವು ಒಂದಕೊಂದು!

ರುದ್ರಪ್ಪ :– (ಸಿಟ್ಟಿನಿಂದ ಹೆಂಡತಿಗೆ) ಏ-ಒಂದು ಕಂಬಳಿ ತಂದು ಹೊರಗ ಕಟ್ಟೀ ಮ್ಯಾಗ ಹಾಸೋದನ್ನ ಬಿಟ್ಟು ಇಲ್ಲಿ ಯಾಕ ನಿಂತಿ ಊರ ಕಾರಭಾರ ಮಾಡಾಕ?

ಬಂಗಾರೆವ್ವ :– ನಾ ತರ್ತೀನಿ ಬಿಡೆ, ಯಕ್ಕ (ಎನ್ನುತ್ತ ಒಳಗೆ-ತನ್ನ ಮನೆಯೊಳಗೆ-ಹೋಗುವಳು)

ನೀಲವ್ವ :– (ತನ್ನಷ್ಟಕ್ಕೆ ಎಂಬಂತೆ) ನಾಚಿಕೆಗೇಡ ಕೆಲಸ ತಾ ಮಾಡಿ ಮಂದಿಗೆ ನಾಚಿಕಿಲ್ಲ ಅಂಬೋದು (ಪಟಗುಟ್ಟುತ್ತ ಬಲಬದಿಯ ತನ್ನ ಮನೆಯೊಳಗೆ ಹೋಗುವಳು).

ಸಣ್ಣಪ್ಪಜ್ಜ :– ಅಲ್ಲೊ, ರುದ್ರಪ್ಪಾ, ಇದೇನ್ನಡೆದೇತಿ? ನಾ ಅಲ್ಲಿ ಸೇಡಜಿಯ ಅಂಗಡ್ಯಾಗ ಕುಂತಿದ್ದೆ, ನಾಲ್ಕ ಮಂದಿ ಕಲೆತಿದ್ದರು, ನೀಲಿ ಗಾಬರಿ ಆಗಿ ಬಂದು "ಯೆಜ್ಜ, ಇವರು ಹ್ಯಾಂಗ್ಹ್ಯಾಂಗೋ ಮಾಡ್ತಾಳಕ ಹತ್ಯಾರ, ಗಡಾನೆ ಬಾ" ಅಂದ್ಲು—

ರುದ್ರಪ್ಪ :– (ನಡುವೆಯೆ ತಿರಸ್ಕಾರದ ಪನಿಯಲ್ಲಿ) ಅದೇನು ಹೇಳ್ತೇತಿ. ಹುಚ್ಚೊಟ್ಟೆ!

ಸಣ್ಣಪ್ಪಜ್ಜ :– (ಸುತ್ತಲೂ ನೋಡುತ್ತ) ಅಂದ್ರ? ಇದೇನ್ನಡಿಸೀರಿ ಹಾಂಗಾದ್ರ? ಕತ್ತಲ್ಯಾಗ ಬಂದೋರು ಎಡವಿ ಬಿದ್ದು ಕಾಲು ಮುರಿದು ಕೊಳ್ಳೋಹಾಂಗ ಹರೀ ಏನು ತಗದೀರಿ ಇಡೀ ಮಟ! ಇಬ್ಬರೂ ಕೈಯಾಗ ಒಂದೊಂದು ಗುದ್ದಲಿ ಹಿಡಿದು ಒಬ್ಬರು ಇನ್ನೊಬ್ಬರ ಮನೀ ಮುಂದ ನಿಂತೀರೇನು–(ಆ ಸಂದರ್ಭ ಮೊದಲೆ ಇಬ್ಬರ ಲಕ್ಷಕ್ಕೆ ಬಂದು, ಕಾಳಪ್ಪ-ರುದ್ರಪ್ಪ ಇಬ್ಬರೂ

Sri Vidyabharati Book Centre, Shringeri

CC-O. In Public Domain. Digitized by eGangotri

ಅದಲುಬದಲು ಪಾಟ ತಂತಮ್ಮ ಮನೆಯ ಮುಂದೆ ನಿಲ್ಲಲು) ಎಲೆ! ನಿಮು! ಏನು ಹುಡುಗಾಟ ನಡಿಸೀರೊ, ಕಾಳಪ್ಪ?

ಕಾಳಪ್ಪ :– (ತೀರ ಹಣ್ಣಾಗಿ, ನಾಚಿಕೊಂಡು) ಯೆಜ್ಜಾ, ಅದನ್ನೇನ್ಮಾಡ್ತೀ ಬಿಡು. ನೀ ಹೇಳಿದಾಂಗ ಹುಡುಗಾಟೇ ಆಯ್ತನ್ನು.

ರುದ್ರಪ್ಪ :– (ಸಿಡುಕಿನ ದನಿಯಲ್ಲಿ) ಯೆಜ್ಜಾ, ಮಾಡೋದ್ಮಾಡಿ ಕಡೀಕ ಸಾಚ್ಯಾ ಆಗೋದು ಎಲ್ಲಾರಿಗೂ ಬರ್ತೇತಿ. ಆದ್ರ ಇದನ್ನ ಸುರುವು ಮಾಡಿದೋರು ಯಾರು—ಅಂಬೋದನ್ನ ಖಾತ್ರಿ ಮಾಡಿಕೊ. ನನ್ಮಟ್ಟಿಗೆ ನಾ ತಪ್ಪಿದ್ದರ ಬೇಕಾದೋರ ಕೆರವು ತೆಲೀಮ್ಯಾಗಿಟ್ಕೊಂಡು ಆಗಸೇಬಾಗಿಲ ತನಕಾ ನಡೀಲಾಕ ತಯ್ಯಾರಿದ್ದೀನಿ.

ಬಂಗಾರೆವ್ವ :– (ಬಂದು) ಕಂಬಳಿ ತಂದೀನಿ (ಎನ್ನುತ್ತ ಕಟ್ಟಿಯ ಮೇಲೆ ಹಾಸಿ) ಕುಂತುಗೋ, ಯೆಜ್ಜಾ, ಕವಳಾ ತರ್ತೀನಿ (ಮತ್ತೆ ಒಳಗೆ ಹೋಗುವಳು).

ಸಣ್ಣಪ್ಪಜ್ಜ :– ದೀಪಾ ಹಚ್ಚೋ ಯಾಳೇನೇ ಆಗೇತಿ—(ಎನ್ನುತ್ತ ನಡೆದು ಕಟ್ಟಿಯ ಮೇಲೆ ಕೂಡ್ರುವನು. ಹಿಂದಿನಿಂದ ಕಾಳಪ್ಪನೂ ಕಂಬಳಿಯ ಒಂದು ತುದಿಗೆ ಕೂಡ್ರುವನು). ರುದ್ರಪ್ಪಾ—

ರುದ್ರಪ್ಪ :– ನಾ ಕುಂಡ್ರೋದಿಲ್ಲ, ಯೆಜ್ಜ. ನಿಂತ್ಕೆಟ್ಟೇಗೀ ಮ್ಯಾಗ ಇದರ ನಿಕಾಲೆ ಮಾಡಿ—

ಸಣ್ಣಪ್ಪಜ್ಜ :– (ಅಧಿಕಾರದ ದನಿಯಲ್ಲಿ) ಯಾಕಪಾ, ನನ್ಗೇ ಬುದ್ದೀ ಹೇಳಾಕ ಹೊಂಟಿಯಾ? ಹಾಂಗ ನಿಕಾಲೆ ಮಾಡೋದಿದ್ದರ ನಾ ಯಾಕ ಕುಂಡರಲಿ? ಕೋರ್ಟ ಐತಿ, ಕಚೇರಿ ಐತಿ–(ಎನ್ನುತ್ತ ಏಳತೊಡಗುವನು).

ರುದ್ರಪ್ಪ :– (ಓಡಿ ಬಂದು ಆವನನ್ನು ತಡೆಯುತ್ತ) ಯಲಾ–ಕೋರ್ಟನ ಮಾತು ಯಾಕ ಬಂತು?

ಸಣ್ಣಪ್ಪಜ್ಜ :– ಮತ್ತ ಆಟೊಂದು ರೌಸಿನಿಂದ್ದೇಳ್ತಿಯಲ್ಲ "ನಿಕಾಲೆ ಬೇಕು, ನಿಂತ್ಕೆಟ್ಟಗೀ ಮ್ಯಾಗ!" ಅಂತ? ಆಂ? ಏನೋ ಹಿರಿಮನಸ್ಯಾ ಅಂತ ಹೇಳ್ತೀನಿ, ಕೇಳಿದರ. ನಿಕಾಲೆ ಕೊಡೋದು ಯಾರ ಕಯ್ಯಾಗಿನ ಮಾತಪಾ? ಮ್ಯಾಗ ಕುಂತಾನ ಶಿವ ಆವ ಕೊಡ್ತಾನ ಅಶೇರಿ ನಿಕಾಲೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ರುದ್ರಪ್ಪ :– ಹಾಂಗಲ್ಲ, ಯೆಜ್ಜ. ದಿನಬೆಳಿಗ್ಯೂ ಈ ಕಾದಾಟ ಬ್ಯಾಡ, ಅದಕ್ಕೊಮ್ಮೆ ನಿಕಾಲೆ—

ಸಣ್ಣಪ್ಪಜ್ಜ :– (ಸಿಡುಮೆಯಿ) ಎಲೆ ನಿನ! ಏನಾತು ಅಂತ ಕೇಳೇ ಕೇಳ್ತೀನಿ, ಅದನ್ನೇ ಹೇಳವಲ್ಲ, ನಿಕಾಲೆ ಅಂತಾನಲೊ ? (ಬಂಗಾರೆವ್ವ ಒಂದು ಚಂಬಿಯನ್ನು ತಂದಿಡುವಳು) ಇಲ್ಲಿ ಕುಂತಗೋ ಬಾ, ನೋಡೋಣ — ನೀ ಕುಂತಗೋ ಬೇಕು ಅಂತ ನಿಕಾಲೆ ಕೊಟ್ಬೀನಿ, ಇನ್ನಾದ್ರೂ ಬಾರಪ ಮಗನ ! (ರುದ್ರಪ್ಪ ಆಸನೂಧಾನಗೊಂಡ ಪಟಪಟಾರಿ ಹುಡುಗನಂತೆ ಮೆಲ್ಲಗೆ ಬಂದು ಕಂಬಳಿಯ ಇನ್ನೊಂದು ತುದಿಗೆ ಕೂಡುವನು)..

ಬಂಗಾರೆವ್ವ :– (ನಿಂತಲ್ಲಿಯೆ ವಿನಯದಿಂದ) ಯೆಜ್ಜಾ, ಇದೆಲ್ಲಾ ಬಂದದ್ದು ದನದ ಮ್ಯಾಗಿಂದ.

ಕಾಳಪ್ಪ :– ಇರಲಿ, ಬಿಡೆ ! ನಾಳಿನಿಂದ ನಮ್ಮ ದನಾನ್ನ ಕೆರೀಗೆ ಒಯ್ದರಾತು.

ಸಣ್ಣಪ್ಪಜ್ಜ :– (ಇಬ್ಬರನ್ನೂ ಅವರವರು ಮಾತಾಡುವಾಗ ಮಿಕಿಮಿಕಿ ನೋಡಿ) ಅಲ್ಲರ್ಯೊ, ನನ್ನ ಕರಿದಿರಿ ಇಲ್ಲಿ, ಮುದುಕನ್ನ, ಸಂಜೆಗತ್ತಲಾಗ. ಯಾಕ ಅಂತ ಕೇಳೇ ಕೇಳ್ತೀನಿ, ನಿಂನಿವ್ಮೊಳಗೇ ಮಾತಾಡ್ತೀರಲ್ಲೊ ?

ನೀಲವ್ವ :– (ಬಂದು ತನ್ನ ಮನೆ ಬಾಲಿಗೆ ನಿಂತು) ಯೆಜ್ಜಾ, ನನ್ನ ಕೇಳಿದರ ಕೆಲಸ ಬ್ಯಾಡಾಗಿ ಸಿಡಿಮಿಡಿ ಮಾಡೋ ಗಂಡಸಗೋಳ ಗುದ್ದಾಟ ಇದು.

ರುದ್ರಪ್ಪ:– (ಸಿಡುಕಿನ ದನಿಯಲ್ಲಿ) ಕೆಲಸ ಬೇಕಾದೋರು ಮನ್ಯಾಗ ಕುಂದರತಾರ, ಹೀಂಗ ಕಟ್ಬೇ ಮ್ಯಾಗ ನಿಂತು ಗಂಡಸರ ಜೋಡಿ–

ಸಣ್ಣಪ್ಪಜ್ಜ :– (ಜರ್ಜದಿಂದ) ಏ ರುದ್ರ್ಯಾ– (ಅವನು ತಡೆಯಲು ಬಂಗಾರೆವ್ವನಿಗೆ) ನೀಲವ್ವಾ ಬಾಯಿ ಸತ್ತ ಗಂಡಸದು. ನೀ ನನ್ನ ಕರೆದು ತಂದಿಯಲ್ಲ—ಇದೇನೈತಿ ಪರಕರಣ ನೀ ಹೇಳ್ಬಾರ್ದ ಈ ಮುದುಕಗ ತಿಳಿಯೋ ಹಾಂಗ ?

ನೀಲವ್ವ:– ಈಗೊಂದ್ಯಾರ್ಡ ಧಿನಾ ಆತು. ಯೆಜ್ಜ, ಬಂಗಾರೆವ್ವನ ಮನೆಯೋರು ತಮ್ಮ ಎಮ್ಮೆ ಇಲ್ಲಿ ತೊಳೀಲಾಕ ಹತ್ತಿ. ನಿನ್ನೆಯೊ ಮೊನ್ನೆಯೊ–ಒಂದ್ಸೀಟ ರಾಡಿ ಆತು—

Sri Vidyabharathi Book Centre, Sringeri

CC-O. In Public Domain. Digitized by eGangotri

ರುದ್ರಪ್ಪ :– (ನಡುವೆಯೆ) ರಾಡಿ ಯಾಕ, ಛಲೋ ಮೊಳಕಾಲ್ಮಟ್ಟ ಹುದಲ ಆತು ! ಯಲ್ಲಿ ಆತು ಅಂಬೋದನ್ನ ಹೇಳಲಾ ?

ಕಾಳಪ್ಪ:– ಯೆಜ್ಜಾ, ಹೋಗಲಿ ಬಿಡು. ನಾಳಿನಿಂದ ಯಮ್ಮೀ ಕೆರೀಗೆ ಒಯ್ತೀನಿ.

ಸಣ್ಣಪ್ಪಜ್ಜ:– (ಚಕಿತನಾಗಿ) ಅಲ್ಲ ಯಮ್ಮಿ ತೊಳೆಯೋದೇನು ? ಒಬ್ಬರೊಬ್ಬರ ಮ್ಯಾಗ ಗುದ್ದಲಿ ಯೆತ್ತೋದು ಏನು ? ಮಾತಿಗೆ ಮಾತು ಸಮ್ಮಂದ ಇಲ್ಲಲೊ ?

ಬಂಗಾರೆವ್ವ:– ಯೆಜ್ಜಾ, ತಪ್ಪ ನವ್ವೇ ಆತನ್ನು. ಒಂತುಸಾ ಯಮ್ಮಿ ದೂರ ನಿಂದರಿಸಿ ನೀರು ಉಗ್ಗಬೇಕು ಅಂದ್ರ, ತೆಪ್ಪಿ ಯಮ್ಮಿ ಅವರ ಕಟ್ಟೆ ಹತ್ತೀಲೆ ನಿಂತ್ಯು, ಉಗ್ಗಿದ ನೀರಿನ ರಾಡಿ ಆತು ಅವರ ಮನೇ ಮುಂದ–

ನೀಲವ್ವ– ಇರಲಿ ಬಿಡೆ ! ನಾವೇನು ಕಾಲಾಗ ರೇಶಿಮೆ ಕೆರವು ಹಾಕ್ಕೊಂಡು ತಿರಗತೀವೆ–ಏನ್ ನೀರು ಒಣಗೋದೇ ಇಲ್ಲ–?

ಸಣ್ಣಪ್ಪಜ್ಜ:– ಅಲ್ಲರೊ, ಹುಚ್ಚುಗೊಟ್ಟಿಗೋಳಾ, ಮನಿ ಮುಂದ ಹರೀ ಯಾಕ ಕೆದರಾಕ ಹತ್ತೀರಿ ಆಂತ ?

ನೀಲವ್ವ:– (ಕೆಣಕುವ ಮುಗುಳ್ನಗೆಯಿಂದ) ರಾಡಿ ಆಗಬಾರದು, ನೀರು ಹರಿದು ಹೋಗ್ಬೇಕು ಆಂತ.

ಸಣ್ಣಪ್ಪಜ್ಜ:– (ಮತ್ತೆ ಚಕಿತನಾಗಿ) ಹಾಂಗಿದ್ದರ ಒಬ್ಬರೊಬ್ಬರ ಮ್ಯಾಗ ಮಸಡಿ ಯಾಕ ಉಬ್ಬಸಬೇಕಾಗಿತ್ತು ?

[ಇಬ್ಬರೂ ಗಂಡಸರು ಸುಮ್ಮನಿದ್ದು ತಲೆ ಕೆಳಗೆ ಮಾಡಿಕೊಂಡು ಕೂಡ್ರುವರು. ಇಬ್ಬರೂ ಹೆಂಗಸರು ಒಬ್ಬರೊಬ್ಬರನ್ನು ನೋಡಿ ನೋಡಿ ಕೊನೆಗೆ ತಡೆಯದಂತಾಗಿ ನಗುವರು. ಸಣ್ಣಪ್ಪಜ್ಜನು ಕೆಚ್ಚಾಪನನಂತೆ ಇಬ್ಬರು ಹೆಂಗಸರನ್ನು ಮಿಕಿ ಮಿಕಿ ನೋಡುವನು.]

ನೀಲವ್ವ:– (ನಗೆ ತಡೆದು) ಒಂದೀಟ ಮುಂಚೆ ಬಂದು ನೋಡ್ಬೇಕಾಗಿತ್ತು– (ಮತ್ತೆ ನಗೆ).

Sri Vidyabharathi Book Centre, Sringeri

CC-O. In Public Domain. Digitized by eGangotri

ಬಂಗಾರೆವ್ವ:– (ನಗೆ ತಡೆಯುತ್ತಲೆ) ಒಂದು ಜೆರಿಗೀ ನೀರ ತಾ ಅಂತ ಅವರು, ಒಂದ್ಕೊಡ ನೀರ ತಾ ಅಂತ ಇವರು–

ಸಣ್ಣಪ್ಪಜ್ಜ:– (ಮೇಲಿನಂತೆಯೆ) ಜೆರಿಗೆ ? ಕೊಡ ?

ನೀಲವ್ವ:– (ಪೂರ್ತಿಯಾಗಿ ನಗೆ ತಡೆದು) ಯೆಜ್ಜಾ, ಖರೇ ಹೇಳೋದಂದ್ರ ಇಬ್ಬರೂ ತೆಲಿ ಕೆಟ್ಟೋರ ಹಾಂಗ ಮಾಡಿದರು. ಈ ಹರಿ ಅದಾವಲ್ಲ–ಇಕ– ಒಂದು ನಮ್ಮ ಮನೀಯಿಂದ ನೆಟಾಕ ಅಲ್ಲೀ ಮಟ ಹೊಂಟೀತಿ, ಇನ್ನೊಂದು ಆ ಮನೀಲಿಂದ ಈ ಕಡೆ ಹಣಿಕೆ ಹಾಕೇತಿ. ಇದು ಯಾಕಂತೀ ಯೆಜ್ಜಾ ?

ಸಣ್ಣಪ್ಪಜ್ಜ:– ಅದೇ ಗುಂಬಗೂಡಾರ್ತ ಆಗೇತಿ ಅಂತ ಕೇಳಾಕ ಹತ್ತೀನಿ.

ನೀಲವ್ವ:– ಆದರ ಮಸಲತ್ತಂದ್ರ—

ರುದ್ರಪ್ಪ:– (ಒಮ್ಮೆಲೆ) (ಪಿಟ್ಟನಿಂದ ಹೆಂಡತಿಗೆ) ಎಲೆ – ಸುಮ್ಮ ಕೂಡಾಕೊ!

ಕಾಳಪ್ಪ:– (ಸಣ್ಣಪ್ಪಜ್ಜನಿಗೆ) ಬಿಡು, ಯೆಜ್ಜಾ, ಅದೇನ್ಮಾಡ್ತೀ ?

ಬಂಗಾರೆವ್ವ:– ತಿಳೀಲಿ ಯೆಜ್ಜಗ ಮನೀ ಗಂಡಸರ ಶಾಣೇತನ.

ನೀಲವ್ವ:– ನನ್ನ ಮ್ಯಾಗ ಯಾಕ ಸುಮ್ಮುಮ್ಮಕ ಗಂಟಲಾ ಹರ ಕೊಂಬೋದು ? ಯೆಜ್ಜ, ನಾಳಿನಿಂದ ನಾನೂ ಬಂಗಾರೆವ್ವನೂ ತಂತಂದು ನಮ್ಮ ಮನೀ ಮುಂದ ನೀರು ಸುರುವಾಕಬೇಕಂತ—

ಸಣ್ಣಪ್ಪಜ್ಜ:– (ಹತಾಶನಂತೆ ತಲೆಯನ್ನಲ್ಲಾಡಿಸುವನು)

ನೀಲವ್ವ:– ಅಂದ್ರ ನಂ ನೀರು ಅವರ್ಮನೇ ಮುಂದ, ಅವರ್ನೀರು ನಮ್ಮ ಮನೇಮುಂದ ಕೆರೀ ಹಾಂಗ ನಿಂತುಕೋಬೇಕಂತ.

[ರಹಸ್ಯ ಹೊರಬಿದ್ದುದಕ್ಕೆ ಆವೇಶ ಮುಗಿದಂತಾಗಿ ಒಂದು ನಿಮಿಷ ಎಲ್ಲರೂ ಸ್ತಬ್ಧರಾಗಿ ಕೂಡ್ರುವರು. ಕೊನೆಗೆ ಸಣ್ಣಪ್ಪಜ್ಜ 'ಮಂ' ಎಂದು ಉದ್ಗವಾಗಿ ಪನಿಯೆನ್ನೆಳೆದು–]

ಸಣ್ಣಪ್ಪಜ್ಜ.– (ಇಬ್ಬರೂ ಹೆಂಗಸರಿಗೆ) ಅಂದ್ರ ? ನೀವು ನೀರ ತಂದು ಸುರುವುವೋರಿದ್ರಿ ಅನ್ನು?

Sri Vidyabharathi Book Centre, Sringeri

CC-O. In Public Domain. Digitized by eGangotri

ನೀಲವ್ವ:– ಅಯ್ಯ ! ಊರಿಗೆ ಹರದಾರಿ ಕೆರೀ ಐತಿ–ಕುಂತು ಬಾಯೀಲೆ ಹೇಳೋ ಗಂಡಸಿಗೇನು ಗೊತ್ತು ?

ಸಣ್ಣಪ್ಪಜ್ಜ:– ಹುಂ.... (ಏಳುತ್ತ) ಆವೆರಡೂ ಗುದ್ದಲಿ ತರ್ರಿ ಇಲ್ಲಿ.

ರುದ್ರಪ್ಪ:– | (ತಿಳಿಯದೆ) ಆಂ ?
ಕಾಳಪ್ಪ:– | ಏನಂದೆಜ್ಜ ?

ಸಣ್ಣಪ್ಪಜ್ಜ:– (ಎದ್ದು ನಿಂತು) ಆವೆರಡೂ ಗುದ್ದಲಿ ಕೊಡ್ರಿ ನನ್ನ ಕೈಯಾಗ ಅಂದೆ ?

ಕಾಳಪ್ಪ:– (ಇನ್ನೂ ತಿಳಿಯದೆ) ಯಾಕ, ಯೆಜ್ಜಾ:

ಸಣ್ಣಪ್ಪಜ್ಜ:– ಯಾಕಂದ್ರೇನು ? ಊರಿಗೆ ಹಿರಿ ಮನಸ್ಯಾ ಆದ ತಪ್ಪಿಗೆ ಹೊತ್ತುಗೊಂಡು ಹೋಗ್ತೀನಿ ಅವನ್ನ.

ರುದ್ರಪ್ಪ:– (ಇನ್ನೂ ತಿಳಿಯದೆ) ಅಂದ್–ರ್–

ಸಣ್ಣಪ್ಪಜ್ಜ:– (ಒಟ್ಟಿನಂದ) ಆಂದ್ರೇನಂದ್ರ ? ನೀವೇನು ಮನಸ್ಯಾರ ಎಲ್ಯಾದ್ರೂ ! ರಾತ್ರಿ ಸರಿಹೊತ್ತಿನಾಗ ಒಬ್ಬರೊಬ್ಬರ ತಲೆ ಜಜ್ಜೋ ಆವರು (ತಿರಸ್ಕಾರದಿಂದ) ಥೂ ನಿಮ !

ರುದ್ರಪ್ಪ:– (ಒಮ್ಮೆಲೆ ಎದ್ದು ಅತ್ಯಂತ ಪಶ್ಚಾತ್ತಾಪದಿಂದ) ಯೆಜ್ಜಾ, ಬಾಯೊಳಗ ಕಡ್ಡಿ ಇಟ್ಟುಕೊಂಡು ಹೇಳ್ತೀನಿ. ಇದು ತಪ್ಪಾಯ್ತು–ಮರೆತು ಬಿಡು ನೀನು. ಬೇಕಾದ್ರ ನಾಳೆ ಬೆಳಕು ಹರಿಯೋದ್ರೊಳಗ ಬಂದು ನೋಡು ಇದನ್ನ ಮುಚ್ಚಿ ಬಿಟ್ಟಿರ್ತೀನಿ.

ಸಣ್ಣಪ್ಪಜ್ಜ:– ಯಾಕಪ, ಕಾಳಪ್ಪಾ ?

ಕಾಳಪ್ಪ:– ಆಗೇ ಹೇಳಿದೆನಲ, ಯೆಜ್ಜ, ನಾಳಿನಿಂದ ಯಮ್ಮೀನ ಕೆರೀಗೆ ಒಯ್ತೀನಿ ಅಂತ. ಕರೇವಂದ್ರ– (ತಡೆದು ಹೆಂಡತಿಯನ್ನು ನೋಡುವನು).

ಸಣ್ಣಪ್ಪ:– ಯಾಕವಾ, ಬಂಗಾರೆವ್ವ ? ಮತ್ತೇನೈತಿ ?

ಬಂಗಾರೆವ್ವ:– ಕೆರ್ಯಾಗ ಯಮ್ಮೀ ತೊಳೀಬ್ಯಾಡ ಅಂತ ನಾನೇ ಹೇಳಿದ್ದಿನಿ, ಯಜ್ಜ.

Sri Vidyabharathi Book Centre, Sringeri

CC-O. In Public Domain. Digitized by eGangotri

ನೀಲವ್ವ:– ಅಂದಾಂಗ ಅದೂ ಐತಿ ಮಾತು. ಹಾಂಗ ಕೇಳಿದ್ರ ಊರ ಹೆಂಗಸರೆಲ್ಲಾ ಹೇಳ್ತಾರು ಆ ಮಾತು. ಅದರ ಗಂಡಸರೊಂದು ಕೇಳ ಬೇಕಲ್ಲ ?

ಸಣ್ಣಪ್ಪಜ್ಜ:– ಮತ್ಯಾವ ಮಾತ ತಂದೆ ಬೇ, ನೀಲಿ ?

ನೀಲವ್ವ:– ನಂದೊಬ್ಬಾಕೇದೇ ಮಾತಲ್ಲ, ಯಜ್ಜ. ಕೆರೀಗೆ ಬರೋ ಬೇಕಾದ ಹೆಣ್ಮಗಳನ್ನ ಕೇಳು. ಅದ್ಯಾಕ ? ಬೇಕಾರ ಬಂಗಾರೆವ್ವನ್ನೇ ಕೇಳು, ನಾ ಒಂಧಿನಾ ನೋಡೀನಿ ಆಕೆ (ಕೈಗಳಿಂದ ತೋರಿಸುತ್ತ) ಹೀಂಗ ಹೀಂಗ ಕಲಕ ವಾರಿ ಮಾಡಿ ಕೊಡ ತುಂಬಿಕೋದನ್ನ.

ಸಣ್ಣಪ್ಪಜ್ಜ:– ಎಲೆ ನಿನ ! ಅದೇನೈತಿ ಅದನ್ನ ಹೇಳ್ಬೇಕೋ, ಸುಮ್ಮುನ್ನೆ ಅವರ್ನ ಕೇಳು, ಇವರ್ನ ಕೇಳ್ ಅಂತ–

ಬಂಗಾರೆವ್ವ:– (ನಡುವೆಯೆ) ಕುಡ್ಯಾಕೂ ಕೆರೀ ನೀರೇ ತರ್ಬೇಕಾ ನೈತಿ, ಅದಕ ಯಮ್ಮೀ ಕೆರ್ಯಾಗ ತೋಳೀಬ್ಯಾಡ ಅಂತ–

ನೀಲವ್ವ:– ನನ್ನ ಕೇಳಿದ್ರ ಬರೇ ಯಮ್ಮಿ ಯಾಕ–

ರುದ್ರಪ್ಪ:– (ನಡುವೆಯೆ ಸಿಟ್ಟಿನಿಂದ) ಅಂದ್ರ ? ಜಳಕ ಯಲ್ಲಿ ಮಾಡ್ಬೇಕಂತೀ ?

ನೀಲವ್ವ:– (ಸಿಟ್ಟಿನ ಪನಯಲ್ಲಿಯೆ) ಅಯ್ಯ– ಏನ್ ಧಿನಾ ಜಳಕಾ ಮಾಡೋರ ಹಾಂಗೇ ನನ್ಮ್ಯಾಗ ಹರೀಹಾಯ್ತಾನ ? ನಾಯೇನಂತೀನಿ ?

ಸಣ್ಣಪ್ಪಜ್ಜ:– (ನಗುತ್ತ) ಬರೇ ಯಮ್ಮಿ ಯಾಕ, ಕ್ವಾಣಾನೂ ತೊಳಿ ಅಂತೀ, ಅದ್ಮ ರುದ್ರ್ಯಾಗ ಸಿಟ್ಟು ಬಂತು. ಅಲ್ಲೇನೋ ಮಗನ ? ಹಾಂ ? ಹಹಹ !

(ಎಲ್ಲರೂ ನಗುವರು)

ಬಂಗಾರೆವ್ವ:– ಅದಕ ಯೇನಾದ್ರೂ ಯವಸ್ತಾ ಮಾಡಿದರ–

ನೀಲವ್ವ:– ಇಲ್ಲಾ ಅಂವ್ಸೇನ ತಾಯೀ ! ಯಮ್ಮೀನು ತೊಳೆಯೋದು, ಜಳಕಾನೂ ಮಾಡೋದು, ಉಗಳೋದು, ಖ್ಯಾಕರಿಸೋದು– ಮೆಯ್ ವೊನ್ಮೊಮ್ ಮಾಡಿ ಬಂತೀನಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಣ್ಣಪ್ಪಜ್ಜ:– ತಿಳೀತು ಬಿಡು. ಹ್ಯಾಂಗಾದ್ರೂ ಇವ್ಯಾರ್ದೂ ಕುಳ ಜಿದ್ದಿಗೆ ಬಿದ್ದು ಗುದ್ದಲಿ ಹಿಡಿದಾವು, ಇವಕ ಬುದ್ದಿ ಬರೋದ್ರಾಗ ಒಂದು ಭಾವೀನೇ ಆಗಿಸಿ ಬಿಡೋಣ ಅಂತೀಯಲ್ಲೊ ?

ರುದ್ರಪ್ಪ:– (ಸಿಡುಕಿನ ದನಿಯಲ್ಲಿ) ಹೆಂಗ್ಸರ ಮಾತು ! ಆದ್ನೇನ್ಯಾಡ್ತೀಯೇಳಜ್ಜ.

ನೀಲವ್ವ:– (ಅದೇ ದನಿಯಲ್ಲಿ) ಹೆಂಗ್ಸರ ಮಾತಂದ್ರ? ಥಿನಾ ನೀರ ತರಾಕ ಹೋಗೋ ಹೆಂಗ್ಸರಿಗೇ ಗೊತ್ತದು?

ಸಣ್ಣಪ್ಪಜ್ಜ:– ಅಂದ್ರ? ಕರೀನೇ ಏನಾದ್ರೂ ಮಾಡ್ಬೇಕೂ ಅಂತೀರೊ–

ನೀಲವ್ವ:– | ಮಾಡಾಕೇ ಬೇಕು.
ಬಂಗಾರೆವ್ವ:– | ಗಂಡಸರು ಕೂಡಿ ಮಸಲತ್ತು ಹಾಕಿದರ–

[ಸಣ್ಣಪ್ಪಜ್ಜ ವಿಚಾರದಲ್ಲಿ ತೊಡಗುವನು. ಅಷ್ಟರಲ್ಲಿ ದೂರದಿಂದ ದನ ಕಾಯುವವನ ಹಾಡು ಕೇಳಬರುವುದು. ಉಳಿದವರ ಲಕ್ಷ್ಯ ಆ ಕಡೆ ಹೋದರೂ ಸಣ್ಣಪ್ಪಜ್ಜ ಒಂದು ನಿಮಿಷ ತನ್ನ ವಿಚಾರದಲ್ಲಿಯೆ ಮಗ್ನನಾಗಿರುವನು. ದನಗಾಹಿಯ ಹಾಡಿನತ್ತ ಅವನದೂ ಲಕ್ಷ್ಯ ಹೋಗಿ ಒಮ್ಮೆಲೆ ಏನೋ ಹೊಳೆದಂತೆ ಸೂಚಿಸಿ–]

ಸಣ್ಣಪ್ಪಜ್ಜ:– ಸಂಗ್ಯಾ– ಏ ಸಂಗಪ್ಪಾ– ಸಂಗಪ್ಪಾವ್ವೋ– (ಎಂದು ಕೂಗಲು ದನಿಗಾಹಿಯ ಹಾಡು ತಡೆಯುವುದು) ಸಂಗ್ಯಾ– [ದನಗಾಹಿ:– (ಒಳಗಿನಿಂದಲೆ) ಬಂದೆನೋ, ಯಜ್ಜ. ಎಂದು ಕೂಗಿ ಹೇಳುವನು. ತುಸು ಹೊತ್ತು ಎಲ್ಲರೂ ಹಾಗೇ ನಿಲ್ಲುವರು. ದನಗಾಹಿಯು ದನಗಳನ್ನು ಸರಿಯಾಗಿ ಹೋಗಲು ಪ್ರೇರಿಸುವಂತೆ ಮಾಡುತ್ತಿರುವ ಸದ್ದು ಹತ್ತಿರಹತ್ತಿರವಾಗಿ ಕೇಳಬರುವುದು. ಅಷ್ಟರಲ್ಲಿ ಆಗಾಗ ಹಿಂತಿರುಗಿ ನೋಡುತ್ತ ದನಗಾಹಿಯೂ ಬರುವನು. ರಂಗಭೂಮಿಯ ಮೇಲೆ ಎರಡು ಹೆಜ್ಜೆಗಳಿಟ್ಟವನೆ– 'ಏ–ಏ' ಎಂದು ಹೆದರಿಸುತ್ತ ಮತ್ತೆ ಒಳಗೆ ಧಾವಿಸುವನು. ಆಮೇಲೆ ಪಾರಕೋಲಿನ 'ಚಟ್, ಚಟ್' ಕೇಳಬರುತ್ತದೆ. ಕೊನೆಗೆ ಅಧಿಕಾರವನ್ನು ಸಫಲವಾಗಿ ನಡೆಸಿದವನಂತೆ ಬರುತ್ತ– "ಹಾಂ ಹೀಂಗ" ಎನ್ನುತ್ತ ರಂಗಭೂಮಿಯ ಮೇಲೆ ನಡೆದು ಬರುತ್ತ " ದನದ ಜಾತಿ, ಹೆಣ್ಣಿನ ಜಾತಿ. ತುಸಾ ನಜರ ತಪ್ಪಿಪ್ರ ಅಡ್ಡ ಹಾದೀನೇ ಹಿಡೀತೇತಿ " ಎನ್ನುತ್ತ ರಂಗಭೂಮಿಯ ಮೇಲೆ ಬರುವನು. ಅವನ ಮಾತಿಗಾಗಿ ಮಿಕ್ಕ ಮುವ್ವರು ಗಂಡಸರ ಮುಖದ ಮೇಲೆ ಮುಗುಳ್ನಗೆ ಮೂಡುವದು. ಬಂಗಾರೆವ್ವ ಗಾಂಭೀರ್ಯದ ಮುದ್ರೆಯನ್ನು ತ್ಯಾಗುನಳ್ಳು. ಆದರೆ–)

Sri Vidyabharathi Book Centre, Sringeri

CC-O. In Public Domain. Digitized by eGangotri

ನೀಲನ್ನ:– (ಅಸಹ್ಯವೆನಿಸಿದಂತೆ ಸೂಚಿಸಿ, ಗೊಣಗುವ ದನಿಯಲ್ಲಿ) ಅವನ್ನ ಬೆನ್ನ ಹತ್ತಿ ತಾನೂ ಅಧಾದೀ ಬೀಳೋ ಗಂಡಸಿದು !

ಸಂಗ:– (ಅವಳ ಮಾತಿಗೆ ಲಕ್ಷ್ಯವಿಲ್ಲದೆ) ಯೆಜ್ಜಾ, ಕರೆದೇನನ್ನ ?

ಸಣ್ಣಪ್ಪಜ್ಜ:- (ಹಿರಿತನದಿಂದ) ಪ್ಯಾಟೀವಳಗ ಹಾಯ್ದೋ ಹೋಗ್ತೀಯಲ್ಲ, ಸಂಗ್ಯಾ ?

ಸಂಗ:– ಹಾಂಗಂದ್ರ ಹಾಂಗೇ ಹೋಗ್ತೇನಿ– ನನ್ಗೇನು ? (ಒಳಗೆ ಪೂರದತ್ತ ನೋಡಿ) ಏ– (ಎಂದು ದನಗಳನ್ನು ಹೆದರಿಸಿದಂತೆ ಮಾಡಿ) ನೋಡಿದ್ಯಾ–

ಸಣ್ಣಪ್ಪಜ್ಜ:– (ನಡುವೆಯೆ) ಇಕ ! ಪ್ಯಾಟ್ಯಾಗ ಬೆಟ್ಟಿಯಾಗೋ ಜನಕ್ಕೆಲ್ಲ ಹೇಳ್ಬಿಡು– ನಾಳೆ ಹೊಂತುಟಲೆ ಕೆರೀಕಡಿಂದ ಬರೋವಾಗ ದೊಡ್ಡ ಹುಣಚೀ ಗಿಡದ ಕೆಳಗ ಜಮಾಯಿಸಬೇಕು ಎಲ್ಲಾರೂ, ಸಣ್ಣಪ್ಪಜ್ಜ ಹೇಳ್ಯಾನ ಅಂಥೇಳು.

ಸಂಗ:– (ರುದ್ರ ಕಾಳರನ್ನು ನೋಡಿ ಸಂಶಯದ ದನಿಯಲ್ಲಿ) ಏನಾರೆ ಪ್ರಸಂಗ ಪಂಚಾಯತಿಗೆ ಬಂದೇತೇನು ?

ರುದ್ರಪ್ಪ:– (ಸಿಡುಕಿನ ದನಿಯಲ್ಲಿ) ಹುಂ ಬಂದೇತಿ. ದನ ಕಾಯೋ ಲಫಂಗರ ಹಾವಳಿ ಭಾಳ ಆಗೇತಿ ಅಂತ ಕೆರೆಗೆ ಹೋಗೋ ಹುಡುಗೇರು ತಕರಾರು ಮಾಡ್ಯಾರ–

ಸಂಗ:– (ಸಿಟ್ಟಿನಿಂದ) ಅಬ್ಬಬ್ಬ ! ಬಿಟ್ಟಿಡು ಈ ಆಟಾನ್ನ. ಏನು ನೋಡೋ ಮಕಾನೂ ಅಂಥಾವ ಅವ !

ಸಣ್ಣಪ್ಪಜ್ಜ:– (ಅಧಿಕಾರದಿಂದ) ಏ ಹುಚ್ಕೊಟ್ಟಿ ! ಹೇಳಿದಕಟ ಮುನ್ನೋಡಿ ಮಾಡ್ಹೋಗು ! ಮರೀಬ್ಯಾಡ.

ಸಂಗ:– (ದೂರದತ್ತ ನೋಡಿ, ದರ್ಪದ ದನಿಯಲ್ಲಿ) ಏ-ಏ ! ಥೂ ಇದರ ಮಂಜಾಳಾ ! (ಹೊರಡುತ್ತ) ಕಾಲ ಕೆದರಿ ಜಗಳಾ ತಗೀತದಲ್ಲೋ ಮನಸ್ಯಾರ ಹಾಂಗ ! (ಮುಂದೆ ನೋಡುತ್ತ ನಡೆದು) ಏ ದೂರಾಗ್ರೆವ್ವೊ– ಹೋರಿ ಇರಿದಾಡ ತಾವು.(ಒಮ್ಮೆಲೆ ತಿರುಗಿ ನಿಂತು) ಹೇಳ್ತೀನಿ, ಯೆಜ್ಜ....ಹುಂ–ತಂತಂ ಹೆಂಡಂದ್ರಿನ್ನ ಅಳುವಿನಾಗ ಇಟ್ಟುಗೋಳಾರದ ಇರಕಳೆ ಜಾತೀ ಗಂಡಸು! (ಎನ್ನುತ್ತ ಓಡುವನು)

[ತುಸು ಹೊತ್ತು ರಂಗಸ್ಥಲದಲ್ಲಿ ಯಾರೂ ಮಾತನಾಡುವುದಿಲ್ಲ]

Sri Vidyabharathi Book Centre, Sringeri

 CC-O. In Public Domain. Digitized by eGangotri

ಸಣ್ಣಪ್ಪಜ್ಜ:– (ಹೊರಡುತ್ತ) ನಾಳೆ ಮುಂಜಾಳೆ–

ಕಾಳಪ್ಪ:– (ನಡುವೆಯೆ) ಸಬಾ ಕೂಡಿಸ್ತೇನು, ಯೆಜ್ಜ ?

ಸಣ್ಣಪ್ಪಜ್ಜ:– (ತಡೆದು ನಿಂತು) ....ಆಂ ?ಸಬಾನ?....ಯಾಕ ?

ಕಾಳಪ್ಪ:– ಅಲ್ಲ–ಅಂದ್ರ–ಆ ಕುಲಕರ್ಣೇರ ಹುಡುಗನ್ನೂ ಕರೆಯಿಸ್ತೇನು ಅಂತ.

ಸಣ್ಣಪ್ಪಜ್ಜ:– (ನಕ್ಕು) ಅವನ್ನ ಕರಿಸೋದ ? ನಾಕಮಂದಿ ಕೂಡಿದರ ಅವನಿಗೆ ವಾಸನೀನೆ ಹತ್ತೇತಿ, ಬೆಲ್ಲಕ ಇರುವೆ ಬಂಧಾಂಗ ಬರ್ತಾನ. ಕರಿಸೋದಂತ ? ಅವನ್ನ ತಪ್ಪಸಾಕ ಪಂಚಿಕಿ ಇದ್ರ ಹೇಳು.

ನೀಲವ್ವ:– ಭಾರೀ ಮಾತಾಡ್ತೇತಿ ಅದೂ ಹುಡುಗ !

ರುದ್ರಪ್ಪ:– ಕೆಲಸ ಇಲ್ಲೋರ ಚಟಾನೇ ಅದು, ಹೆಣ್ಣಿನ್ಹಾಂಗ.

ಸಣ್ಣಪ್ಪಜ್ಜ:– (ನಕ್ಕು) ಇನ್ನಾದರೂ ಕೆಲಸ ಮಾಡಾಕ ಹೋಗ ಬೇ, ನೀಲೀ.

(ನೀಲವ್ವನನ್ನು ಬಿಟ್ಟು ಎಲ್ಲರೂ ನಗುವರು)

ನೀಲವ್ವ:– (ಸಿಡುಕಿನ ಧನಿಯಲ್ಲಿ) ಮಾಡಬಾರ್ದ ಕೆಲಸ ಮಾಡೋ ಚಟ ಗಂಡಸಿದ್ದೇನೊ ? (ಗೊಣಗುತ್ತ ಹೋಗುವಳು)

[ಸಣ್ಣಪ್ಪಜ್ಜ ನಗುತ್ತ ಹೊರಟು ಹೋಗುವನು. ರುದ್ರಪ್ಪ–ಕಾಳಪ್ಪ ಒಂದು ನಿಮಿಷ ಒಬ್ಬರನ್ನೊಬ್ಬರು ನೋಡುವರು. ಆ ಮೇಲೆ ಮೆಲ್ಲನೆ ಒಬ್ಬನು ಚಿಲುಮೆಯನ್ನೂ ಇನ್ನೊಬ್ಬನು ಕಡ್ಡಿಪೆಟ್ಟಿಗೆಯನ್ನೂ ಹೊರ ತೆಗೆವರು. ಚಿಲುಮೆಯನ್ನು ಹೊತ್ತಿಸಿ ಒಂದು ಜುರಿಕೆಯನ್ನು ಹೊಡೆದು ಇನ್ನೊಬ್ಬನಿಗೆ ಕೊಡುವನು. ಇನ್ನೊಬ್ಬನು ಜುರಿಕೆ ಹೊಡೆಯುವಾಗ—)

(ತೆರೆ)

CC-O. In Public Domain. Digitized by eGangotri

ದೃಶ್ಯ ೨.

[ಮರುದಿನ-ಬೆಳಗಿನ ಮೂರು ತಾಸು ಹೊತ್ತೇರಿದೆ. ಹಿಂದಿನ ದೃಶ್ಯದಲ್ಲಿ ಸೂಚಿಸಿದೆ ಹುಣುಸೆ ಮರದ ದೊಡ್ಡಗಲ ಬೊಸ್ಸೆ ನೂತ್ರ ಮೇಲೇರಿ ನಿಂತ ಗಿಡವನ್ನು ಸೂಚಿಸುತ್ತಿದೆ. ರಂಗಭೂಮಿಯ ಮಧ್ಯಭಾಗದಲ್ಲಿ ಗಿಡದ ಸುತ್ತಲೂ ಒಂದಾನೊಂದು ಕಾಲದಲ್ಲಿಯ ಕಟ್ಟಿಯ ಅವಶೇಷ ನೆಲದಿಂದ ನಾಲ್ಕಾರಂಗುಲ ಎತ್ತರವಾಗಿ ನಿಂತಿದೆ. ಕೆಲವೆಡೆ ಕಟ್ಟಿಗಾಗಿ ಕಟ್ಟಿದ ಕಲ್ಲುಗಳು ಉರುಳಿ ಬಿದ್ದಿವೆ. ಹಿಂದೆ ತುಸು ದೂರದಲ್ಲಿ ಕೆರೆಯ ಒಡ್ಡು ಇದೆ ಎಂದು ತಿಳಿಯತಕ್ಕದ್ದು-ಶಕ್ಯವಾದರೆ ಸೂಚಿಸತಕ್ಕದ್ದು. ತೆರೆ ಎದ್ದಾಗ ರಂಗಸ್ಥಲದಲ್ಲಿ ಯಾರೂ ಇಲ್ಲ. ಒಂದೆರಡು ನಿಮಿಷಗಳ ತರುವಾಯ ಹಿಂದಿನಿಂದ ಮೊದಲು ಬಾರಕೋಲಿನ ಚಟ್ ಚಟ್ ಸದ್ದುಗಳು ಕೇಳಬರುವವು. ಆ ಮೇಲೆ ಸಂಗನು ದನಗಳನ್ನು ಹೆದರಿಸುವ ಕೂಗುಗಳು ಕೇಳಬರುವವು; ಕ್ರಮೇಣ ಸಂಗನಿಗೆ ಸಮಾಧಾನವಾದಂತೆ ಕೂಗುಗಳಿಂದ ಸೂಚಿಸಬೇಕು; ಮತ್ತೆ ಎಲ್ಲವೂ ಶಾಂತ. ಇಷ್ಟರಲ್ಲಿ ಎಡಬದಿಯಿಂದ ರಾಮಣ್ಣ ಬರುವ; ಹಿಂದಿನ ದೃಶ್ಯದಲ್ಲಿ ಸೂಚಿಸಿದ ಕುಲಕರ್ಣರ ಹುಡುಗ ಇವನೇ. ಇವನು ಬರುವ ವೇಳೆಗೇ ಹಿಂದಿದ್ದ ಕೆರೆಯ ಕಡೆಯಿಂದ ನೀಲಸ್ಪ ಮತ್ತು ಬಂಗಾರೆಸ್ಪ ಮಣ್ಣು ಕೊಡಗಳನ್ನು ತಲೆಯ ಮೇಲಿಟ್ಟುಕೊಂಡು ಬಲಬದಿಯಿಂದ ಒಳಗೆ ಹೋಗುವರು. ಆ ಸಮಯಕ್ಕೆ ಸಂಗನು ಸೂಚಕವಾಗಿ ರಾಗ ಎಳೆದು ನುಡಿವ ಹಾಡಿನ ಸದ್ದು ಕೇಳುವುದು. ಆ ಸದ್ದನ್ನು ಕೇಳಿದ್ದಕ್ಕೂ ರಾಮಣ್ಣ ರಂಗಸ್ಥಲದ ನಡುವಿಗೆ ನಡೆಯುತ್ತ ಬರುವುದನ್ನು ನೋಡಿದ್ದಕ್ಕೂ ಇಬ್ಬರೂ ಪೆಂಗಸರು ಗಾಂಭೀರ್ಯವಹಿಂದ ಸೆರಗನ್ನೆಳೆದುಕೊಂಡು ಕೆಳಗೆ ನೋಡುತ್ತ ಹೋಗುವರು. ರಾಮಣ್ಣ ಆವರಿಬ್ಬರನ್ನೂ ಮರೆಯಾಗುವವರೆಗೆ ನೋಡಿ-ಆ ಮೇಲೆ ಸಂಗನ ಹಾಡು ಕೇಳಿ ಬಂದ ಕಡೆ ನೋಡುತ್ತ]

ರಾಮಣ್ಣ:-ಏ-ಸಂಗ್ಯಾ, ಸಂಗಪ್ಪಾವ್ರೋ-ಸಂಗ್ಯಾ- (ಹಾಡು ತಡೆಯುವದು)

ಸಂಗ್ಯಾ-(ಒಳಗಿನಿಂದ) ಏನಪ್ಪೋ, ರಾಮಣ್ಣಾ

Sri Vidyabharati Book Centre, Sringeri

CC-O. In Public Domain. Digitized by eGangotri

ರಾಮಣ್ಣ :– (ಅಧಿಕಾರದ ದನಿಯಲ್ಲಿ) ದನದ ಜೋಡಿ ಇದ್ಕೊಂಡು ನಿನ್ನ ಬುದ್ಧೀನೂ ದನದ ಬುದ್ಧಿ ಆಯ್ತೇನೋ ?

ಸಂಗ್ಯಾ :– (ತುಸು ಹೆದರಿದ್ದನ್ನೂ ತೋರಿಸಬಾರದೆಂಬ ಯತ್ನದಲ್ಲಿ) ಇಲ್ಲಪ್ಪ, ರಾಮಣ್ಣಾ, ಬರೋ ಜಾತ್ರೀಯಾಳೇಕ ಆಡೋ ನಾಟಕದಾಗ ನನ್ನೂ ಒಂದು ಪಾರ್ಟ ಐತಿ, ಹಾಡು ಅಂದಕೋತಿದ್ದೆ—

ರಾಮಣ್ಣ :– (ಸಕ್ಕು) ಆದಕಲ್ಲೊ ನಾ ಅಂದದ್ದು ! ನಿನ್ನ ಪಾರ್ಟು, ನಿನ್ನ ಹಾಡು ! ರಾಧಾ ನಾಟದಾಗ ಕೃಷ್ಣನ ಪಾರ್ಟ ಇದ್ಹಾಂಗ ಕಾಣ್ತಾದ ನಿನ್ದು ? (ಸಂಗ್ಯಾನ ಮುಖದ ಮೇಲೆ ನಾಚಿದ ಮುಗುಳ್ನಗೆ) ಅಲ್ಲೊ, ಮಗನ, ಎಲ್ಲಾ ಜನ ಇಲ್ಲಿ ಬರ್ತದ ಹೊಂತುಟಲೆ, ಏನೋ ಮಸಲತ್ತ ನಡೆಧಾಂಗ ಕಾಣ್ತಾದ, ನಿನ್ನ ಕರೀಬಾರ್ದಂತ ಮಾಡ್ಯಾರ, ರಾಮಣ್ಣಾ" ಅಂತ ಏನೇನೊ ಹೇಳಿದಿ—

ಸಂಗ್ಯಾ :– (ನಡುವೆಯೆ) ಅದು ಸುಳ್ಳಿದ್ರ ನಿನ್ನ ಕಾಲಾಗಿನ್ನು ನನ್ನ ತಲೀಮ್ಯಾಗ ಇಟ್ಕೋತೀನಿ, ರಾಮಣ್ಣಾ ಅದು ಆಗದಿ ಕರೇವು. ಸಣ್ಣಪ್ಪಜ್ಜ ನನ್ನ ಮುದ್ವಾಂ ಕರೆದು ಹೇಳದ "ನಾಳೆ ಹೊಂತುಟಲೆ ಹುಣಚೀ ಗಿಡದ ಕೆಳಗೆ ಎಲ್ಲಾರ್ನೂ ಜಮಾಯಿಸ್ಬೇಕು, ಪ್ಯಾಟ್ಯಾಗಿನ ಜನಕ್ಕ ಹೇಳು" ಅಂತ.

ರಾಮಣ್ಣ :– ಅಂದ್ರ ? ನನ್ನ ಕರೀಬಾರ್ದು ಅಂತ ಮಾಡ್ಯಾರ ಅಂಥೆಳ್ತೀಯಲ್ಲ ?

ಸಂಗ್ಯಾ :– ಅದೂ ಕರೇವು, ರಾಮಣ್ಣಾ. ನಾ ಹುಂ ಅಂದು ಹೊಂಟ ಮ್ಯಾಗ ಕಾಳಪ್ಪ ಕೇಳಿದ "ಕುಲಕರ್ಣೇರ ಹುಡುಗನ್ನ ಕರೆಯಿಸ್ತೇನು" ಅಂತ, ಸಣ್ಣಪ್ಪಜ್ಜ ಅಂದ "ಅವನ್ನ ತೆಪ್ಪಿಸಾಕ ಹಂಚಿಕಿ ಇದ್ರ ಹೇಳು" ಅಂತ, ನಾ ತುಸಾ ಮುಂಧೋಗಿದ್ದೆ–ನನಗ ಕೇಳಸ್ತು—

ರಾಮಣ್ಣ :– (ವಿಚಾರಕ್ಕೆ ಸಿಲುಕಿದವನಂತೆ) ಹುಂ..

ಸಂಗ್ಯಾ :– ಮತ್ತ ಕೇಳಸ್ತು ಅಂತಾ ಓಡತಾ ಮೊದ್ಲು ನಿನ್ನ ಕಡೆ ಬಂದೆ. ಆಗದೀ ಕರೇವು ಈ ಮಾತು.

ರಾಮಣ್ಣ :– (ಅತ್ತಿತ್ತ ನೋಡುತ್ತ) ಅಂದ್ರ ? ಇನ್ನೂ ಯಾರ ಸುಳಿವೇ ಇಲ್ಲಲ ?

ಸಂಗ್ಯಾ :– (ಸಂಶಯದ ದನಿಯಲ್ಲಿ) ಅವರದೇನು ಮಸಲತ್ತ ಐತಿಯೋ !

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಮಣ್ಣ :- (ಅಧಿಕಾರದ ದನಿಯಲ್ಲಿ) ಇಕಾ, ನನ್ನಿಂದ ಏನಾದ್ರೂ ಮುಚ್ಚಿಟ್ಟಿ ಅಂದರ—

ಸಂಗ್ಯಾ :- (ಪಟದ, ನೊಂದ ದನಿಯಲ್ಲಿ) ನಿಂತ-ನಿಂತಲ್ಲೆ ಬೂದೇಯಿ ನುಂಗಿ ಬಿಡ್ಲಿ ನನ್ನ !

ರಾಮಣ್ಣ :- (ಸಂತಯಿಸುವಂತೆ) ಭೂದೇವಿಗೂ ದಕ್ಕೋ ಮನಸ್ಯಾ ನೀ ಅಲ್ಲೊ, ಮಗನ, ನನಗ ಗೊತ್ತದ. ಅದಕ್ಕ ಕೇಳಿದೆ, ಅವರ ಮಸಲತ್ತ ಸಹಿತ ನಿನಗ ಗೊತ್ತಿರಬೇಕು ಅಂತ (ಎನ್ನುತ್ತ ಆಪೇಕ್ಷಾ ದೃಷ್ಟಿಯಿಂದ ಅತ್ತಿತ್ತ ನೋಡುತ್ತ ಕುಳಿತುಕೊಳ್ಳುವನು)

ಸಂಗ್ಯಾ :- (ತಾನೂ ಕುಳಿತುಕೊಳ್ಳುತ್ತ) ನನಗೂ ಗೂಡಾರ್ಥ ಬಿಸ್ತೇತಿ. ರಾಮಣ್ಣಾ. (ತಲೆಯ ರುಮಾಲನ್ನು ಬಿಚ್ಚಿ ಅದರೊಳಗಿನ ರೊಟ್ಟಿಯ ಗಂಟನ್ನು ತೆಗೆದು ಎಡಗೈಯಲ್ಲಿ ರೊಟ್ಟಿಯನ್ನು ಹಿಡಿದು, ತಿನ್ನುತ್ತಲೆ ಮಾತನಾಡುವನು). ದನಾ ತಿರುವಿ ಕೊಂಡು ಹೊಂಟದ್ನಿ ಯೇನಪಾ ನಾ, ರಾಮಣ್ಣಾ. ಸಣ್ಣಪ್ಪಜ್ಜ ಕರೆದ, ನನ್ಗೂ ಇದೇನೊ ಜಗಳ ನಡೆದೇತಿ-ಅನ್ನಿಸಿತು—

ರಾಮಣ್ಣ :- (ತುಸು ಕುತೂಹಲದಿಂದ) ಜಗಳ? ಯಾಕ? ಯಾರ್ಯಾರಿದ್ದರು ಅಲ್ಲಿ?

ಸಂಗ್ಯಾ :- ಸಣ್ಣಪ್ಪಜ್ಜ ಇದ್ದ—ಕಾಳಪ್ಪ ಇದ್ದ, ರುದ್ರಪ್ಪನ ಮಕ ಕಾವೇರಿದಾಂಗಿತ್ತು ! ಮತ್ತ ಬಂಗಾರೆವ್ವ ಇದ್ದಳು—ಆ ನೀಲೀನೂ ಇದ್ದಳು—

ರಾಮಣ್ಣ :- (ಬಾಯಿ ಜಪ್ಪರಿಸುವವನಂತೆ) ಹುಂ—

ಸಂಗ್ಯಾ :- ನಾ ಹೋದ ಕೂಡ್ಲೆ ಸಭಾ ಶಾಂತ ಆದಾಂಗ ಆತು— ನನ್ಗೂ ಸಂಶಾವು ಬಂತು— 'ಪರಸಂಗ ಏನಾರೆ ಪಂಚೇತಿಗೆ ಬಂಸೇತೇನು' ಅಂತ ಕೇಳಿಯೆ ಬಿಟ್ನ, ರುದ್ರಪ್ಪ ಸಿಟ್ಟಿಗೆದ್ದ.

ರಾಮಣ್ಣ :- (ಕುತೂಹಲದ ದನಿಯಲ್ಲಿ) ಅವ ಒಬ್ನೆ ಸಿಟ್ಟಿಗೆದ್ದನ?

ಸಂಗ್ಯಾ :— (ತಲೆ ತೂಗುತ್ತ) ಅವ ಒಬ್ನೆ. ಅದಕೇ ಹೇಳಿದೆನಲ್ಲ— ನೀಲೀದೇ ಏನಾರೂ ಬಾನಗಡಿ ಇದ್ದಿರಬೇಕು— (ಒನ್ಮೆಲೆ ಹೊಳೆದವನಂತೆ) ಹಾಂ ಹಾಂ—ಮನಿಮುಂದ ಆಗಿದ್ದಿದ್ದು ನೋಡು.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಮಣ್ಣ :- (ತಿಳಿಯದೆ) ಏನಂದಿ ?

ಸಂಗ್ಯಾ :- (ಮುಂಚಿನ ಭರದಲ್ಲಿಯೇ) ಹೊಳೀತೊ ಹೊಳೀತು ! ಏನೋ ದುಡ್ಡು ಸಿಕ್ಕೇತಿ ಯಾರೋ ಹುಗಿದಿಟ್ಟದ್ದು !

ರಾಮಣ್ಣ :- ದುಡ್ಡು ? ಎಷ್ಟು ? ಬಂಗಾರ ? ನೋಡಿದಿಯೇನ್ನೀನು ?

ಸಂಗ್ಯಾ:- (ಲಕ್ಷ್ಯವಿಲ್ಲದೆ) ದುಡ್ಡು ಸಿಕ್ಕೇತಿ-ಇಬ್ಬರಿಗೂ ಜಗಳ ಬಿದ್ದೇತಿ-ನ್ಯಾಯಾ ಹರಿಸಾಕ ಊರ ಪಂಚರನ್ನು ಕೂಡಿಸ್ತಾನ ಸಣ್ಣಪ್ಪಜ್ಜ- (ತಿನ್ನುವುದು ಮುಗಿದು ಕೈಗೆ ಕೈ ಬಡಿದು ಜಾಡಿಸಿ ಏಳುತ್ತ) ನೀಲೀದೆ ಇರ್ಬೇಕೆದು ಕಂತ್ರಾಟ ! (ರಾಮಣ್ಣ ವಿಚಾರದಲ್ಲಿ ತೊಡಗಿದಂತಿದ್ದುದನ್ನು ಕಂಡು) ದುಡ್ಡಿಗಾಗಿ ಬೇಕಾದ್ಯಾಡೋ ಜಾತಿ ಹೆಂಗಸಿನ್ದು (ಎನ್ನುತ್ತ ಕೆರೆಯ ಕಡೆ ಹೋಗುವನು).

[ಸಂಗ ನೀರು ಕುಡಿದು ತೇಗಿದ ಸದ್ದು ಕೆಳಬರುವುದು. ರಾಮಣ್ಣ ಎಚ್ಚೆತ್ತವನಂತೆ ಅತ್ತಿತ್ತ ನೋಡುವನು. ಮರೆಯಿಂದ ಸಂಗನ ಹಾಡು ಕೇಳಿಬರುವುದು. ರಾಮಣ್ಣ ಏಳಬೇಕನ್ನುವಷ್ಟರಲ್ಲಿ ರುದ್ರಪ್ಪ ಬರುವನು.]

ರುದ್ರಪ್ಪ:- ಶರಣಪಾ, ರಾಮಣ್ಣಾ.

ರಾಮಣ್ಣ :- ಎದ್ದೆಯಾ, ರುದ್ರಪ್ಪಾ ? ಏನು ಈ ಕಡೆ ಬಂದಿ ?

ರುದ್ರಪ್ಪ:- ಸಣ್ಣಪ್ಪಜ್ಜ ಆದಾನೇನು ನೋಡಾಕ-

ರಾಮಣ್ಣ :- ಸಣ್ಣಪ್ಪಜ್ಜ ಬರ್ತೀನಂತ ಹೇಳ್ಯಾನೇನು ?

ರುದ್ರಪ್ಪ:- ಹೇಳಾಕ್ಯಾಕಬೇಕು ? (ಸುಳ್ಳು ನಗೆಯಿಂದ) ಕತ್ತೆ ತಪ್ಪಿದರೆ ಹಾಳ ಗ್ವಾಡಿ ! ಜನ ಇಲ್ಲಿ ಬಂದೇತೇನು ?

ರಾಮಣ್ಣ :- (ಆಶ್ಚರ್ಯ ತೋರಿಸಿ) ಜನ ! ಆಂದ್ರ ಯಾರ್ಯಾರು ಬರೋರಿದ್ದಾರ ? ಸಭಾ ಮಸಲತ್ತು ನಡಿಸೀರೇನು ಮತ್ತ ?

ರುದ್ರಪ್ಪ :- (ನಕ್ಕು) ರಾಮಣ್ಣಗ ತಿಳಿಯದೇ ಯಾವ ಮಸಲತ್ತು ನಡೆದೀತು ಊರಾಗ ?

ರಾಮಣ್ಣ :- ಹುಂ— ಅಂತೂ ದೈವವಾನ್ ಇದ್ದೀಯಪ !

ರುದ್ರಪ್ಪ :- ಬಡ್ಮಂದೀಗ ಮತ್ತೆಲ್ಲಿ ದೈನತಂದಿ, ರಾಮಣ್ಣಾ. ಕೈಯಾಗ ಕಸುವು ಇರೋಮಟ ದೈವ ನಮ್ದು.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಮಣ್ಣ :– (ಕಪಟದ ನಗೆಯಿಂದ) ಕೈಯಾಗ ಕಸುವು ಇನ್ನು ಯಾಕ?

ರುದ್ರಪ್ಪ :– (ತಿಳಿಯದೆ) ಅಂದ್ರ?

ರಾಮಣ್ಣ :– ಎಷ್ಟು ಹತ್ತಿತಪ ಗಂಟು?

ರುದ್ರಪ್ಪ :– (ಮೇಲಿನಂತೆ) ಗಂಟು?

ರಾಮಣ್ಣ :– ಬಹಾಳ ಆಗೀಬೇಕಾಯ್ತೇನು?

ರುದ್ರಪ್ಪ :– (ಮೇಲಿನಂತೆ) ಆಗಿಯೋದು?

ರಾಮಣ್ಣ :– (ಹತ್ತಿರ ಬಂದು ಬೆನ್ನು ತಟ್ಟುತ್ತ) ಭಲೆ, ರುದ್ಯಾ! ನಾಟಕಾ ಸಾಧಿಸೇದ ನಿನಗ?

ರುದ್ರಪ್ಪ :–(ಅವನನ್ನು ದಿಟ್ಟಿಸುತ್ತ) ಏ–ನೊ!! ಏನಂತಿಯೊ— ರಾಮಣ್ಣಾ?

ರಾಮಣ್ಣ :– ಅಕ—ಬಂತು ನೋಡು ನಿನ್ನ ಜನ. ರಾಮಣ್ಣನ್ನ ತಪ್ಪಿಸ ಬೇಕು ಅಂತಿದ್ರಿರಲ್ಲ? ಅನ್ಯಾಯದ್ದು ದಕ್ಕೋದಿಲ್ಲೊ, ರುದ್ರಪ್ಪಾ!

[ಸಣ್ಣಪ್ಪಜ್ಜ, ಕಾಳಪ್ಪ, ಬೀರೆ ಒಲೆ ಜನ ನುತ್ತು ೨-೩ ಜನಕಾಯುವ ೧೦-೧೨ ವರ್ಷದ ಒಕ್ಕ ಹುಡುಗರು ಬರುವರು. ಹಿಂದಿನಿಂದ ಸಂಗ್ಯಾನೂ ಬರುವನು. ಮುಂದಿನ ದೃಶ್ಯ ನದೆಯುವಾಗ ಕ್ರಮೇಣ ಎಲ್ಲರೂ ಆಲ್ಲಲ್ಲಿ ಜಾಗೆಯನ್ನು ನೋಡಿಕೊಂಡು ಕೂಡ್ರುವರು. ಚಿಕ್ಕ ಹುಡುಗರು ಮಾತ್ರ ಸುತ್ತಲೂ ಸುಳಿದಾಡುತ್ತ ಆಡುತ್ತ, ಒಮ್ಮೊಮ್ಮೆ ಹಿರಿಯರ ಮಾತುಗಳನ್ನು ಕೇಳುತ್ತ–ಪುತ್ತೊಮ್ಮೆ, ಮುಂದೆ ಆಯಾ ಸಂದರ್ಭಗಳಲ್ಲಿ ಸೂಚಿಸಿದಂತೆ ವರ್ತಿಸುತ್ತ ಇರುವರು].

ಸಣ್ಣಪಜ್ಜ:– ಅನ್ನೇನವದ ಮಾತು ಯಾಕ ನಡೆದೇತಪ ರಾಮಣ್ಣ?

ಒಬ್ಬ:– ರಾಮಣ್ಣ ಇದ್ದಲ್ಲಿ ಅನ್ನೇನವದ ಮಾತು ಬರಾಕೇ ಬೇಕಲ್ಲ? (ಎಲ್ಲರೂ ನಗುವರು)

ರುದ್ರಪ್ಪ:– 'ನಾಟಕಾ ಸಾಧಿಸೇತಿ ನಿನಗ, ರುದ್ಯಾ' ಅಂತ ನನಗೂ ಅಂದ. (ಈ ನುಂಚಿ ಹಿರಿಯರು ನಕ್ಕದ್ದನ್ನು ಕಂಡು ಚಿಕ್ಕಹುಡುಗರು ಈಗ ನಗುವರು. ಪಟ್ಟನೆಂದು) ಏ–ಇಲ್ಲಿ ಏನ್ನೆತಿ ನಿಮ್ಮೆಲಸ?

Sri Vidyabharathi Book Centre, Sringeri

CC-O. In Public Domain. Digitized by eGangotri

ಸಣ್ಣಪ್ಪಜ್ಜ:– (ಹುಡುಗರಿಗೆ) ಏ– ಹೋಗರೊ– ಆ ಕಡೆ ಆಡಾಕ ಹೋಗರಿ. (ಹುಡುಗರು ಕಣ್ಣುತಪ್ಪಿಸುವವರಂತೆ ನಟಿಸುತ್ತ ಅಲ್ಲಿಯೆ ಸದ್ದುಮಾಡಬಾರ ದೆಂಬ ಯತ್ನದಲ್ಲಿ ಸುಳಿದಾಡುತ್ತಾರೆ).

ರಾಮಣ್ಣ:– (ಅಧಿಕಾರದ ಧನಿಯಿಂದ) ಹೋಗ್ಲೋಗರಿ ! ಶುದ್ಧ ಹಳ್ಳಿಯ ಹುಡುಗರು ! ಸಾಲೆ ಇಲ್ಲ, ಓದು ಬರೆ ಇಲ್ಲ.

ಮತ್ತೊಬ್ಬ:– ಆದರೆ ಓದು ಬರೆ ಕಲಿತ್ರೂ ನಂ ಜೋಡೀನೇ ಇರ್ಬೇಕಾತು, ಏಪ !, ರಾಮಣ್ಣಗ ! (ಮತ್ತೆ ಆನೇಕರ ನಗೆ)

ಸಂಗ್ಯಾ– (ಅಭಿಮಾನದಿಂದ) ರಾಮಣ್ಣ ಇಲ್ಲಿ ಅದಾನಂತ ಊರೊಳಗ–

ಒಬ್ಬ:– ಊರೊಳಗ ಅನ್ನೇವದ ಮಾತು ನಡೆದೇತಿ. ಹೌದಂತೀ ಇಲ್ಲೋ, ಅಜ್ಜ ?

ಸಣ್ಣಪ್ಪಜ್ಜ:– (ಒಬ್ಬನಿಗೆ) ಇಲ್ಲಿ ನೋಡು, ಸಿಂಗ್ಯಾ, ಅನ್ನೇವ ಮಾಡೋ ಮನಸ್ಯಾ ಏನಿದ್ರೂ ಅನ್ನೇವ ಮಾಡ್ತಾನ. ಸಾಲೀ ಬರೆಯದಿದ್ರ ಸಾಚ್ಯಾ ಆಗ್ತಾನೇನು ಮನಸ್ಯಾ ? (ಸಿಂಗ್ಯಾ ಸುಮ್ಮನಾಗುವನು).

ಮತೊಬ್ಬ:– ಅದನ್ನ ನೀ ಹೇಳ್ಬೇಕು, ಯಜ್ಜ. ಹಿಂದಿನ ಕಾಲ ಸುಕದ ಕಾಲ ಅಂತ ಹೇಳ್ತಿದ್ದಿ. ಊರಿನ ಮಟ್ಟಿಗೆ ಜನ ವಬ್ಬರೊಬ್ರುನ್ನ ಹಚಿಕೊಂಡು ಇರ್ತಿತ್ತು - ಅಂತೀ.

ಸಂಗ್ಯಾ:– ಅಂದ್ರೇನು ? (ಕನಲಿ) ರಾಮಣ್ಣ ಊರಾಗ ಜಗಳ ಹಚ್ತಾನ ಅಂತೀಯಾ ?

ಮತ್ತೊಬ್ಬ:– (ಕೆರಳಿ) ಒಬ್ಬರ ಹೆಸರ ಎತ್ತಿ ಹೇಳಿದೆನೆ ನಾ ? ಸಾಲೆ ಬರೆಯೋ ಮಾತು ಬಂತು, ಹೇಳಿದೆ.

ಸಣ್ಣಪಜ್ಜ:– (ಹಿರಿತನದಿಂದ) ಏ, ಹುಚ್ಚೊಟ್ಟಿಗೋಳ್ರಾ, ನಾಕ ದಿನ ಹಿಂದು ಕೂಡಿಸಿ ಒಯ್ದರ ದನಾ ಸೈತ ಕೂಡಿಕೊಂಡು ಹೋಗ್ತಾವಂತ– ಅವ್ರ ನಿಮಗ ಬುದ್ಧಿ ಬರೊಲ್ಲದು. ಯಾರು ಯಾರಿಗೂ ಜಗಳಾಡೋದಕ ಹಚ್ಚೋದಿಲ್ಲ, ರೊಕ್ಕ ಕೊಟ್ಟು ಕುಸ್ತಿಗೆ ಹಚ್ಚಿಥಾಂಗ. ಇಲ್ಲಿ ನೋಡು, ಭರ್ಯಾ, ಹಿಂದಿನ ಕಾಲ ಹಿಂದಾಗಿ ಹೋಯ್ತು. ಚಕ್ಕಡಿ ಕಾಲದಾಗ ಕುದರೀ

Sri Vidyabharathi Book Centre, Sringeri

 CC-O. In Public Domain. Digitized by eGangotri

ಸವಾರಿ ಹೆಚ್ಚಿಂದನಿಸ್ತು ಅಂತ ಮೋಟರದ ಧಿನ್ವಾಗೂ ಕುದರೀ ಹತ್ತಿದರೇ ಕೆಲಸ ಝಪಾಟೇದು ಆನ್ರೀಯಾ ?

ಧರ್ಮಾ:– (ತಿಳಿಯದೆ) ಅಂದ್ರ ?

ಸಣ್ಣಪಜ್ಜ:– ಅಂದ್ರೇನು ? ಹಳೆ ದಿನಾ ಹೋದುವು, ಹೊಸ ದಿನಾ ಬಂದಾವ.

ರಾಮಣ್ಣ:– (ತಿರಸ್ಕಾರದ ಧನಿಯಲ್ಲಿ) ಆಷ್ಟು ತಿಳಿದರ ಆಯ್ತಲ್ಲ ? ಆದರ ತಿಳೀಬೇಕಲ್ಲ ? ಈಗ ದೇಶ ಸ್ವತಂತ್ರ ಆಗೇದ, ಸರಕಾರ ನಮ್ಮದಾಗೇದ– ತಿಳೀತೇನು ?

ಧರ್ಮಾ:– (ಆಪಮಾನಿತನಾಗಿ) ಎಲೆ ನಿನ ! ಏನ ದೊಡ್ಡ ಮಾತು ಅಂತ ಹೇಳ್ತಾನೊ ? ಸರಕಾರ ನಮ್ಮದಾಗೇದಂತ. ಆದರೇನಾತು ? ಸರಕಾರ ನಮ್ಮಾತು, ಸೆಟ್ಟರು ಮಂತ್ರಿ ಆದ್ರು; ನನ್ಗೂ ನಿನ್ಗೂ ಏನ್ಬಂತು ? ಸರಕಾರ ನಮ್ದಾಗೇದಂತ ಸುಕಾಲ ಬರತೈತೇನು ಕಾಯಿದೆ ಪಾಸ್ಮಾಡಿದ್ರ ?

ರಾಮಣ್ಣ:– (ತಿರಸ್ಕಾರದಿಂದ ಉಸಿರೆಳೆದು) ಹುಂ— ಕಠಿಣ ! ಕಠಿಣ !

ಸಣ್ಣಪ್ಪಜ್ಜ:- ಹೀಂಗಂದ್ರ ಹ್ಯಾಂಗವ, ರಾಮಣ್ಣಾ ಕಲಿತವ ನೀನು, ತಿಳಿಸಿ ಹೇಳ್ಲಲ್ಲ !

ನಿಂಗ್ಯಾ:– ತಿಳಿಸಿ ಹೇಳ್ತಾನ ಅವ— ಇಲೆಕ್ಶನ್ವಾಗ—ಇಂಥೋರಿಗೆ ಓಟು (Vote) ಹಾಕರಿ ಅಂತಾ—(ಒಳದನಿಯಲ್ಲಿ) ಕೈ ಜೆಚ್ಚಗ ಮಾಡಿಸಿ ಕೊಂಡು.

ಕಾಳಪ್ಪ:– ಅಜ್ಜ, ನಾವು ಬಂದ ಕೆಲಸ ಹಾಗೇ ಉಳಿದೇತಿ—

ರುದ್ರಪ್ಪ:– ಕಲಿತೋರು ಕಲೀಲಿ, ಅಜ್ಜ. ನನ್ಗು ಹಿರಿಮನಸ್ಯಾ ನೀನು— ನೀ ಹೇಳ್ಬಿಡು.

[ಇತ್ತ ಚಿಕ್ಕ ಹುಡುಗರ ಆಟದಲ್ಲಿ ಏನೊ ವಿರಸ ಬಂದಂತಿದೆ. ಆದರೆ ಹಿರಿಯರ ಲಕ್ಷ್ಯ ಆ ಕಡೆಗಿಲ್ಲ. ಆದರೂ ಹುಡುಗರು ಕಳ್ಳನೋಟದಿಂದ ಹಿರಿಯರ ಕಡೆ ನೋಡುತ್ತ ಒಬ್ಬರೊಬ್ಬರಿಗೆ ಸಿಟ್ಟಿನಿಂದ ತಿವಿಯುತ್ತಿದ್ದಾರೆ.]

Sri Vidyabharathi Book Centre, Sringeri

CC-O. In Public Domain. Digitized by eGangotri

ಸಣ್ಣಪ್ಪಜ್ಜ :– ನಾ ಎಂತಾ ಹಿರಿಮನಸ್ಯಾ? ತೆಲಿಗೊಬ್ಬ ಮಾತಾಡೋ ವಾಗ ಹಿರಿಮನಸ್ಯಾ ಆಗಿ ಮಾಡೋದೇನು?

ರಾಮಣ್ಣ :– (ತಿರಸ್ಕಾರ ಮಿಶ್ರಿತವಾಗಿ ಉಸಿರೆಳೆಯುವನು).

ಸಣ್ಣಪ್ಪಜ್ಜ :– (ಸಂಶಯದೃಷ್ಟಿಯಿಂದ ಅವನನ್ನು ನೋಡುತ್ತ) ನೀ ಯೇನಂತೀ, ರಾಮಣ್ಣಾ?

ರಾಮಣ್ಣ :– (ಈ ದಡ್ಡರನ್ನ ಸುಧಾರಿಸುವ ಎಲ್ಲ ಹೊಣೆ ತನ್ನದೆಂಬಂತಹ ಹಿರಿತನದಿಂದ) ನಾಯೇನು ಮಾತಾಡ್ಲಿ, ಅಜ್ಜ? ದಿವಸ್ಪದಲಾಗೇವ, ದೇಶ ಸ್ವತಂತ್ರ ಆಗೇದ—

ಧರ್ಮ್ಯಾ ಮತ್ತು ನಿಂಗ್ಯಾ :– ಎಲೆ ನಿನ-ಅದೊಂದು ಮಂತ್ರ ಆಗೇತೊ ಯೇನು?—

ರಾಮಣ್ಣ :– (ದರ್ಪ ಮತ್ತು ಅಸಹನೆಯಿಂದ) ನನ್ಮಾತಾದ್ರೂ ಪೂರಾ ಕೇಳ್ತೀರಾ? (ಪಟದಿಂದ) ದೇಶ ಸ್ವತಂತ್ರ ಆಗೇದ, ನಾವು ಸ್ವತಂತ್ರಾಗೇವಿ, ಎಲ್ಲಾರಿಗೂ ಮಾತಾಡೋ ಹಕ್ಕು ಆದ ಅಂತ ನಾ ಹೇಳ್ಬೇಕಂದ್ರ– ಥಡ್ಡರನ್ನ ತಂದು– ಸುಳ್ಳೇ ನಡು ನಡುವೆ ಮಾತಾಡ್ತಾರ!

[ಒಮ್ಮೆಲೆ ಒಬ್ಬ ಹುಡುಗ ತಡೆಯದೆ ಗಟ್ಟಿಯಾಗಿ ಅಳುತ್ತ ಇನ್ನೊಬ್ಬನನ್ನು ಜೋರಾಗಿ ಹೂಡಿಯ ತೊಡಗುವ– ಹುಡುಗರ ಬಹಿರಂಗವಾದ ಯುದ್ಧವೇ ನಡೆಯುವುದು].

ಕಾಳಪ್ಪ:– (ಎದ್ದು ಅವರನ್ನು ಬಿಡಿಸುತ್ತ) ಏ–ಏ–ನಿಮ್ಗೇನು ಹುಚ್ಚು ಗಿಚ್ಚು ಹಿಡಿದೇತ್ಯೋ ಯೇನ್–

ರುದ್ರಪ್ಪ:– (ಅಸಹನೆಯಿಂದ ಎದ್ದು) ಥೂ– ನಿಮ! ಇಲ್ಲಿ ಯಾಕ ಸಾಯ್ತಾವೊ– (ಕಾಳಪ್ಪನು ಜಗಳ ತಡೆದು ಎರಡೂ ಕೈಗಳಿಂದ ಬೇರೆ ಬೇರೆ ಹಿಡಿದು ನಿಲ್ಲಿಸಿ ಹುಡುಗರಿಬ್ಬರಿಗೂ ಒಂದೊಂದು ಏಟನ್ನು ಕೊಡುವನು).

ಸಣ್ಣಪ್ಪಜ್ಜ:– (ರುದ್ರಪ್ಪನಿಗೆ) ಇರಲಿ ಬಿಡೊ! (ಹುಡುಗರಿಗೆ) ಏ– ಹೋಗಿರೊ– ಹುಣಚಿಹಣ್ಣು ಬಡೆದುಕೊಂಡು ಬರ್ರಿ ಗಿಡದ ಮ್ಯಾಗಿಂದ– ಹೋಗಿರಿ.

[ನಾಚಿ ಹೆದರಿದ ಹುಡುಗರು ಮೆಲ್ಲನೆ ಅಲ್ಲಿಂದ ಹೊರಡುವರು].

Sri Vidyabharathi Book Centre, Sringeri

 CC-O. In Public Domain. Digitized by eGangotri

ರಾಮಣ್ಣ :- (ಹುಡುಗರತ್ತ ನೋಡುತ್ತ) ತುತ್ತು ದೊಷ್ಟದು- ಗುಟಲು ಸಣ್ಣದು (ತಲೆ ಅಲ್ಲಾಡಿಸುವನು) ಸಡಿಲ ಬಿಟ್ರೆ ಹಿಂಗಾಗ್ತಾವ-

ನಿಂಗ್ಯಾ:- ಅದ್ಯಾಕಪ-? ಆ ಹುಡುಗರೂ ಸೊರ್ತಂತ್ರ ಅದಾವು-

ರಾಮಣ್ಣ :- (ತಿಳಿಸಿ ಹೇಳುವವನಂತೆ) ಅದೇ ಹೇಳಿದೆನಲ್ಲ. ಅವರೂ ಸ್ವತಂತ್ರ; ಹಾಂಗೇ ನೀವೂ ಸ್ವತಂತ್ರ! ಮನಸಿಗೆ ಬಂದದ್ದನ್ನು ಬೊಗಳೋದು, ಜಗಳಾ ತೆಗೆಯೋದು.

ಧರ್ಯಾ:- (ಪ್ಲೇಷದ ಧನಿಯಲ್ಲಿ) ಮತ್ತು ತಂತನ್ನು ಮಾತಾಡ್ಲಾಕ ಯೆಲ್ಲಾರೂ ಸೊರ್ತಂತ್ರ ಅಂತ ಇದೇ ಯೀಗ ನೀನೇ ಲೆಗ್‌ಚರ್ ಬಿಗೀತಿದ್ದಿ ಯಲ್ಲೊ ಯಪ!

ರಾಮಣ್ಣ:- (ಕನಲಿ) ಕಂಸ್ರೇನಾಯ್ತು? ತಂತಮ್ಮದನ್ನ ಮಾತಾಡ್ಲಿಕ್ಕೆ ಎಲ್ಲಾರೂ ಸ್ವತಂತ್ರರು ಅಂದ್ರ, ಬುದ್ಧಿ ಇದ್ದವರು ಎಲ್ಲಾರೂ ಅಂತ ಅರ್ಥ! ಹೂ-

ನಿಂಗ್ಯಾ:- ಅಂದ್ರ ನೀವೊಪ್ಪೆ ಅನ್ನ-

ಸಣ್ಣಪ್ಪಜ್ಜ:- ಯೇ, ನಿಂಗ್ಯಾ, ಮಾತರೆ ಹೀಂಗ ಅಡ್ತಿ, ಮ್ಯಾಗ ಬುದ್ಧಿಯಿಲ್ಲಾ ಅಂದ್ರ ಸಿಟ್ಟಿಗೆ ಬರತೀ! (ಕೆಲವರು ನಗುವರು. ನಿಂಗ್ಯಾ ತಿಳಿಯದೆ ಸಿಡುಕಿನಿಂದ ಅತ್ತಿತ್ತ ನೋಡಲು) ಬುದ್ಧಿ ಇದ್ದೋರು ಅಂದ್ರ ಬರೇ ಸಾಲೆ ಬರೆದೋರು ಅಂತ ಯಾರ್ಸೇಳಿದ್ರು ನಿನ್ಗ? (ಈಗ ಹೆಚ್ಚು ಜನ ನಗುವರು; ನಕ್ಕು ಸೂಚ್ಯವಾಗಿ ರಾಮಣ್ಣನನ್ನು ನೋಡಿ ಮತ್ತೊಮ್ಮೆ ನಗುವರು) .

ರಾಮಣ್ಣ:- (ಸೋತು ಅಪಮಾನಿತನಾದವನ ಧನಿಯಲ್ಲಿ) ಕಾಲು ಕೆದರಿ ಜಗಳಾ ಹೂಡ್ಲಿಕ್ಕೊಂದು ಬರ್ತದ!

ಸಣ್ಣಪ್ಪಜ್ಜ:- (ಸಮಾಧಾನದ ಧನಿಯಲ್ಲಿ) ರಾಮಣ್ಣಾ, ಜಗಳಾಡದ ಬುದ್ಧಿ ಬರ್ತೇತಿ ಅಂತ ತಿಳೀಬ್ಯಾಡ.

ಧರ್ಯಾ:- (ವ್ಯಂಗ್ಯವಾಗಿ) ಛೆ-ಛೆ ಸಾಲೆ ಕಲಿತ್ರೇ ಬುದ್ಧಿ ಬರ್ತೇತಿ.

ಕಾಳಪ್ಪ:- ಅದೂ ಸುಳ್ಳಲ್ಲ.

ನಿಂಗ್ಯಾ:- ಸಾಲೆ ಕಲಿತ್ರ, ಅಲ್ಲ; ನ್ಯಾಟ್ರಕೇ ಅದ್ರ ಬುದ್ಧಿ ಬರ್ತೇತಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ರುದ್ರ:– ಅಂದ್ರ ? ರಾಮಣ್ಣ ನ್ಯಾಟ್ರಕಿ ಯಂದ ಆದ ?

ಸಂಗ್ಯಾ:– ನಿಮ್ಗೇನ ಗೊತ್ತೈತಿ ? "ಯೆಂದಾದ ಅಂತ". ವೊಮ್ಮೆ ಕೂಡ್ಬಾರ್ದು ಕುಂತ್ರ ಮ್ಯಾಗಿನವರು ಬೊಟ್ಟು ಕಚ್ಚಿದರಂತ. ಇಂತಾ ಮನಸ್ಯಾ ಇನ್ನೊಮ್ಮೆ ಕೂಡಾಕೇಬೇಕು ಅಂತ ಹಟ ಹಿಡಿದ್ರಂತ– (ರಾಮಣ್ಣನನ್ನು ಬಿಟ್ಟು ಎಲ್ಲರೂ ಬೊಳ್ಳನೆ ನಗುವರು)

ರಾಮಣ್ಣ:– (ಸಂಗ್ಯಾನಿಗೆ) ಇರಲಿ ಬಿಡೊ, ಶುಂಭ !

ಸಂಗ್ಯಾ:– (ಅಭಿಮಾನದಿಂದ) ಇಲ್ಲ, ರಾಮಣ್ಣಾ, ಗೊತ್ತಾಗ್ಲಿ ಆವರಿಗೆ– ಇಂತಾ ಮಾತು ಸುಮ್ಸುಮ್ನೆ ಮುಚ್ಚಿಡತೀ ನೀ.

[ಎಲ್ಲರೂ ಮತ್ತೊಮ್ಮೆ ನಗುವರು] .

ಸಣ್ಣಪ್ಪಜ್ಜ:– ಏ, ಸಂಗ್ಯಾ, ಆದೇನು ನಮ್ಗ ಗೊತ್ತಿಲ್ಲಂತೀಯೇನು ? ಅಸ್ತೇ ಮತ್ತ ರಾಮಣ್ಣನ್ನ ಮುಂದ್ಮಾಡಿಯೆ ಕೆಲಸ ಮಾಡ್ಬೇಕಾಗೇತಿ.

ರಾಮಣ್ಣ:– (ಸಂದರ್ಭ ತಿಳಿಯದೆ ಜಿಜ್ಞಿತನಾಗಿ) ನನ್ನ ಮುಂದ್ಮಾಡಿ ? ಅದಾವ ಕೆಲಸ ?

ಸಣ್ಣಪ್ಪಜ್ಜ:– ಹೇಳಿದೆನಲ್ಲ, ಜಗಳಾಡಿದ್ರೂ ಬುದ್ಧಿ ಬರ್ತೈತಿ ಅಂತ ? ಈಗ ಜಗಳ ಹೂಡ್ಬೇಕಾಗೇತಿ ಬುದ್ದಿ ಬರ್ಲಿ ಅಂತ.

ಕಾಳಪ್ಪ:– (ಪೆಚ್ಚಾಗಿ) ಜಗಳಾ ಹೂಡೋದು ?

ರುದ್ರಪ್ಪ:– (ತಿಳಿಯದೆ) ಎಂತಾ ಬುದ್ದಿ ಬರೋದು ?

[ಸಂಗ್ಯಾ, ಧರ್ಮಾ ಒಬ್ಬರೊಬ್ಬರನ್ನು ಸೂಚ್ಯನಾಗಿ ನೋಡಿ ಕಣ್ಣನ್ನು ಮಿಟುಕಿಸುವರು]

ಸಣ್ಣಪ್ಪಜ್ಜ:– ಜಗಳ ಹೂಡ್ಬೇಕಾಗೇತಿ ಕೆರೆಯ ಜೋಡಿ. (ಸಂಗ್ಯಾ ಒಬ್ಬನೆ ತಡೆಯದಂತಾಗಿ ನಗುವನು. ಎಲ್ಲರೂ ಸಿಟ್ಟಿನಿಂದ ನೋಡಲು ತಡೆಯುವನು) ಯಾಕಪ್ಪ, ಮಗನ, ಜಗಳ ಅಂದ್ರ ಒಟ್ಟೊಂದು ಕುಂತೀ ಏನು ? ಕೆರೇ ಜೋಡೀನೇ ಇರ್ಲಿ ನೆರೇ ಜೋಡೀನೇ ಇರ್ಲಿ ? ಆಂ ? (ಸಂಗ್ಯಾನನ್ನು ಬಿಟ್ಟು ಎಲ್ಲರೂ ನಗುವರು).

ರಾಮಣ್ಣ:– (ಜಿಜ್ಞಿಪ್ರನಂತೆ) ಏಲ್ಲ. ನಿನ್ನ ಮಾತಿನ ಅರ್ಥ ಏನು ಅಂತ?

ಸಣ್ಣಪ್ಪಜ್ಜ:– (ಕಾಳಪ್ಪ ರುದ್ರಪ್ಪರನ್ನು ತೋರಿಸುತ್ತ) ಕೇಳವರಿಗ, ನನ್ನ ಮಾತಿಗೆ ಅರ್ತ ಐತಿಯೊ ಇಲ್ಲೊ ? (ಎಲ್ಲರೂ ಸ್ತಬ್ಧರಂತೆ ಕೂಡ್ರುವರು)

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾಕರೊ ? ನೀವಿಬ್ಬರೂ ಜಗಳಾಡಿದ್ರೊ ಇಲ್ಲೊ ? ಆಂ ? (ಮಿಕ್ಕವರಿಗೆ) ನಿನ್ನೆ ಫೆಂಜೀಯಾಳೇದಾಗ ಇಬ್ಬರೂ ಒಂದೊಂದು ಗುದ್ದಲಿ ಹಿಡಕೊಂಡು ಇದಿರಾಯಿದುರು ನಿಂತಿದ್ರು. ಆ ಜಗಳದಿಂದ ನಮಗ ಬುದ್ಧಿ ಬಂತು–

ಸಂಗ್ಯಾ:– ಮತ್ತ ? ಕೆರೆಯ ಜೋಡಿ ಜಗಳ ಆಂದಿಯಲ್ಲೊ, ಯೆಜ್ಜಾ?

ಸಣ್ಣಪ್ಪಜ್ಜ:– ಪೂರಾ ಮಾತಾದ್ರೂ ಕೇಳಿಕೋರೋ. ಎತ್ತಿದ ಬಾಣ ಕೆಳಗ ಇಡೋ ಹಾಂಗಿಲ್ಲ ಅನ್ನೋರ ಹಾಂಗ ನಿಂತಿದ್ರು. ಎತ್ತಿದ ಗುದ್ದಲೀ ಕೆಳಗ ಇಡಾಣೆಲ್ಲ ಅಂದ್ರ ನಡೀರಿ, ಗುದ್ದಲೀ ಏಟಕ ಜಾಗಾ ತೋರಿಸ್ತೀನಿ ಅಂದೆ.

ರಾಮಣ್ಣ:– (ಏಳುತ್ತ) ನಿನ್ನಿಮ್ಮ ಜಗಳ ಏನೊ, ಎಂತಹದೊ !

ಸಣ್ಣಪ್ಪಜ್ಜ:– ಎದ್ದೆಯಲ್ಲೊ, ರಾಮಣ್ಣಾ ?

ರಾಮಣ್ಣ:– ನನ್ದೇನದ ಕೆಲಸ ಇಲ್ಲಿ ?

ಧರ್ಮ್ಯಾ-ನಿಂಗ್ಯಾ:– ಕರೇಮೈತಿ....ಸಾಲೇ ಕಲಿತೋರಿಗೆ ಸಲಿಕೆ–ಗುದ್ದಲಿ ಕೆಲಸ ಏನೈತಿ ?

[ರಾಮಣ್ಣ ಅವರನ್ನು ಸಿಟ್ಟಿನಿಂದ ನೋಡುತ್ತ ಹೊರಡುವನು.]

ಸಣ್ಣಪ್ಪಜ್ಜ:– ಸಾಲಿ ಕಲಿತೋರಿಗೆ ಸಂಸಾರೇ ಇರೋದಿಲ್ಲಂತೀರೇನು?

[ರಾಮಣ್ಣ ತಡೆಯುವನು]

ರುದ್ರ:– ಹೇಳ್ಬಿಡಬಾರ್ದ ಪೊಮ್ಮೆ ?

ರಾಮಣ್ಣ:– (ಸಂಶಯದ ದನಿಯಲ್ಲಿ) ಏನದು-? ಯಾವ ಮಾತು ? ಸಂಸಾರದ್ವೇನು– (ಎದುರು ನೋಡುತ್ತ ಒಮ್ಮೆಲೆ ತಡೆಯುವನು. ಎಲ್ಲರೂ ಆ ಕಡೆ ನೋಡುವರು) .

ಸಣ್ಣಪ್ಪಜ್ಜ :– ಮೊದಲ್ಗೆ ಕೆಲ್ಸ ಸಂಗ್ಯಾಂದೈತಿ (ರುದ್ರಪ್ಪ, ಕಾಳಪ್ಪ ಚಕಿತರಾಗಿ ಒಬ್ಬರೊಬ್ಬರ ಮುಖವನ್ನು ನೋಡುವರು. ಮಿಕ್ಕವರು ಸಂಗ್ಯಾನನ್ನು ನೋಡುವರು)

ಸಂಗ್ಯಾ :– (ತಕರಾರಿನ ದನಿಯಲ್ಲಿ) ಆಯ್ತಪ ! ಏನಾರೆ ಬಿಟ್ಟ ಕೆಲ್ಸ ಬಂತಂದ್ರ ಮೊದಲು ಸಂಗ್ಯಾ !

Sri Vidyabharathi Book Centre, Sringeri

CC-O. In Public Domain. Digitized by eGangotri

ಧರ್ಮಾ :– ಅದ್ಯೇ ಹೇಳ್ಕಿಲ್ಲೇನು ನಿನ್ಗ–ಒಂದು ಹೇಣ್ತೇನ್ನ ತಂದ್ಬಿಡು ಅಂತ ? (ಕೆಲವರು ನಗುವರು) ಮಗನೆ, ಮನಿ–ಮಾರು–ಹೆಂಡ್ರು–ಮಕ್ಳು–ಮರಿ ಒಂದೂ ತರಾಸ ಇಲ್ದೆ ದನದ ಬೆನ್ವತ್ತಿ ಹಾಡಿಕೊಂತ ಕಾಲ್ಕಳೀತಿ, ಮತ್ತ ಯಾಕ ನಿನ್ನ ಕೆಲ್ಸಕ್ಕ ಹಚ್ಚಾರ್ದು ?

ರಾಮಣ್ಣ :– ಅಂದ್ರೇನು ? ಸಂಗ್ಯಾ ಜೈನಿ ಹೊಡೀತಾನ ಅಂತ ತಿಳಿದೀರೇನು ?

ಸಂಗ್ಯಾ :– (ಸಹಾನುಭೂತಿಗೆ ಕೃತಜ್ಞನಂತೆ) ನೋಡ್ಬಾರ್ದ, ರಾಮಣ್ಣಾ ? ನನ್ನsಟಕ ನಾ ಇರ್ತೀನಿ ಅಂತ—

ರುದ್ರ :– (ಒಟ್ಟಿನಿಂದ) ನಿನ್ನsಟಕ ?

ರಾಮಣ್ಣ :– ಅಂದ್ರ ? ಆವನಿಗೇನು ಹೆಂಡ್ರು–ಮಕ್ಕಳು ಇದ್ದಾರ ?

ಧರ್ಮಾ :– ಸುತ್ತುಮುತ್ತಿನೋರಿಗೆ ಹೆಂಡ್ರು–ಮಕ್ಕಳಿದ್ದಾರ—

ಸಣ್ಣಪ್ಪಜ್ಜ :– (ಮೂಲದಲ್ಲಿಯೆ ಜಗಳವನ್ನು ನಿಲ್ಲಿಸುವಂತೆ) ಮುಗೀ ತೇನ್ರಪಾ ? (ರಾಮಣ್ಣನನ್ನು ಬಿಟ್ಟು ಮಿಕ್ಕವರು ನಾಚಿಕೆಯಿಂದ ಸುಮ್ಮನಾಗಿ ಅತ್ತಿತ್ತ ನೋಡುವರು). ನನ್ಮಾತಾದ್ರೂ ಪೂರಾ ಕೇಳ್ತೀರೊ ? ಮೊದಲ್ನೇ ಕೆಲ್ಸ ಸಂಗ್ಯಾಂದೈತಿ ಅಂದ್ರ ಯಾಕ ಅಂತ ಕೇಳ್ಬೇಕೋ, ಏನು—

ಕಾಳಪ್ಪ :– ಯೆಜ್ಜ, ಅನುಮಾನಿಲ್ದೆ ನೀನ್ಹೇಳಿಬಿಡೋದ ಪಾಡ ಕಾಣ್ತೈತಿ—

ಸಣ್ಣಪ್ಪಜ್ಜ :– ಕೆರೀವಳ್ಗ ಸಂಗ್ಯಾ ದನಗೋಳ ಮೈತೊಳೀತಾನಲ್ಲ ? (ಎಲ್ಲರೂ ವಿಧೇಯರಂತೆ ತಲೆತೂಗುವರು). ಹೌದಲ್ಲ ? ಹಾಂಗ ಮೆಯ್ ತೊಳೀವಾಗ ದನ ಉಚ್ಚಿ ಹೊಯ್ತಾವು, ಶಗಣೀ ಹಾಕ್ತಾವು–ತಡಿಯೋ ಸಂಗ್ಯಾ !– ಅದು ಹೊಲಸು ಹೌಂದಲ್ಲೊ ?

ಸಂಗ್ಯಾ :– ತಿಳೀತು, ಬಿಡು, ಯಜ್ಜ ! ನಿನಗ ಯಾರು ಹೇಳ್ಯಾರ ತಿಳೀತು.

ಸಣ್ಣಪ್ಪಜ್ಜ:– (ನಗೆಯಿಂದ) ಆಂದ್ರ ದನದ ಶಗಣಿ–ಉಚ್ಚಿ ಹೊಲಸು ಅನ್ನೋದನ್ನ ಮಂದಿ ಹೇಳ್ಬೇಕೆ ನನ್ಗ ? (ಎಲ್ಲರೂ ಮೊಳ್ಳನೆ ನಗುವರು)

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಗ್ಯಾ:– (ಸಿಟ್ಟಿನಿಂದ) ಆಂ?ದ್ರೇನು? ಶಾರನೊಳಿನ್ಸ್ಪಾಂಗೆ ಪೇಸಲ್ ಪಾಯಖಾನಿ ಕಟ್ಟಿಸಂತೀ ಏನು? ದನಗೋಳ ಸಲುವಾಗಿ? (ತಾಮಣ್ಣ ನಗುವನು)

ರುದ್ರ:– ಆದರ ಕೆರೀ ನೀರ್ನೆ ಊರ ಜನ ಕುಡಿತೈತಿ.

ಸಂಗ್ಯಾ:– (ತಿರಸ್ಕಾರದಿಂದ) ಯಂದಿನ ಕಾಲ್ದಿಂದ ಕುಡೀತೈತಿ. ಇಂದಿನೋರಿಗೆ ಅದ್ನ ದಕ್ಕಿಸಿಕೊಳ್ಳೊ ಯೋಗ್ಯತಾ ಇಲ್ಲ ಅಂತೀಯೇನು?

ಸಣ್ಣಪ್ಪಜ್ಜ:– (ಸಮಾಧಾನದಿಂದ) ಸಂಗ್ಯಾ, ಯಂದಿನ ಕಾಲದಿಂದ ಹಿರೀರ ಮಾತ ಕೇಳ್ತಿದ್ರು ಹುಡುಗ್ರು. ನೀ ಕೇಳ್ತೀಯೇನು?

ಸಂಗ್ಯಾ:– (ಕೈಗೆ ಸಿಕ್ಕ ಆಪರಾಧಿಯಂತೆ) ಅಂದ್ರ ಏನ್ಮಾಡಂತಿ ಹೇಳು, ಯೆಜ್ಜ.

ಸಣ್ಣಪ್ಪಜ್ಜ:– ಇಕಾ-ಇಲ್ಲಿ ಬಾ (ಎದ್ದು ಮುಂದೆ ನಡೆದು ಕೆರೆಯ ಕಡೆ ತೋರಿಸುತ್ತ) ಅಲ್ಲಿ ವಡ್ಡು ವಡ್ಸೇತಿ, ಕಾಣ್ತೇತಲ್ಲ? (ಸಂಗ್ಯಾ ತಲೆ ತೂಗುತ್ತ ಕೇಳುವನು). ಆ ಜಾಗದಾಗ-ತುಸಾ ದೂರ-ನಾಕಾರು ಫರಶಿ ಕಲ್ಲು ಒಗೆ, ಏನಪ. ಆಂ? ವಡ್ಡಿಗೆ ಹತ್ತಿ, ತಿಳೀತೇನು? ಮುಂದ ವಂಡಿನ್ಯಾಗ ತುಸಾ ಮೇವ ಇಡತ್ಯಾ. ಆಂದ್ರ-ದನ ನಿಲ್ತೇತಿ. ಆ ನ್ಯಾಗ ದನವ ನೈ ಅಲ್ಲೇ ತೊಳೆದ್ಬಿಡು.

ಸಂಗ್ಯಾ:– (ಆದೇ ಜಾಗವನ್ನು ದಿಟ್ಟಿಸುತ್ತ) ಆಂದ್ರ– ಕೆರೀಯಿಂದ ನೀರು ತಗೊಂಡ್ಬಾ ಅಂತೀ ಅನ್ನು, ಯೆಜ್ಜ.

ಸಣ್ಣಪ್ಪಜ್ಜ:– ನೀರಿನ ಕಾಳ್ಜಿ ನಿನಗ ಬ್ಯಾಡ.... ಅಲ್ಲಿ ಒಂದು ಹೊದಗಲ್ಲ ಇಡ್ತೇತಿ– ಕೆರೀಗ ಬರೋ ಹೆಣ್ಮಾಕ್ಳು ತೆಲೀಗ ಒಂಬೊಂದು ಕೊಡ ನೀರು ಸುರುವಿ ಹೋಗ್ತಾರ. ಆದ್ಯಾಗ.... (ಎನ್ನುತ್ತ ಮೊದಲು ಕುಳಿತ ಜಾಗದ ಕಡೆ ನಡೆಯುವನು).

ಸಂಗ್ಯಾ:– (ತಕರಾರಿನ ದನಿಯಲ್ಲಿ ಗೊಣಗುತ್ತ) ನನಗ್ಯೊತ್ತಿತ್ತು– ಇದರ ಬುಡದಾಗ ಹೆಂಗ್ಸರ ಕಿತಾಪೀ ಐತಿ ಅಂತ.

ಸಣ್ಣಪ್ಪಜ್ಜ:– (ಕುಳಿತುಕೊಳ್ಳದೆ, ಹಿರಿತನದಿಂದ) ರುದ್ರಪ್ಪಾ, ಕಾಳಪ್ಪಾ, ನೀವು ಇನ್ನೂ ಗುದ್ಲಲಿ ಕೆಳಗಿಟ್ಟಿಲ್ಲ ಹೌದಲ್ಲೊ? (ನಗುವನು) ಏಳ್ರಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ಹಂಗಾರ- ಆ ಜಾಗದಿಂದ ನೆಲಸಮ ಮಾಡಿ, ಸಂಗ್ಯಾ ಸುರಿವಿದ ನೀರಿಗೆ ಎಲ್ಲಾ ಕಡಿ ಹರೀ ಮಾಡ್ರಿ.

ನಿಂಗ್ಯಾ:– ಕೇಸ ಎಂದ ಸುರೂ ಮಾಡೋದು ಹೇಳ್ಬಿಡು.

ಸಣ್ಣಪ್ಪಜ್ಜ.– (ಆಶ್ಚರ್ಯ ತೋರಿಸಿ) ಇನ್ನೇನು ಸುರೂ ಮಾಡೋದು ? ಸುರೂನೇ ಆಯ್ತಲ್ಲ ಮತ್ತ ? ನೀನೂ ಧರ್ಯಾ ಹೋಗ್ರಿ– ಆಲ್ಲಿ ಇಲ್ಲಿ ಹುಡುಕಿ ಕೊಂಡು ಸಿಕ್ಕಟ ಫರಶೀ ಕಲ್ಲು ತಗೊಂಡು ಬರ್ರಿ. ಹಂ– ಕಾಳಪ್ಪಾ, ನೀವೂ–

ರುದ್ರಪ್ಪ:– ಕಲ್ಲು ಆದ್ರೂ ಹಾಕಲಿ- ಆ ಮ್ಯಾಲೆ ಹರೀ ತಗೀಲಾಕ ಬಂದೀತು-

ಸಣ್ಣಪ್ಪಜ್ಜ:– ಅದ್ಯೇನು ? ಸಂಗ್ಯಾ– ಈಗ ನಾ ತೋರಿಸಿದ ಜಾಗೇ ಸಮ ಮಾಡು, ಹೋಗು, ಕಲ್ಲು ಕೂಡಿಸಾಕ. ಈ ಬಾಜು ಇಳಕಲ ಆಗೋ ಹಾಂಗ-

ಸಂಗ್ಯಾ:– (ಸಿಡುಕಿನಿಂದ) ಕಲ್ಲಾದ್ರೂ ಬರಲೆಲ್ಲ.

ಸಣ್ಣಪ್ಪಜ್ಜ:– ಏನಂತೀಯಪ, ಧರ್ಯಾ ಜಕ್ಕಡೀ ಹೂಡಿಕೊಂಡು ಬರಲ್ಯಾ–

ನಿಂಗ್ಯಾ:–
ಧರ್ಯಾ:– (ಒಮ್ಮೆಲೆ ಎದ್ದು) ನಿನ್ನ ಮತ್ತೇನಾದ್ರೂ ಕೆಲ್ಸ ಇದ್ದರ ಮಾಡೀಯಂತ. ಜಕ್ಕಡಿ ಹೂಡಿಕೊಂಡು ಕಲ್ಲು ತರೋದು ನಮ್ಗ ಕೂಡಿತು. (ಇಬ್ಬರೂ ಹೋಗುವರು.)

ಕಾಳಪ್ಪ :–
ರುದ್ರಪ್ಪ:– (ಒಬ್ಬರನ್ನೊಬ್ಬರು ನೋಡುತ್ತ ಒಬ್ಬರೊಬ್ಬರಿಗೆ) ಆಯ್ತು– ಗುದ್ದಲೀ ಸಲಕೆ–ತರೋಣ (ಇಪರಿಬ್ಬರೂ ಹೋಗುವರು.)

ಸಣ್ಣಪ್ಪಜ್ಜ:– ಹಾಂಗೇ ನೀಲಗೆ ಹೇಳಿರಿ, ನಾಲ್ಕಾರು ಹೆಣ್ಣಾಳು ಕರಕೊಂಡು ಬಾ ಅಂತ. ಇಲ್ಲ, ತಡೀ–ನಾನೇ ತಿಳಸಿ ಹೇಳ್ತೀನಿ– (ಹೋಗುವನು).

[ಬಂದು ನಿಮಿಷ ರಾಮಣ್ಣ ಮತ್ತು ಸಂಗ್ಯಾ ಸ್ತಬ್ಧರಾಗಿರುವರು].

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಮಣ್ಣ – (ಉಸಿರೆಳೆದು) ಈ ಮುದುಕನ ವಿಚಾರ ಆದ್ರೂ ಏನದ, ಅಂತೀನಿ.

ಸಂಗ್ಯಾ:– (ಸಿಡುಕಿನ ದನಿಯಲ್ಲಿ) ಒಂದೇ ನೀರು ತುಂಬಲಾಕ ಹೆಣ್ಮಕ್ಕಳು ಬರ್ತಿದ್ರ ನೋಡ್ತೀನಿ ಇವರ್ನ.

ರಾಮಣ್ಣ:– (ನಗುತ್ತ) ಬರ್ತಿದ್ರ ಅಂತ? ಬಂದರೂ ನೋಡದೆಯೆ ಬಿಡೋ ಮಗಾ ಏನು ನೀನು? ಅಂ? (ಗಟ್ಟಿಯಾಗಿ ನಗುವನು. ಸಂಗ್ಯಾನಿಗೆ ಸಿಡುಕಿನ ಸೋಗನ್ನು ಉಳಿಸಿಕೊಳ್ಳಲು ಶಕ್ಯವಿಲ್ಲದಾಗಿ ಅವನ ಮುಖವೂ ನುಗುಳ್ನಗೆಯಿಂದ ಅರಳುವುದು.)

(ತೆರೆ)

Sri Vidyabharathi Book Centre, Sringeri

CC-O. In Public Domain. Digitized by eGangotri

ದೃಶ್ಯ ೩.

[ಹಿಂದಿನ ದೃಶ್ಯದ ಮೂರು-ನಾಲ್ಕು ತಿಂಗಳ ತರುವಾಯ. ದೃಶ್ಯ ಹಿಂದಿನಂತೆಯೆ, ಆದರೆ ತುಸು ಬದಿಯಲ್ಲಿ. ಈಗ ಗಿಡದ ಬೊಡ್ಡೆ ರಂಗಸ್ಥಲದ ಎಡ ತುದಿಯಲ್ಲಿ ಅರ್ಧಮರ್ಧ ಕಾಣುತ್ತಿದೆ. 'ಕಟ್ಟೆ'ಯ ಒಂದು ಭಾಗವೂ ಕಾಣುತ್ತಿದೆ. ಬೆಳಗಿನ ೮-೮॥ ಸಮಯ. ಸಂಗ್ಯಾ 'ಕಟ್ಟೆ'ಯ ಮೇಲೆ ಕುಳಿತು ರೊಟ್ಟಿಯ ಗಂಟನ್ನು ಬಿಚ್ಚುತ್ತಿದ್ದಾನೆ. ಆದರೆ ಅದಕ್ಕಿಂತಲೂ ಮತ್ತೊಂದು ಯಾವುದೋ ಮಹತ್ವದ ಸಂಗತಿಯ ಕಡೆ ಅವನ ಲಕ್ಷ್ಯ ವಿದ್ದಂತಿದೆ. ಗಂಟನ್ನು ಕೈಗಳಿಂದ ಬಿಚ್ಚುತ್ತಿದ್ದರೂ ಒಂದೇ ಸವನೆ ಎದುರುಗಡೆ ನೋಡುತ್ತಿದ್ದಾನೆ. ಒಂದೆರಡು ನಿಮಿಷಗಳಲ್ಲಿ ತಟ್ಟನೆ ಗಂಟಿನ ಕಡೆ ಲಕ್ಷ್ಯ ಹೋದಂತೆ ಮಾಡಿ, ಬಿಚ್ಚಿದೆಯಾದರೂ ಆದನ್ನು ಬಿಚ್ಚುವಂತೆ ನಟಿಸುತ್ತ ಕೆಳಗೆ ಮುಖ ಮಾಡುತ್ತಾನೆ. ಗಂಟಲನ್ನು ಸರಿಪಡಿಸಿಕೊಳ್ಳುತ್ತಾನೆ. ಇಷ್ಟರಲ್ಲಿ ಎದುರಿನಿಂದ ನೀಲವ್ವ ಬರುವಳು. ಒಂದೆರಡು ಸಲ, ಅವಳು ಬಂದದ್ದು ಗೊತ್ತಿಲ್ಲದವನಂತೆ ಕೆಮ್ಮುತ್ತಾನೆ. ನೀಲವ್ವನ ತಲೆಯ ಮೇಲೆ ಒಂದು ಬುಟ್ಟಿ, ಅದರಲ್ಲಿ ಬದನೆಕಾಯಿ, ಸೌತೆಕಾಯಿ, (ನೀರ್-) ಉಳ್ಳಿಯಗಡ್ಡಿಗಳು, ಪಸಿಮೆಣಸಿನಕಾಯಿ, ಕೋತಂಬರಿ- ಇಂತಹ ಕಾಯಿಪಲ್ಯದ ಪದಾರ್ಥಗಳು ತುಂಬಿವಂತಿವೆ. ನೀಲವ್ವ ಸಂಗ್ಯಾನ ಕಡೆಗೆ ಲಕ್ಷ್ಯಗೊಡಬಾರದೆಂಬಂತೆ ರಂಗಸ್ಥಲದ ಒಂದು ತುದಿಯಿಂದ ಇನ್ನೊಂದು ತುದಿಗೆ ನಡೆದಿದ್ದಾಳೆ. ಆಕೆ ರಂಗಸ್ಥಲದ ಮಧ್ಯಕ್ಕೆ ಬರುವಾಗ ಸಂಗ್ಯಾ ಅಕಸ್ಮಾತ್ತಾಗಿ ಎಂಬಂತೆ ತಲೆ ಎತ್ತಿ ಆಕೆಯನ್ನು ನೋಡಿ, ಬಿಚ್ಚಿದ ಗಂಟನ್ನು ಒಮ್ಮೆ ನೋಡಿ-]

ಸಂಗ್ಯಾ:- (ಕೃತ್ರಿಮ ನಗೆಯಿಂದ) ಒಣಾ ರೊಟ್ಟೀನೇ ಐತಿ.

ನೀಲವ:- (ಮಾತನಾಡದೆಯೆ ಹೊರಡುತ್ತಿರುವಳು.)

ಸಂಗ್ಯಾ:- ಒಂದು ಗಡ್ಡಿ ಇಲ್ಲ್ಲಾಂದ್ರ ಮೆಣಸಿನಕಾಯಿ- (ಅವಳನ್ನು ಒಂದೇಸವನೆ ದಿಟ್ಟಿಸುತ್ತಿರುವ).

Sri Vidyabharathi Book Centre, Sringeri

CC-O. In Public Domain. Digitized by eGangotri

ನೀಲವ್ವ:– (ಸೆರಗನ್ನೆಳೆದುಕೊಂಡು ತುದಿಯನ್ನು ಗಟ್ಟಿಯಾಗಿ ಬಾಯಿಯಲ್ಲಿ ಹಿಡಿದುಕೊಳ್ಳುವಳು).

ಸಂಗ್ಯಾ- (ಖುಶಿತ್ತ) ನಾ ಕೈಹಚ್ಚಲೇನು ಬುಟ್ಟಿ ಇಳಿವಾಕ? (ಅವಳನ್ನು ಅಡ್ಡಗಟ್ಟುವಂತೆ ಇದಿರಾಗಿ ನಿಲ್ಲುವನು).

ನೀಲವ್ವ:– (ತುಸು ಹಿಂದೆ ಸರಿದು, ಬದಿಯಾಗಿ ನಿಂತು) ಹಾದಿ ಬಿಡಪ! ಪ್ಯಾಟಿಗೆ ಹೋಗಾಕ ಮದ್ಲಿಗೇ ಹೊತ್ತಾಗೇತಿ.

ಸಂಗ್ಯಾ :– (ಬುಟ್ಟಿಯನ್ನಿಳಿಸುವ ಇಚ್ಛೆಯಿಂದ ಕೈಗಳನ್ನೆತ್ತುತ್ತ) ತಗೊಂಡವನೆ ನಿನ್ನ ತೆಲೀಮ್ಯಾಗ ಇಟ್ಟೀ ಬಿಡ್ತೀನಿ ಬುಟ್ಟಿ, ಆಯ್ತಿಲ್ಲೊ ?

ನೀಲವ್ವ:– (ತುಸು ಕನಲಿ) ಆಯ್ಯ! ದೂರಾದ್ರೂ ಸರಿಯಲ್ಲ– ಹಾಂಗ್ಯಾಕ ಮೈಮ್ಯಾಗ ಬಂಧಾಂಗ ಮಾಡ್ತೀ?

ಸಂಗ್ಯಾ:– (ಸುತ್ತಲು ನೋಡಿ, ಸೂಚಕವಾಗಿ ಮಾತನಾಡುತ್ತ) ಇಲ್ಲಿ ಯಾರು ನೋಡಾಕ ನಿಂತಾರ ಬಿಡಪೆ?

ನೀಲವ್ವ:– (ಸಿಡುಕಿನ ದನಿಯಿಂದ) ಅಂದ್ರ? ಬುಟ್ಟಿ ನಿನ್ಮ್ಯಾಂದ ಸುರುವಂತೀಯೇನು?

ಸಂಗ್ಯಾ:– ತುಸು ಕೆಳಾಕಾದ್ರೂ ಮಾಡ್ತೀಯಿಲ್ಲೊ ಬುಟ್ಟೀ?

ನೀಲವ್ವ:– (ಸಿಟ್ಟಿನಿಂದ) ಅದ್ಯಾಕಂತೊ ?

ಸಂಗ್ಯಾ:– (ನಗೆಯಿಂದ) ಅಂದ್ರ, ನೀ ಕೈಯಿಂದ ಕೊಡೋದು ಬ್ಯಾಡ, ನಾನೇ ಕೈಹಾಕಿ ತೊಗೋತೀನಿ. ಹಹ!

ನೀಲವ್ವ:– (ದೂರ ಸರಿದು) ಯಾರಪ್ಪನ ಮನೀ ಗಂಟಲ್ಲ–ಕೈ ಹಾಕಿ ಹಿರಿದ್ಮೊಂಡು ತಕ್ಕೊಳ್ಳಾಕ!

ಸಂಗ್ಯಾ:– (ಅವಳನ್ನು ಕೆಕ್ಕರಿಸಿ ನೋಡುತ್ತ) ಅಂದ್ರ?

ನೀಲವ್ವ:– (ಅಬ್ಬರದಿಂದ) ಅಂದ್ರೇನಂದ್ರ ? ಸರಿ–ಹಾದಿ ಬಿಡೋಕೊ ನಿನ್–

ಸಂಗ್ಯಾ:– (ಅಪಮಾನಿತನಾಗಿ) ಎಲೆಲೆ! ಹಿಂಗೇನು? (ಸಿಟ್ಟಿನಿಂದ) ಯಾ ರಪ್ಪನ್ನಸ್ನೀ ಘಂಟಂತ! ಅಜೆ, ನನ್ನೂ ಹಕ್ಕೈತಿ ಅಂದೆ. ಖರೇ ನೀರ್ಹಾಕಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಆಲ್ಲ, ಮ್ಯಾಗ ಬೆಂವರ ಸುರಿಸೀನಿ. ಬೆಂವರಾ ! ತಿಳೀತೇನು? ಇದೆಲ್ಲಾ ಕಾಯಿಸಲ್ಲೆ ನಿನ್ಮಕಾ ನೋಡಿಯೇ ಬೆಳೆದೇತಿ ಅಂತ ತಿಳ್ದೀಯೇನ್ ?

ನೀಲವ್ವ:– ಯಾಕ? ಮಕಾ–ಗಿಕಾ ತಗೀತಿ ? ಸುಮ್ಮಕ ಹಾದಿ ಬಿಡ್ತೀಯೋ–

ಸಂಗ್ಯಾ:– (ಮುಂದೆ ಹೆಜ್ಜೆಯನ್ನಿಡುತ್ತ) ಇಲ್ಲಾ ಏನ್ಮಾಡ್ತೀ ? ಆಂ ? ಏನ್ಮಾಡ್ತೀ ಅಂದೆ.

ನೀಲವ್ವ:– (ತಾನೂ ಧೈರ್ಯದಿಂದ ನಿಂತು) ಆಗ್ಲಿ ಹಾಂಗಾದ್ರ. ಏನ್ಮಾಡ್ತೀ ನೋಡಾಣ. ನೀ ಒಂದೇ ಕೈ ಹಿಡ್ದು ತರುಬಾದ್ರೂ ತರುಬು–

ಸಂಗ್ಯಾ:– (ಚುಚ್ಚಿ ಮಾತನಾಡುತ್ತ) ಕೈಹಿಡ್ದು ತನ್ನ ತರುಬೂದಂತ (ತಿರಸ್ಕಾರ ಸೂಚಿಸುತ್ತ) ಹಂ–ನನಗೇನ್ಬೇಕಾಗೇತಿ ? ಒಂದು ಮೆಣಸಿನಕಾಯ್ಕಿ, ಒಂದು ಉಳ್ಳೀಗಡ್ಡಿ. ಆದು ನಿನ್ನ ಕೈಯ್ಯಾಗ ಐತ್ಯೋ ಏನ್ಬುಟ್ಯಾಗೈತ್ಯೋ ?

ನೀಲವ್ವ :– ಎಲ್ಲಿದ್ರೂ ನಿನ್ಗ ಸಿಗಾಣೆಲ್ಲ ಆಂಥೇಳದೆನಲ್ಲ ?

ಸಂಗ್ಯಾ :– (ಒಟ್ಟನಿಂದ) ಅದ್ಯಾಕಂತ ? ಯಾರ್ಕನೀ ಸೊಂತದ ಮಾಲು ಆಲ್ಲ ಅದು.

ನೀಲವ್ವ :– ನಿನ್ದೂ ಸೊಂತದ್ದಲ್ಲ—

ಸಂಗ್ಯಾ :– (ಕನಲಿ) ಎಲೆ ನಿನ ಸೊಂತ ? ನಾನೂ ಮೈಮುರಿ ಥುಡ್ದೀನಿ ಅದನ್ನ ಬೆಳೆಸೋದ್ರಾಗ—

ರಾಮಣ್ಣ :– (ಒಮ್ಮೆಲೆ ಬಂದು) ಯಾವದಕ್ಕೊ, ಸಂಗ್ಯಾ ?

[ಸಂಗ್ಯಾ ಒಮ್ಮೆಲೆ ಚಕಿತನಾಗಿ ತಿರುಗಿ ರಾಮಣ್ಣನನ್ನು ನೋಡುವನು. ಅಷ್ಟರಲ್ಲಿ ನೀಲವ್ವ ಸಮಯ ಸಾಧಿಸಿ ಜಾರುವಳು. ಸಂಗ್ಯಾ ಮತ್ತೆ ತಿರುಗಿ ನೋಡುವಷ್ಟರಲ್ಲಿ ಆಕೆ ಪಾರಾದಳೆಂಬುದನ್ನು ಕಂಡುಕೊಂಡು—)

ಸಂಗ್ಯಾ :– (ತ್ವೇಷದ ದನಿಯಲ್ಲಿ) ಹೆಂಗ್ಸಿನ ಜಾತಿ ಅಂದ್ರೇನೆ ಸಣ್ಣನಸಿನ್ದು !

ರಾಮಣ್ಣ :– (ನಗುತ್ತ) ಏನಾಯ್ತೊ ? ಏನು–ನಾ ಬರ್ಬಾರ್ದಾಗಿತ್ತೊ ?

ಸಂಗ್ಯಾ :– (ಒಮ್ಮೆಲೆ ಸಂತಪ್ತನಾಗಿ) ರಾಮಣ್ಣಾ, ಈ ಧಂದೇನೇ ಬ್ಯಾಡ ನನ್ಗ. ಠಕ್ಕರಾದರು ಎಲ್ಲಾರೂ. ಕೈ ಕೆಸರುಮಾಡಿ ದುಡೀಲಿಕ್ಕೆ ಸಂಗ್ಯಾ, ಬಾಯಿ ಮೊಸರು ಮಾಡಿಕೊಂಡು ಹೊಡೀಲಿಕ್ಕೆ ತಾವು.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಮಣ್ಣಿ :– (ಸಂದರ್ಭ ಇನ್ನೂ ತಿಳಿಯದ್ದಕ್ಕೆ ಆಧಿಕಾರವಾಣಿಯಿಂದ) ಏನೊ, ಧಡ್ಡಾ, ಏನಾಯ್ತು ಹೇಳಾದ್ರೂ ಹೇಳ್ಲ?

ಸಂಗ್ಯಾ:– (ಸಿಟ್ಟುಕಿನ ದನಿಯಲ್ಲಿ) ಆಗೋದೇನು? ಥೂ–ಇದರ (ರಾಮಣ್ಣನು ಮತ್ತೆ ಹೆಚ್ಚು ಆಧಿಕಾರದ ಸಟದಿಂದ ಕೇಳುವನಿದ್ದಾನೆಂಬುದನ್ನು ಕಂಡು) ಅಲ್ಲಿ– ಸಣ್ಣಾತ್ತು, ರಾಮಣ್ಣಾ. ಹೊಂತುಟ್ಲಿ ಎದ್ದು ಒಣ ರೊಟ್ಟಿ ತಿನ್ಬಾರ್ದು, ಜೋಡಿ ಕಚ್ಚಿಕೊಳ್ಳಲಿಕ್ಕೆ ಒಂದು ಹಸಿಮೆಣಸಿನಕಾಯಿ, ಸೌತೀಕಾಯಿ, ಉಳ್ಳೇಗಡ್ಡಿ ಏನಾದ್ರೂ ಇರಲಿ ಅಂತ ಕೇಳಿದರ—

ರಾಮಣ್ಣಾ:– (ಚಕಿತನಾಗಿ) ಕೇಳಿದಿ? ಯಾರಿಗೆ ಕೇಳಿದಿ?

ಸಂಗ್ಯಾ:– (ತಿರಸ್ಕಾರದಿಂದ) ಅಕ-ಹೋಯ್ತು ನೋಡು ವೈ ಕುಣಿಸಿಕೋತ-ಅದಕ್ಕ!

ರಾಮಣ್ಣಿ:– (ಇನ್ನೂ ಕುತೂಹಲವಳಿಯದೆ) ಹುಂ-ಅದಕ್ಕೇನಾಯ್ತು?

ಸಂಗ್ಯಾ:– ಕೊಡೋದಿಲ್ಲ, ಕೊಡೋದಿಲ್ಲ ಅಂದ್ಹೋಯ್ತೊ ಸೆಟವಿ! (ರಾಮಣ್ಣನು ನಗುವನು) ಎಲ! ನಿನ! ನಾ ಒಣರೊಟ್ಟಿ ಮುಕ್ಬೇಕಾಯ್ತು ಅಂತ ನೀ ನಗ್ತೀಯೇನಪ?

ರಾಮಣ್ಣ:– (ನಗೆಯನ್ನು ತಡೆಯುತ್ತ) ಅಲ್ಲೊ –ಹಹಹ! – ಭಾಳೀ ಧಡ್ಡಪ ನೀನು! ಅಲ್ಲೊ, ಶುಂಭಾ? ನಿನಗ ಕಾಯಿಪಲ್ಲೆ ಬೇಕಾಗಿತ್ತೊ ನೀಲಿನ್ನ ಮಾತಾಡಿಸೋದ್ಬೇಕಾಗಿತ್ತೊ?

ಸಂಗ್ಯಾ:– (ತಿಳಿಯದೆ) ಅಂದ್ರ?

ರಾಮಣ್ಣ:–ಅಂದ್ರೇನಂದ್ರ! ಈ ಮಗ್ಗ ಮೆಣಸಿನಕಾಯಿ ಬೇಕಾಗಿತ್ತಂತ-ನೀಲಿನ್ನ ಕೇಳಿದಂತ! ಅವರಪ್ಪನ ಮುನಿ ತ್ವಾಟ ಇದು!

ಸಂಗ್ಯಾ'– (ಹೊಳೆಯದೆ) ಅಂದ್ರೇನ್ಮಾಡ್ಬೇಕಾಗಿತ್ತಂತೀ?

ರಾಮಣ್ಣ:– (ತುಸು ಕನಲಿ) ಏನ್ಮಾಡ್ಬೇಕಂದ್ರ? ಬರಾಬರಾ ಹೋಗ್ಬೇಕು, ಏನ್ಬೇಕದನ್ನ ಹಿರಿದು ತಗೀಬೇಕು, ತಿನ್ನಬೇಕು! 'ಏನ್ಮಾಡ್ಬೇಕಾಗಿತ್ತಂ'ತ! ಹಃ

ಸಂಗ್ಯಾ:– (ಪೆಚ್ಚನಂತೆ ಸ್ತಬ್ಧನಾಗಿ ನಿಲ್ಲುವನು).

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಮಣ್ಣ:–(ಕಟ್ಟಿಯ ಮೇಲೆ ಕುಳಿತುಕೊಂಡು ಆವನನ್ನು ದಿಟ್ಟಿಸಿ ನೋಡುತ್ತ) ಯಾಕೊ? ನಿಂತ್ಯಾಕ ಗೊಂಬೀ ಹಾಂಗ? (ಸಂಗ್ಯಾ ಹಾಗೇ ನಿಲ್ಲಲು ತಿರಸ್ಕಾರ ಸೂಚಕ ದನಿಯಲ್ಲಿ) ಹೇಡಿ–ನೀನು, ಸಂಗ್ಯಾ! ಹೆಂಗ್ಸಿನ ಸೆರಗಿಗೆ ಜೋತು ಬಿದ್ದು ಬೇಡಿಕೊಳ್ಳಲಿಕ್ಕೆ ಬರ್ತದ, ರಟ್ಟಿಯ ಕಸುವಿನಿಂದ ತಕ್ಕೊಳ್ಳಿಕ್ಕೆ ಬರೋದಿಲ್ಲ!

ಸಂಗ್ಯಾ:– (ನೊಂದ ದನಿಯಲ್ಲಿ) ರಾಮಣ್ಣಾ, ಆದಲ್ಲ–ಆದ್ರ–

ರಾಮಣ್ಣ:– (ನಡುವೆಯೆ, ಕನಲಿದ ದನಿಯಲ್ಲಿ) ಆದ್ರೇನೊ, ಮಗನೆ! ನಿನ್ನ ಕೈಲೆ ಆಗದಿದ್ರ, ಇಕ! ನೋಡು– (ಎಂದು ಏಳಬೇಕೆನ್ನುವಷ್ಟರಲ್ಲಿ)

ಸಂಗ್ಯಾ:–(ಧಾವಿಸಿ ಬಂದು ಆಡ್ಡಗಟ್ಟುವವನಂತೆ) ರಾಮಣ್ಣಾ–ರಾಮಣ್ಣಾ–

ರಾಮಣ್ಣ:– (ಏಳುವ ನಾಟಕದ ಪರಿಣಾಮವಾಯ್ತೆಂದು ಕಂಡು) ನೋಡಿದಿಲ್ಲೊ? ಮಾತಾಡಿದ್ರ ಸಿಟ್ಟು–ಮ್ಯಾಲೆ ಹೇಡಿ ಇದ್ದದ್ದು ಸುಳ್ಳಲ್ಲ.

ಸಂಗ್ಯಾ:– (ತುಸು ಕನಲಿ) ಎಲೆ! ಯಾಕ 'ಹೇಡಿ ಹೇಡಿ' ಅಂತ ನನ್ತಡವ್ತೀಯೊ, ರಾಮಣ್ಣಾ? ಏನ್ದೊಡ್ಡ ಕೆಲ್ಸ ಐತಿ ಅದು. ಆದ್ರೂ–

ರಾಮಣ್ಣ:– (ನಡುವೆಯೆ) 'ಆದ್ರೂ'– ಏನು?

ಸಂಗ್ಯಾ:– ಏನೊ–ಸಣ್ಣಪ್ಪಜ್ಜ ಹೇಳ್ಯಾನ–

ರಾಮಣ್ಣ:– (ತಿಳಿಸಿ ಹೇಳುವವನಂತೆ) ಅಡ್ಯೇ ನೀ ಧಡ್ಡ ಅನ್ನೋದು. ಸಣ್ಣಪ್ಪಜ್ಜ ಹೇಳ್ಯಾನಂತ....ಆದ್ರ, ನಿನ್ನ ಮಾತು ಬ್ಯಾರೆ–

ಸಂಗ್ಯಾ:– (ಸಂಶಯದ ದನಿಯಲ್ಲಿ) ಅಂದ್ರ?

ರಾಮಣ್ಣ– ಅಂದ್ರೇನು? ಖರೇ ಈ ಪಲ್ಲೆಯ ತ್ವಾಟದ ಮಾಲಕ ನೀನು–

ಸಂಗ್ಯಾ (ನಗೆಯಿಂದ) ಛೆ! ಛೆ! ಅದನ್ನ ಸುಮ್ಮಾಕ ನೀಲಿಸ್ನ ತಡಪ್ಲೇಕು ಅಂತ ಅಂದದ್ದು.

ರಾಮಣ್ಣ:– ನೀ ಅಂದದ್ದಲ್ಲ, ನನಗ ತಿಳಿದದ್ದನ್ನ ಹೇಳ್ತೀನಿ. ಈಗ ನೋಡು–ಸಣ್ಣಪ್ಪಜ್ಜ ಹೇಳಿದ ಜಾಗಾದಾಗ ನೀನು ದನದ ಮೈ ತೊಳೀತಿದ್ದಲ್ಲ ಅಂದ್ರೇನಾಗ್ತಿತ್ತು? ಕಾಯಿ-ಪಲ್ಲೆ ತ್ವಾಟ ಆಗ್ತಿತ್ತ?

ಸಂಗ್ಯಾ:– ದನದ ಮೈಯ್ ನಾ ತೊಳೆದ್ರೇನಾತು? ಉಳಿದೋರು ನೀರು ತಂದು ಸುರುವಿರ್ತಾರಲ್ಲ?

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಮಣ್ಣ:– ಯಾರು ಹೇಳಿದ್ದರು ಅವರಿಗೆ? ನಿನ್ನಷ್ಟಕ್ಕೆ ನೀ ಕೆರೀವಳ್ಗೇ ದನದ ಮೈ ತೊಳೀತಿದ್ದಿಲ್ಲೇನು? ನೀ ಅಲ್ಲಿಯ ಮಟ ಹೋಗಿ ತೊಳೀತಿ ಅಂತ, ನೀರಾಯ್ತು, ನೀರಿಗೆ ಹರಿ ಆಯ್ತು, ಕಾಯಿಪಲ್ಲೇದ ಮಡಿ ಆದವು. ಹೌದಲ್ಲೊ?

ಸಂಗ್ಯಾ:– ಅದೂ ಕರೇವನ್ನು–

ರಾಮಣ್ಣ:– ಅನ್ನು ಅಲ್ಲ ಮತ್ತ? ನಾನೂ ಆವ್ನೇ ಹೇಳ್ತೀನಿ. ಖರೇ ಕಾಯಿಪಲ್ಲಿ ತ್ವಾಟದ ಮಾಲಕ ನೀನು. (ಸಂಗ್ಯಾ ಯೋಚನೆಯಲ್ಲಿ ಸಿಕ್ಕಪ್ಪನ್ತು ಕಂಡು) ಮತ್ತ ಇನ್ನೊಂದು ಮಾತು. ಈಗ ನೀಲಿ ಬುಟ್ಟಿ ತುಂಬಿಕೊಂಡು ಹೋದಳಲ್ಲ? ಹೋಗ್ತ ಹೋಗ್ತ ಒಂದು ಹಿಡಿ ಪಲ್ಲೆ ತನ್ನ ಮನ್ಯಾಗ ಇಟ್ಕೊಳ್ಳೋದಿಲ್ಲ ಅಂತ ಯಾತರ ಮ್ಯಾಲಿಂದ?

ಸಂಗ್ಯಾ:– (ಒಮ್ಮೆಲೆ ಹೊಳಪಂತಾಗಿ) ಹಂ–ಇದು ಮಾತ್ರ ಮುದ್ದೇದ ಮಾತು ಹೇಳದಿ ನೋಡೊ ರಾಮಣ್ಣಾ. ಹೆಂಗ್ಸಿನ ಜಾತಿ; ಏನ್ ಹೇಳಾಕ ಬರೋದಿಲ್ಲ.

ರಾಮಣ್ಣ:– (ಗಿದ್ದವನಂತೆ) ಹೌದಲ್ಲೊ? ನೀ ಯಾಕ ಸಾಯ್ತಿ ಹರಿಶ್ಚಂದ್ರ ಆಗ್ಲಿಕ್ಕೆ? ಇಕ–ಸಂಗ್ಯಾ ನಾ ಹೇಳ್ತೀನಿ ಕೇಳು. ನೆಲ ಮೆತ್ತಗ ಅಂತ ಗುದ್ದೋ ಜನ ಇದು. ನಿನಗ್ಯೊತ್ತದ ಏನು? ಇದೆಲ್ಲಾ ಪಲ್ಲೆ ಮಾರಿ ಬಂದ ರೊಕ್ಕದ್ದೇನಾಗ್ತದ ಅಂತ?

ಸಂಗ್ಯಾ:– ಸಣ್ಣಪ್ಪಜ್ಜ ಹೇಳ್ತಿದ್ದ ಆ ರೊಕ್ಕ ಕೂಡ್ಸಿ ಊರಿಗೊಂದು ರೇಡೊ–

ರಾಮಣ್ಣ:–(ನಡುವೆಯೆ) ಅಜ್ಜ ಹೇಳ್ತಿದ್ದ, ಅಪ್ಪ ಹೇಳ್ತಿದ್ದ ! ಆ ಕತೆ ಬ್ಯಾಡ ನನ್ಗ. ನೀ ನೋಡೀದಿ ಏನು ರೊಕ್ಕ ಯಾರ ಕೈಗೆ ಹತ್ತದ ಅಂತ? "ಊರಿಸೊಂದು" ಅಂತ? ಅಂದ್ರೇನು ರೇಡಿಯೊ ಊರ ಹೆಸರ್ಲೆ ತರಿಸ್ತಾರೊ ಏನು ಸಣ್ಣಪ್ಪಜ್ಜನ–

ಸಂಗ್ಯಾ:– (ಎದುರು ದೂರದಲ್ಲಿ ಏನನ್ನೊ ಕಂಡವನಂತೆ) ಶ್ ಶ್–

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಮಣ್ಣ :– (ಸಿಟ್ಟಿನಿಂದ) ನನಗ ಶ್‌ಶ್ ಮಾಡ್ತೀ ಏನು, ಮಗನ? ನಿನ್ಹಾಂಗ ಹೇಡಿ ಅಲ್ಲ ನಾನು. ಬೇಕಾದೋರು ಬರಲಿ, ಅವರ ಮಾರೀ ಮ್ಯಾಲೇ ಹೇಳ್ತೀನಿ–

ಸಣ್ಣಪ್ಪಜ್ಜ :–(ಎದುರುಗಡೆಯಿಂದ ಬರುತ್ತ) ಏನಪ, ರಾಮಣ್ಣಾ, ಮಾರೀ ಮ್ಯಾಗ ಹೇಳೋ ಮಾತು ?

ರಾಮಣ್ಣ :– (ತಿರಸ್ಕಾರದಿಂದ) ಏನೇನ್ಮಣ್ಣಾ ? ಸಂಗ್ಯಾನ ಮಾತು– ಅವನಿಗೆ ಒಂದು ಸೌತೆಕಾಯಿ ಬೇಕಾಗಿತ್ತಂತ-ಅದಕ್ಕ ಎಷ್ಟು ಅರ್ಭಾಟ !

ಸಣ್ಣಪ್ಪಜ್ಜ :– (ಕುಳಿತುಕೊಳ್ಳುತ್ತ) ಹೌದೋ, ಸಂಗ್ಯಾ. ಈಗ ನೀಲಿ ಹೇಳಿದಳು ನನಗ. ಎಲ್ಲಿ ಕೂಡಿದ್ದಿ ಆಕಿಗೆ ನೀನು ?

ಸಂಗ್ಯಾ :– (ಸಂದರ್ಭ ತಿಳಿಯವೆ ಆಶ್ಚರ್ಯಸೂಚಕ ದನಿಯಲ್ಲಿ) ಎಲ್ಲಿ ? ಎಲ್ಲಿ ಅಂದ್ರ ಮತ್ತೆಲ್ಲಿ ? ಇಲ್ಲೇ ಕುಂತಿದ್ದೆ ನಾನು—

ಸಣ್ಣಪ್ಪಜ್ಜ :– (ನಡುವೆಯೆ ಅತ್ಯಂತ ಚಕಿತನಾದವನಂತೆ) ಇಲ್ಲಿ ? ಇಲ್ಲೇ ಕುಂತಿದ್ದೆಯಾ ? ಇಲ್ಲಿ ಕುಂತು ಆಕಿಗೆ ಕೇಳಿದೆಯಾ ?

ಸಂಗ್ಯಾ :– (ಸಂಶಯ, ಹೆದರಿಕೆ) ಯಾಕ, ಏನಾತು ?

ಸಣ್ಣಪ್ಪಜ್ಜ :– (ನಗುತ್ತ) ಭಪ್ಪರಿ, ಮಗನ ! ಕಣ್ಮುಂದ ಕಾಯಿ:ಪಲ್ಲೆ ಹಸರ ಸುರೀತೈತಿ ಎದ್ದು ಕೆತಗೋಳಾಕ ಆಗ್ಲಿಲ್ಲ ?

ಸಂಗ್ಯಾ:– (ಸಂಶಯ ಹೆಚ್ಚಿ) ಅಂದ್ರ ?

ಸಣ್ಣಪ್ಪಜ್ಜ :– (ನಗೆಯಿಂದಲೆ) ನಿನಗ ಯಾರು ಬ್ಯಾಡ ಅಂದಿದ್ರು ? ತಗೋ, ತಗೋ ಅಲ್ಲಿ ಬೇಕಾದಸ್ಟು.

ಸಂಗ್ಯಾ:– (ಮೇಲಿನಂತೆಯೆ) ಬೇಕಾದಟ ತಗೋ ಅಂದ್ರ ? ನಾ ಯೇನ್ಮಾರಾಕ ಒಯ್ತೀನೆ ? ರೊಟ್ಟಿ ಜೋಡಿ ಕಚ್ಚಿಗೋಳಾಕ—

ಸಣ್ಣಪ್ಪಜ್ಜ :– (ನಡುವೆಯೆ) ಅಯ್ಯೇ ತಗೋ ಅಂವೆ.

ರಾಮಣ್ಣ :– ನಾನೂ ಅದ್ನೇ ಹೇಳ್ತಿದ್ದೆ. ಮೈಮುರಿ ದುಡಿತಾನ ಅದರ ಸಲುವಾಗಿ. ಅದೇನು ಯಾರಪ್ಪನ ಮಾಲಿಕೀದಲ್ಲ ? ಬೇಕಾದೋರ ಮಾರೀ ಮ್ಯಾಲೆ ಈ ಮಾತು ಹೆಳ್ತೀನಿ, ತಗೋ ಅಂತ ನಾನೂ ಹೇಳಿದ್ರೂ—

CC-O. Vidyabharathi Book Centre, Sringeri

CC-O. In Public Domain. Digitized by eGangotri

(ಸಂಗ್ಯಾ ಚಕಿತ ದೃಷ್ಟಿಯಿಂದ ತನ್ನನ್ನು ನೋಡಲು ರಾಮಣ್ಣ ತಡೆಯುವನು)

ಸಣ್ಣಪ್ಪಜ್ಜ:– (ನಗುತ್ತ) ಸಂಗ್ಯಾನ ಮಟ್ಟಿಗೆ ಅವನ ಸೊಂತದ ಮಾಲ ಕೀದೇ ಅನ್ನು.

ಸಂಗ್ಯಾ:– (ಈಗ ಎಲ್ಲ ಹೊಳಿದಂತೆ) ಅಂದ್ರ? ನಾ ಕೈಹಾಕಿ ತಗೊಂಡೇ ತಗೋತೀನಿ ಅಂತಿಯೇನು?

ಸಣ್ಣಪ್ಪಜ್ಜ:– (ಹಿರಿತನದ ಧನಿಯಲ್ಲಿ) ತಗೊಂಡ್ರು ಏಟಂ(ಎಷ್ಟಂ)ತ ತಗೊಂಡಿಯೊ, ಹುಚ್ಚೊಟ್ಟಿ? ಏನ್ಮನೀಯ, ಮಾರ? ಹೆಂಡ್ರ? ಕೂಸು ಕುನ್ನಿಯೆ? ನಿನ್ನ ರೊಟ್ಟೀ ಜೋಡಿ ಕಡಿದುಕೋಳಾಕ ಅಂತ ತಗೊಂತಿ. ಬೇಕಾದಟ ತಗೋ ಅಂತ ಹೇಳಿದೆನಲ್ಲ? (ರಾಮಣ್ಣ ಗಹಗಹಿಸಿ ನಗುವನು) ಯಾಕಪ? ನಿನ್ಗೆನ್ನೋಜನಿಸ್ತು?

ರಾಮಣ್ಣ:– (ನಗೆಯನ್ನು ತಡೆಯುತ್ತಾ, ಸಣ್ಣಪ್ಪಜ್ಜನನ್ನು ಪೂರ್ತಿಯಾಗಿ ಲಕ್ಷಿಸಿ, ಸಂಗ್ಯಾನಿಗೆ) ತಿಳೀತೇನೊ, ಸಂಗ್ಯಾ? ಬೇಕಾದಷ್ಟು ಮೆಣಸಿನಕಾಯಿ ತಿನ್ನು, ಮಗನೆ. ಮೆಣಸಿನಕಾಯಿ, ಉಳ್ಳಿಗಡ್ಡಿ ಹೊಟ್ಟಿತುಂಬ ತಿಂದು ಗಳಾ ಗಳಾ ಕಣ್ಣೀರು ಸುರಿಸು. ಆದ್ರ, ಮಾರಿ ಬರೋ ರೊಕ್ಕದಾಗ ನಿನ್ನ ಪಾಲು ಕೇಳಬ್ಯಾಡ.

ಸಣ್ಣಪ್ಪಜ್ಜ:– (ಚಕಿತನಾಗಿ) ರೊಕ್ಕದಾಗ ಪಾಲು?

ರಾಮಣ್ಣ:– (ಸಂಗ್ಯಾನಿಗೆ) ಕೇಳ್ಲಿಲ್ಲ, ನಿಮ್ಮ ಸಣ್ಣಪ್ಪಜ್ಜನ್ನೆ! ಸುಳ್ಳುಳ್ಳೇ ನನಗ ತ್ರಾಸ ಕೊಡ್ತಿದ್ದಿ.

ಸಣ್ಣಪ್ಪಜ್ಜ:– (ಪೂರ್ತಿಯಾಗಿ ಬೆರಗಾಗಿ) ಏನೊ ಇದು, ಸಂಗ್ಯಾ?

ಸಂಗ್ಯಾ:– (ರಾಮಣ್ಣನನ್ನು ಮಿಕಿ ಮಿಕಿ ನೋಡುತ್ತ ಸ್ತಬ್ಧನಾಗಿ ನಿಲ್ಲುವನು.)

ರಾಮಣ್ಣ:– (ಸಂಗ್ಯನಿಗೆ ಗಟ್ಟಿಸಿ) ತುಟಿ ಬಿಚ್ಚಲ್ಲ (ಸಂಗ್ಯಾ, ಈಗ ಸಣ್ಣಪ್ಪಜ್ಜನನ್ನು ನೋಡುತ್ತ ಸ್ತಬ್ಧನಾಗಿ ನಿಲ್ಲುವನು. ಸಣ್ಣಪ್ಪಜ್ಜನು ರಾಮಣ್ಣನನ್ನು ಪ್ರಶ್ನಾರ್ಥಕ ದೃಷ್ಟಿಯಿಂದ ನೋಡುವನು). ಸಣ್ಣಪ್ಪಜ್ಜ, ಸಂಗ್ಯಾನ್ದೂ ಯೋಗ್ಯ ಆದ. ಅವನಿಗೇನು ಮನೆ ಆದನ, ಮಾರು ಆದನ? ನನ್ಮಟ್ಟಿಗೆ ನಾ ಜೈನಿ ಹೊಡೀತೀನಿ ಅಂತಾನ. (ದೇಶಾವರಿಯನ್ನುಂಡು) ಹರೇದ ಹುಡ್ಗ, ಹ್ಯಾಂಗ ಅನ್ನಿಸೋದೇ ಅವನಿಗೆ-

Sri Vidyabharathi Book Centre, Sringeri

 CC-O. In Public Domain. Digitized by eGangotri

ಆದಕ್ಕ ಅವ ಏನಂತಾನಂದ್ರ, ಪಲ್ಲೆ ಮಾರಿದ್ದರಾಗ ತನ್ನ ಪಾಲು ತನಗ ರೋಖ ಹಣ ಬರಲಿ ಅಂತ–ಅಂದ್ರ– (ಸಂಗನ ನೆಟ್ಟ ದೃಷ್ಟಿಗಾಗಿ ತಡವರಿಸಿ ನಿಲ್ಲುವನು.)

ಸಣ್ಣಪ್ಪಜ್ಜ :- (ಅನುಭವಿಕನಂತೆ ಎಲ್ಲವನ್ನೂ ತಿಳಿದುಕೊಂಡು) ಹಂ— ಹೀಂಗಂತಾನೇನು? ಹೌದೇನೊ, ಸಂಗ್ಯಾ? ನಿನ್ನ ಪಾಲು ಬೇಕೇನು? (ಒಮ್ಮೆಲೆ ರಾಮಣ್ಣನಿಗೆ) ಅದ್ರ, ರಾಮಣ್ಣಾ, ಇದರಿಂದ, ಯಾರದೂ ಪಾಲು ಇಲ್ಲಲ? ಹಂಜೋದು ಹ್ಯಾಂಗ?

ರಾಮಣ್ಣ:- (ವಿಶ್ವಾಸವಿಲ್ಲೆಂಬ ನಗೆಯಿಂದ) ಯಾರದೂ ಇಲ್ಲ?

ಸಣ್ಣಪ್ಪಜ್ಜ :- (ಯೋಚಿಸಿ ಮಾತನಾಡುವವನಂತೆ) ಹಾಂಗ ಕೇಳಿದ್ರ ಯಾರದೂ ಪಾಲ ಇಲ್ಲ; ಹೀಂಗ ಕೇಳಿದ್ರ ಎಲ್ಲಾರ್ದೂ ಹಕ್ಕೈತಿ ಈ ಪಂಚೇತಿ ಹ್ಯಾಂಗ ಬಿಡಿಸೋದು?

ರಾಮಣ್ಣ:- (ತುಸು ದರ್ಪದಿಂದ) ಎಲ್ಲಾರ್ದೂ ಹಕ್ಕಿರ್ಲಿ ಬಿಡ್ಲಿ. ದಿನ ಬೆಳಗಾದ ಕೂಡಲೆ ಊರ ದನ ಒಂದು ಜಾಗಾದಾಗ ಮೈ ತೊಳೀತಾನ, ಅವನಷ್ಟ–

ಸಣ್ಣಪ್ಪಜ್ಜ:- (ನಡುವೆಯೆ) ಎಲೆ! ಹೀಂಗ ಲೆಕ್ಕ ಹಾಕ್ತೀಯೇನು ಹಕ್ಕಿನ್ದು? ದನದ ಮೆಯ್ ತೊಳೆಯೋದಕ ಪಾಲು? ಹೀಂಗಿದ್ರ– (ಒಂದು ನಿಮಿಷ ಯೋಚನೆ ಮಾಡಿದಂತೆ ನಟಿಸಿ) ಸಂಗ್ಯಾ, ಹೀಂಗಿದ್ರ ನಾಳನಿಂದ ನೀ ದನದ ಮೆಯ್ ತೊಳೆಯೋದ್ನೆ ಬಿಡು.

ಸಂಗ್ಯಾ:- (ಹೆದರಿಕೆ, ಆಶ್ಚರ್ಯ) ಇಲ್ಲ-ಯೆಜ್ಜಾ–ಹಾಂಗಲ್ಲ– ಅದಲ್ಲ–

ರಾಮಣ್ಣ:- (ಸಂಗ್ಯಾನಿಗೆ ಗದರಿಸುತ್ತ) ನೀ ಸುಮ್ಮ ಕೂಡೊ! (ಸಣ್ಣಪ್ಪಜ್ಜನಿಗೆ) ಅಂದ್ರ ನಾಳನಿಂದ ಅವ ಏನ್ಮಾಡ್ಬೇಕಂತೀ?

ಸಣ್ಣಪ್ಪಜ್ಜ:- ಅವ ಏನ್ಮಾಡೋದು? ದನ ಕೆರೀವಳ್ಗ ಕೂಡ್ತಾವ, ಮೆಯ್ ಹಸನಾಗ್ತದ, ಆತು.

ರಾಮಣ್ಣ :- (ನಕ್ಕು) ಹಹ! ಅಂದ್ರ ನೀರು ಸ್ವಚ್ಛ ಇರ್ಬೇಕು ಅನ್ನೋ ಹಟ ಮುಗೀತನ್ನು. ಹಹ! ನನ್ಗ ಮೊದಲಿಗೇ ಗೊತ್ತಿತ್ತು, ನಿಮ್ಮಂದಿಗೆ ಸ್ವಚ್ಛತಾ ಭಾಳ ದಿನ ತಡೆಯೋದಿಲ್ಲ ಅಂತ. ಹಹ!

ಸಣ್ಣಪ್ಪಜ್ಜ:- ನಮ್ಮಾತು ಹೇಳಲಿಲ್ಲ, ರಾಮಣ್ಣಾ. ನಿನ್ನೆ ಛೆಂಜಿಗೆ ಜನ ಎಲ್ಲಾ ಸೇರಿತ್ತು. ಆಗ ಗೊತ್ಮಾಡೀತಿ. ಸೊಚ್ಚ ಕುಡಿಯೋ ನೀರಿಗೆ ಒಂದು ಛಾಂವೀನೇ ಆಗೀಬೇಕು ಅಂತ.

Sri Vidyabharathi Book Centre, Sringeri

 CC-O. In Public Domain. Digitized by eGangotri

ರಾಮಣ್ಣ:– ಭಾಂವಿ? ಎಲ್ಲಿ? ಜಾಗ ಎಲ್ಲಿ? ಯಾವಾಗ ಗೊತ್ಮಾಡಿತು? (ಮುಂತಾಗಿ ಸುರಿಮಳೆ)

ಸಣ್ಣಪ್ಪಜ್ಜ:– (ನಗೆಯಿಂದ) ಊರ ಜನ ಒಂದಾದ್ರ ಭಾಂವಿಗೆ ಜಾಗಾ ಸಿಗ್ದೇ ಹೋಗ್ತೇತೆ? ಭಾಂವಿ ತಗೆಯೋದು (ಚುಚ್ಚುವ ನಗೆಯಿಂದ) ಮತ್ತ ಯಾರ್ಯಾರು ಗುದ್ದಲಿ-ಸಲಿಕೆ–ಹಾರಿ-ಬುಟ್ಟಿ ತಗೊಂಡು ಬಂದು ದುಡೀತಾರ ಅವರ ಪಾಲಿಗೆ ಭಾಂವಿ ನೀರು ಅಂತ ಗೊತ್ಮಾಡೇತಿ? (ಸಂಗನಿಗೆ) ಯಾಕೊ, ಸಂಗ್ಯಾ, ಅವರವ್ರಿಗೆ ಅವರವ್ರ ಪಾಲು. ಹೊಂಯ್ಯಂತಿಯಿಲ್ಲೊ? ಆಂ? (ನಗುತ್ತಲೆ ಎದ್ದು, ಸಂಗನ ಹತ್ತಿರ ಬಂದು. ಅವನ ಹೆಗಲ ಮೇಲೆ ಕೈಯಿಟ್ಟು) ಹರೇದ ಹುಡುಗ, ನಿನ್ಮಟ್ಟಿಗೆ ನೀ ಜೈನೀ ಹೊಡಿಬೇಕಂತಿಯಲ್ಲ? ನೋಡ್ಹಾಂಗಿದ್ರ. ಗುದ್ದಲೀ–ಸಲಿಕೀ ತಗೊಂಬಾ, ಜೈನೀನೇ ಜೈನಿ.ಯಿಚಾರ್ಮಾಡು (ಹೊರಡುತ್ತ) ಬೇಕಾರ ರಾಮಣ್ಣನ್ನ ಕೇಳು, ಬೇಕಾರ ಮತ್ಯಾರ್ನರೆ ಕೇಳು, ಆದ್ರ ಗಂಡ್ಸನ್ನ ಕೇಳು, ಹೆಣ್ಮಕ್ಕಳ್ನ ತರುಬಿ ಕೇಳಬ್ಯಾಡ (ನಗುತ್ತಲೆ ಹೋಗುವನು. ಸಂಗ್ಯನು ನೆಟ್ಟ ದೃಷ್ಟಿಯಿಂದ ಅವನು ಹೋದತ್ತ ನೋಡುತ್ತ ಕಲ್ಲು ಗೊಂಬೆಯಂತೆ ನಿಲ್ಲುವನು.)

ರಾಮಣ್ಣ:– (ಎಷ್ಟೊತ್ತಾದರೂ ಸಂಗ್ಯಾ ಹಾಗೇ ನಿಂತುದನ್ನು ನೋಡಿ ತಡೆಯದಂತಾಗಿ, ಸಿಟ್ಟಿನಿಂದ) ಹುಂ-ಇನ್ನು ಗುದ್ದಲಿ-ಸಲಿಕೆ ಹೊತ್ತುಕೊಂಡು ಹೋಗು. ಆಗಿ, ಏನಪ? ನಿನ್ನ ಪಾಲಿನ್ದು ಅಂತ ನಿನ್ಗ ಕೊಡ್ತಾರ— ಮಣ್ಣು!

ಸಂಗ್ಯಾ:– (ಒಮ್ಮೆಲೆ ರಾಮಣ್ಣನಕಡೆ ಮುಖ ತಿರುಗಿಸಿ ಸಂತಪ್ತನಾಗಿ) ಖಬರ್ದಾರ್ ನನ್ನ ಕೆಣಕ್ದೀಯಂದ್ರ?

ರಾಮಣ್ಣ:– (ಸಿಟ್ಟಿನಿಂದ ಏಳುತ್ತ) ಏನಂದಿ?

ಸಂಗ್ಯಾ:– (ಸೆಟೆದು ನಿಂತು) ಹೌದ್ಮತ್ತ. ಹುಚ್ಚ ಮಾಡ್ತಾನ ನನ್ನ! ಯಾಕ್ಸುಳ್ಳ ಹೇಳಿದಿ ಯಜ್ಜನ್ಮಂದ?

ರಾಮಣ್ಣ:– ಎಲಾ ಶಕ್ಕ ಮಗನ! ನನ್ನ ಮ್ಯಾಲೇ ತಿರುಗಿ ಬೀಳ್ತಿಯಾ? ನಿನ್ಗ ಚಲೋ ಆಗ್ಲಿ ಅಂತ (ಎನ್ನುತ್ತ ಮುಂದೆ ಅಬ್ಬರದಿಂದ ಹೆಜ್ಜೆಗಳನ್ನಿಡುವಾಗ ತುಸು ಹೂರದಿಂದ ಒಮ್ಮೆಲೆ "ಎಲೆ! ಎಲೆ! ಜಿಗಿ!"—"ಏ-ಕರೇ ಎತ್ತಿನ್ನ ಬಿಗೀ ಹಿಡಿ"–"ಗಾಲಿ ಹಾರ್ತೈತಿಯೋ"– ಎಲ! ಎಲ!"-ಥೂ ಘಾತ ಆತು! ಬರ್ಕೊ" "ಸಂಗಪ್ಪನ ಗಾಡಿ!" "ಕೆಳಗ ಸಿಕ್ಕ ಏನು ನೋಡ್ರಿ"—ಮುಂತಾಗಿ ಆ ಜನರ ಆಕ್ರೋಶ ಕೇಳುವುದು. ಶಕ್ಕವಿದ್ದಲ್ಲಿ ಆಘಾತದ ಕಡೆ ಜನ ಕೂಗುತ್ತ ಧಾವಿಸುತ್ತಿದೆ ಎಂಬಂತೆ ನಟಿಸಬೇಕು).

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಮಣ್ಣ:– (ಒನ್ಮೈಲೆ ಸಿಡುಕಿನಿಂದ) ಯಾಕ ಗಂಟಲಾ ಹರ್ಕೊಂಡು ಸಾಯ್ತೀರೊ ? (ಎಂದು ಕೂಗು ಕೇಳ ಬರುವ ದಿಕ್ಕಿಗೆ ನೋಡುವನು).

ಸಂಗ್ಯಾ:– (ಆ ಕಡೆಗೇ ನೋಡುತ್ತ) ಥೂ ನಿನ! ಗಾಡಿ ಲಾಗಾನೇ ಹೊಡೆದು ತಿರುವಿ ಬಿತ್ತು ಕಾಣ್ತದ....ಕೆಳಗ ಯಾರು ಸಿಕ್ಕಗಿಕ್ಕರೊ ಏನೊ..! (ಹೊರಡುತ್ತ) ಏ-ಕಾಳಪ್ಪಾ-ಯಾರದಪ್ಪೊ ಗಾಡಿ ? ಱಂ ? ನಿಂಗಪ್ಪನ್ದು ? (ಏನನ್ನೊ ಕೇಳಿದಂತೆ ಮಾಡಿ) ಏನಂದಿ ? ಜಕಂ ಬಾಳ ಆಗೇತೇನು ? (ಎನ್ನುತ್ತ ಒಳಗೆ ಓಡುವನು)

[ರಾಮಣ್ಣನು ತಿರಸ್ಕಾರ ಮತ್ತು ಆಲಿಪ್ತತೆಯಿಂದ ನೋಡುವಾಗ]

(ತೆರೆ)

Sri Vidyabharathi Book Centre, Sringeri

CC-O. In Public Domain. Digitized by eGangotri

ದೃಶ್ಯ ೪

[ಎರಡನೆಯ ದೃಶ್ಯದಲ್ಲಿ ಹೇಳಿದ ಜಾಗೆ. ಹಿಂದಿನ ದೃಶ್ಯದ ಒಂದು ತಿಂಗಳ ತರುವಾಯ ಸಾಮಾನ್ಯವಾಗಿ ಎರಡನೆಯ ದೃಶ್ಯದಲ್ಲಿ ಕೂಡಿದವರೆ ಇಲ್ಲಿ ಕೂಡಿದ್ದಾರೆ. ವ್ಯತ್ಯಾಸವೆಂದರೆ, ನಂಗನು ಮಾತ್ರ ತಲೆಯತುಂಬಾ ಪಟ್ಟಿಯನ್ನು ಬಿಗಿದುಕೊಂಡಿದ್ದಾನೆ. ಎಡಗಣ್ಣು ಅರ್ಧಕ್ಕಿಂತ ಹೆಚ್ಚಾಗಿ ಪಟ್ಟಿಯಲ್ಲಿ ಮುಚ್ಚಿ ಬಿಟ್ಟಿದೆ. ಎಡದ ಮೊಳಕೈಗೂ ಗಾಯಗಳು ಮಾಯವಾಗುವಂತೆ ಸುಣ್ಣ-ಅರಿಸಿಣಗಳನ್ನು ಬಡೆದುಕೊಂಡಿದ್ದಾನೆ. ಅರ್ಥಾತ್, ಅವನ ಮುಖದ ಮೇಲೆ ಒಂದು ತಿಂಗಳ ಗದ್ದವು ಬೆಳೆದಿದೆ. ಅದರೂ ಮಿಕ್ಕವರಂತೆ ಅವನು ಸಹ ಉಲ್ಲಾಸವಲ್ಲಿದ್ದಾನೆ. ಇದೂ ಒಂದು ಸಭೆ ಸೇರಿದಂತಿದೆ. ಅನೇಕರು ಸಣ್ಣಪ್ಪಜ್ಜನ ಕಡೆ ನೋಡುತ್ತಿದ್ದಾರೆ. ರುದ್ರಪ್ಪ-ಕಾಳಪ್ಪ ಕಣ್ಣಿಗಳಿಂದ ಗೆರೆಗಳನ್ನು ತೀಡುತ್ತಿದ್ದಾರೆ. ಸಂಗ್ಯಾ ನಂಗನ ಎಡಬದಿಗೆ ಧರ್ಮಾ ನಂಗನ ಬಲಬದಿಗೆ ಕುಳಿತಿದ್ದಾರೆ. ರಾಮಣ್ಣನ ಮುಖದಲ್ಲಿ ನಗೆಯ ಕಳೆ ಇವೆ. ತಡೆ ಎವ್ವ ಮೇಲೆ ಕ್ರಮೇಣ ಏನೊ ಮಾತನಾಡಬೇಕೆಂಬ ಉತ್ಸುಕತೆಯ ಕಳೆ ಅವನ ಮುಖದಲ್ಲಿ ಮೂಡುವುದು. ಒಂದೆರಡು ನಿಮಿಷಗಳ ತರುವಾಯ—]

ರಾಮಣ್ಣ :– (ನಗೆಮೊಗದಿಂದಲೆ) ನನಗೇನನ್ನಿಸ್ತದ ಹೇಳಲೇನು ಸಣ್ಣಪ್ಪಜ್ಜ? (ಅವನ ದನಿಯನ್ನು ಕೇಳಿದಾಕ್ಷಣ ಎಲ್ಲರೂ ಚಕಿತರಾದವರಂತೆ ಅವನತ್ತ ಮುಖವನ್ನು ತಿರುಗಿರುವರು) ಆಂ? (ಸಣ್ಣಪ್ಪಜ್ಜನು ಮುಗುಳ್ನಗೆಯಿಂದ ತನ್ನನ್ನು ನೋಡಲು ತುಸು ಧೈರ್ಯದಿಂದ) ನನಗನ್ನಿಸ್ತದ ಇದನ್ನೆ ಒಂದು ಉತ್ಸವ ಅಂತ ಮಾಡ್ಬೇಕು.

ರುದ್ರ :– (ತಿಳಿಯದ್ದಕ್ಕೆ ಸಿಡುಕಿನಿಂದ) ಉಸ್ಸಾ?

ಕಾಳಪ್ಪ :– (ಸಮಾಧಾನದಿಂದ) ಏನಂತಾನ ಪೂರಾ ಹೇಳಲಿ ರಾಮಣ್ಣ.

Sri Vidyabharathi Book Centre, Sringeri

CC-O. In Public Domain. Digitized by eGangotri

ಧರ್ಮ :– ಯಾರು ಬ್ಯಾಡ ಅಂತಾರ? ಆದ್ರ ಮಾತು ಯಾತರ ಸಲುವಾಗಿ ನಡೆದೇತಿ ಇದಾದ್ರೂ ಗೊತ್ತೈತಿಯೊ—

ಸಣ್ಣಪ್ಪಜ್ಜ :– ಏ, ಧರ್ಮ್ಯಾ, ಪೂರಾ ಕೇಳ್ಕೊಂಡು ಆದ್ರೂ ಮಾತಾಡ್ತೀಯೊ ಇಲ್ಲೋ?

ಧರ್ಮ :– (ಮುನಿಸಿಂದ) ಆಗಲೆಪ ಉತ್ಸವ.

ರಾಮಣ್ಣ :– (ಸಿಲ್ಕಿಪ್ತನಂತೆ) ನಿಮ್ಮನಸ್ಸಿಗೆ ಬಂದ್ರ ನೋಡ್ರಿ–ಇಲ್ಲಾ ಅಂದ್ರ ಬಿಟ್ಬಿಡ್ರಿ. ಏನೊ–ನಾನು ಅಲ್ಲಿ ಇಲ್ಲಿ ಇಂಥಾದ್ದನ್ನ ಉತ್ಸವಥಾಂಗ ಮಾಡೋದನ್ನ ನೋಡೀನಿ. ವರ್ತಮಾನ ಪತ್ರದಾಗೂ ಓದೀನಿ, ಆದಕ್ಕೆಳ್ತೀನಿ.

ಸಣ್ಣಪ್ಪಜ್ಜ :– ಅಂದ್ರ ರಸ್ತೇದ ಸಮ್ಮಂದಿ ಹೌದಲ್ಲೊ? (ಧರ್ಮ್ಯಾ ಕಿಸಕ್ಕನೆ ನಗುವನು) ಯಾಕೊ? (ಧರ್ಮ್ಯಾ ಕೆಮ್ಮು ಬಂದವನಂತೆ ನಟಿಸುತ್ತ ಮುಖವನ್ನು ತಿರುಗಿಸುವನು)

ಕಾಳಪ್ಪ :– ಮುಂದ್ಹೋಳು, ರಾಮಣ್ಣಾ.

ರುದ್ರ :– (ಗೊಣಗುತ್ತ) ಏನ್ಮತಿ ಹೇಳ್ತಾನೊ ಏನು?

ರಾಮಣ್ಣ :– (ತಿಳಿಸಿ ಹೇಳುವವನಂತೆ) ಈಗ ನೋಡ್ರಿ. ನಿಂಗ್ಯಾ ಗಾಡಿ ಒಗ್ಗಾಲಿ ಆಗಿ ಬಿದ್ದು ಸತ್ತು ಸತ್ತು ಉಳಿದ, ಹೌದಲ್ಲೊ?

ಧರ್ಮ :– (ನಿಂಗನನ್ನು ನೋಡುತ್ತ) ಉಳಿದಾನ ಅಂತ ಈ ಪಟ್ಟೀವಳ್ಳ ಹುಡುಕಿ ನೋಡಿ ಹೇಳ್ಬೇಕಾಗ್ತೇತಿ.

ರಾಮಣ್ಣ :– (ಅವನ ಮಾತನ್ನು ಅಲಕ್ಷಿಸಿ) ಆ ರಸ್ತೇನೇ ಕೆಟ್ಟ ಇತ್ತು ಅನ್ನಿರಿ. ಒಂದಿಲ್ಲಾ ಒಂದಿವ್ನ ಏನಾದ್ರೂ ಇಂಥಾದ್ದಾಗ್ತದ ಅಂತ ನನಗನ್ನಿಸಿತ್ತು.

ರುದ್ರ :– ಯಾರ್ಮುಂದ ಅಂದಿದ್ದಿ! (ನಂಗ್ಯಾನನ್ನು ಕೆಣಕುವ ದೃಷ್ಟಿಯಿಂದ ನೋಡುವನು)

ರಾಮಣ್ಣ :– (ತನ್ನ ಮಾತನ್ನೆ ಮುಂದರಿಸುತ್ತ) ಅನ್ನಿಸಿತ್ತು-ಅಂದೆ. ಏನೊ–ಯಾರ ಜೀವಕ್ಕೂ ಧಕ್ಕೆ ಆಗಲಿಲ್ಲ, ನಶೀಬ. ಅಂತೂ ನಿಂಗ್ಯಾನ ನಿಮಿತ್ತಕ್ಕೆ ರಸ್ತೆ ನೆಟ್ಟಗಾಯ್ತು. ಹೌದಲ್ಲೊ? ಆದಕ್ಕ ಊರವರ್ನೆಲ್ಲಾ ಕೂಡಿಸಿ ಉತ್ಸವ ದಿಂದ ರಸ್ತೆ ಸುರುವು ಮ್ಯಾಡ್ಬೇಕು ಅಂತ—

Sri Vidyabharathi Book Centre, Sringeri

CC-O. In Public Domain. Digitized by eGangotri

ಧರ್ಮಾ :– ಅಂದ್ರೇನು-ಹಾರ-ತುರಾಯಿ ತರಬೇಕನ್ನು. ಯಾರಿಗೆ ಹಾಕೋದು ಹೇಳಾಕೇ ಬ್ಯಾಡ!

ರಾಮಣ್ಣ :– (ಅಸಹ್ಯವಾಗಿ ಏಳುತ್ತ) ನಿಮ್ಮ ಹಣೆಬರಹ! ಯಾರೇ ನ್ಯಾಡೋದು? ಏನೊ-ಊರಿಗೆ ದೊಡ್ಡ ಮನುಷ್ಯರನ್ನ ಕರೆಯಿಸ್ಬೇಕು ಅಂತ ನಾ ಅಂದ್ರ—

ಸಣ್ಣಪ್ಪಜ್ಜ :– ಏ, ರಾಮಣ್ಣಾ, ಕುಂತುಗೊ. ಧರ್ಮಾಗ ಬುದ್ಧಿ ಇಲ್ಲ ಅನ್ನೋದನ್ನ ಬ್ಯಾರೆ ಹೇಳ್ಬೇಕ? ಕುಂತಗೊ. (ರಾಮಣ್ಣನು ಧರ್ಮಾನನ್ನು ಸಿಟ್ಟಿನಿಂದ ನೋಡುತ್ತ ಕುಳಿತುಕೊಳ್ಳುವನು). ನೀ ಅನ್ನೋದೇನು ಸುಳ್ಳಲ್ಲ—

ರಾಮಣ್ಣ :– (ನಡುವೆಯೆ) ನಿಮ್ಮ ಹಿತದ ಸಲುವಾಗಿ ಹೇಳಿದೆ. ನನಗೇನ್ಬೇಕಾಗೇದ. ತಿಳಿ, ಛಲೋ ಖಟಸಟಿ ಮಾಡಿ ಒಬ್ಬ ಮಂತ್ರಿನ್ನೇ ಕರೆದು ಕೊಂಡು ಬಂದ್ರಿ ಅಂತ ತಿಳಿ. ಇಷ್ಟೆಲ್ಲಾ ನೀವೇ ಮಾಡೀರಿ ಅನ್ನೋದನ್ನ ನೋಡಿ, ಒಂದು ವ್ಯಾಳ್ಯಾಕ್ಕ ಸರ್ಯಾರದಿಂದಲೂ ರೊಕ್ಕ ಕೊಡಿಸ್ಬಹುದು ಅವರು.

ರುದ್ರ :– (ಸಿಟ್ಟಿನಿಂದ) ರೊಕ್ಕ? ಅಂದ್ರೇನು ನಾವು ಕೂಲಿಗಾಗಿ ಮಾಡಿದಿವೇನಿದ್ನ?

ಕಾಳಪ್ಪ :– ರುದ್ರಪ್ಪಾ, ತಡೀ ಒಂದೀಟು. ಯೆಜ್ಜಾ, ನನಗನಿಸ್ತದ ರಾಮಣ್ಣ ಒಮ್ಮ ಪೂರಾ ಹೇಳಿಬಿಡಲಿ, ಉತ್ಸಾ ಅಂದ್ರ ಏನ್ಮಾಡ ಬೇಕಂತಾನ ಅಂತ. ಆ ಮ್ಯಾಗ ಯಿಚಾರ ಮಾಡೋಣಲ್ಲ?

(ಸಣ್ಣಪ್ಪಜ್ಜನು ತಲೆ ತೂಗಲು ರಾಮಣ್ಣನನ್ನು ನೋಡುವನು).

ರಾಮಣ್ಣ :– (ಸಣ್ಣಪ್ಪಜ್ಜನೂ ತನ್ನ ಕಡೆ ನೋಡುವವರೆಗೆ ತಡೆದು) ಅಂದ್ರ ಹ್ಯಾಂಗೇನಪ? ಆದಕ ಉದ್ಘಾಟನಾ ಅಂತಾರ (ಎಲ್ಲರೂ ಶಬ್ದದಿಂದ ಬೆದರಿ ಒಬ್ಬರೊಬ್ಬರ ಮುಖವನ್ನು ನೋಡಿದ್ದನ್ನು ಕಂಡು. ಆಧೈರ್ಯದ ಅವಸರದಿಂದ) ಅಂದ್ರ–ಉದ್–ಅಲ್ಲ ಅಂದ್ರ ಯಾವುದಾದ್ರೂ ಹೊಸ ಕೆಲ್ಸ ಸುರು ಮಾಡೋ ವಕ ಮುಂಚೆ ಮೊದಲನೇ ಸಲ–ಪ್ರಾರಂಭ ಮಾಡೋದಕ-(ಒಮ್ಮೆಲೆ) ಹುಂ–ಅದೇ–ನೀವು ಕೇಳಿರಬೇಕಲ್ಲ ಪ್ರಾರಂಭೋತ್ಸವ ಅಂತ. (ತಡೆಯುವನು. ಯಾರೂ ಮಾತನಾಡುವದಿಲ್ಲ) ಅಂಥಾ ಪ್ರಾರಂಭೋತ್ಸವ ಮಾಡಿಸೋಣು. ಅಂದ್ರ ಆಪ್ಪೊತ್ತಿನ ದಿನ ದರ್ಬಾರ್ಕ ಹೆಸ್ರ ಪಟ್ಟಿ ಕಟ್ಟೋಣ. ಮಂತ್ರಿ ಸ್ವತಃ ಆ ಪಟ್ಟಿ

Sri Vidyabharathi Book Centre, Shirgeri

CC-O. In Public Domain. Digitized by eGangotri

ಕತ್ತರಿಸ್ತಾರ—ರಸ್ತೆ ಸುರುವಾಯ್ತು ಅಂತಾರ (ಎಂದು ಗೆದ್ದೆನೆಂಬಂತೆ ಎಲ್ಲರನ್ನೂ ನೋಡುವನು).

ಸಣ್ಣಪ್ಪಜ್ಜ :– ತಿಳೀತೇನ್ರೊ? ದಾರಿ ರೂಢಿ ಮಾಡಾಕ ಮೊದಲ್ನೆ ಚಕ್ಕಡಿ ಹೊಡೆದಾಂಗ. (ಎಲ್ಲರೂ ತಿಳಿಯಿತೆಂಬ ಮುದ್ರೆಯಿಂದ ಇದೇನು ಮೊದ್ಲ ವಿಷಯ ಎಂಬ ತಿರಸ್ಕಾರವನ್ನು ಮುಖದ ಕಳೆಯಿಂದ ಸೂಚಿಸುವರು).

ಸಂಗ್ಯಾ :– ಇದುವರೆಗೆ ಮಾತನಾಡಿಲ್ಲ) ಇದಕ್ಕ ಮಂತ್ರಿ ಯಾಕ್ಬೇಕು?

[ಸಂಗ್ಯಾನು ಒಮ್ಮಲೆ ಮಾತನಾಡಿದ್ದಕ್ಕೆ ಎಲ್ಲರೂ ಒಮ್ಮೆಲೆ ಚಕಿತರಾಗಿ ಅವನನ್ನು ದಿಟ್ಟಿಸುವರು]

ಸಂಗ್ಯಾ :– (ಪಟದಿಂದ) ಇದ್ಕ ಮಂತ್ರಿಯಾಕ್ಬೇಕು?

ಸಣ್ಣಪ್ಪಜ್ಜ :– (ನಗುತ್ತ) ತಿಳೀತೇನು ಸಂಗ್ಯಾನ ಮಾತಿನ ಖುಬಿ?

ಧರ್ಮಾ :– (ನಗುತ್ತಲೆ) ಹೌದೋ, ಮಗನ. ಸಂಗ್ಯಾ! (ನಗುತ್ತ) "ಇದ್ಕ ಮಂತ್ರಿ ಯಾಕ್ಬೇಕು" (ನೆನಪು ಮಾಡಿಕೊಂಡು ನಗುವನು)

ರಾಮಣ್ಣ :– (ಆಪಮಾನಿತನಾಗಿ) ಅಂದ್ರ? ಇದರಾಗೇನು ತಿಳೀತದ ಅಂತ ನಡುವೆ ಬಾಯಿ ಹಾಕ್ತೀ? "ಮೆಂತ್ರಿ ಯಾಕ್ಬೇಕಂ"ತ! ಯಾಕಂದ್ರೇನು?

ರುದ್ರ :– (ರಾಮಣ್ಣನಿಗೆ) ಅಂದ್ರೇನು? ಸಂಗ್ಯಾ ಮಾತೇ ಆಡ್ಬಾರ್ದಂತೀಯೇನು? ಅವನ್ಗೂ ತಿಳೀತೈತಿ. ಯಾಕಪ, ಧರೆಪ್ಪಾ?

ಧರ್ಮಾ :– ಎಲ! ಅವನ್ಗೂ ಅಂದ್ರ? ನಂ ಪೋಟು ಸಂಗ್ಯಾಗ! ಈ ರಸ್ತೇದ ಯುಗ್ತಿ ಹೇಳಿ ಕೊಟ್ಟಾವ ಸಂಗ್ಯಾ, ಅವನಿಗೇನ್ತಿಳೀತೇತೆ ಅಂದ್ರ?

ಸಣ್ಣಪ್ಪಜ್ಜ:– (ಸಂಗ್ಯಾನನ್ನು ಅಭಿಮಾನ ದೃಷ್ಟಿಯಿಂದ ನೋಡುತ್ತ) ಅಂದ್ರ ಸಂಗ್ಯಾಗ? ಹಾರ-ತುರಾಯಿ ಮಾಡೋಣ ಅಂತೀರಾ? (ನಗುವನು ಸಂಗ್ಯಾ ಮತ್ತು ರಾಮಣ್ಣ ಇಬ್ಬರನ್ನು ಬಿಟ್ಟು ಮಿಕ್ಕವರೂ ನಗುವರು) ನೀ ಯೇನಂತೀ, ರಾಮಣ್ಣಾ?

ರಾಮಣ್ಣ :– ಸಣ್ಣಪ್ಪಜ್ಜ, ಈ ಮಂದಿಗೆ ತಿಳಿಸಿ ಹೇಳೋದೇ ಕಠಿಣ ಕಾಣಿಸ್ತದ. ಆಲ್ಲ, ನನಗೇನು ಗೊತ್ತಿಲ್ಲ, ಅಂತೀಯಾ? ಸಂಗ್ಯಾನೇ ಮಾಡಿದ್ದು ನಾನೂ ಆಲ್ಲಿಯೆ ನಿಂತಿದ್ದೆ. ಆ ದಿನ ಗಾಡಿ ಬಿತ್ತು ಅಂತ ಕೇಳಿದ ಕೂಡಲೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಓಡಿದ ಸಂಗ್ಯಾ (ಅವನನ್ನು ಉಬ್ಬಿಸಬೇಕೆಂಬ ದೃಷ್ಟಿಯಿಂದ ನೋಡುತ್ತ) ನಾನೂ ಬಂದೆ ಅವನ ಹಿಂದಿನಿಂದ. ಸಿಂಗ್ಯಾನ ಕೈ ಸಿಕ್ಕಿತ್ತು ಮೇಟಿಯ ಸಂದ್ಯಾಗ. ಸಂಗ್ಯಾ ನೋಡಿ ಎತ್ತಿದ್ದಿಲ್ಲ ಅಂದ್ರ–

ಸಂಗ್ಯಾ:– (ನದುವೆಯ ಸಿಡುಕಿನ ಜನಿಯಲ್ಲಿ) ಇರ್ಲಿ ಬಿಡಪ ! ಯಾರು ಸರಟೀಪ ಕೇಳಾಕ ಬಂದಿಲ್ಲ.

ಧರ್ಮಾ:– ಅದ್ಯಾಕೊ, ಮಗನ ? ಮಾಡಿದ್ದು ಸುಳ್ಳೇನು? ರಾಮಣ್ಣಾ, ಗಾಡಿ ಉಳ್ಳಿದ್ದು ಹೋಗಲಿ. ಆ ಜಾಗದಾಗ ಮ್ಯಾಗ ಮ್ಯಾಗ ಗಾಡಿ ಒಗ್ಗಾಲೀನೆ ಆಗಿದ್ದುವು. ಆದ್ರ ಸಿಂಗಪ್ಪನ ಹಕೀಕತ ಆದಮ್ಯಾಗ, ಆ ಜಾಗದಾಗ ರಸ್ತೇ ಸುದಾರಿಸಬೇಕು ಅನ್ನೋ ಯುಗತಿ ಸಂಗ್ಯಾಗೇ ಹೊಳೀತು. (ಸಂಗ್ಯಾನನ್ನೇ ನೋಡುತ್ತ) ಯಾಕೊ, ಸಂಗ್ಯಾ ? ಆದ್ರ ದನಕಾಯೋ ಲಪಂಗ ಅಂತ ಯಾರೂ ಅವನ ಮಾತೇ ಕವೀಮ್ಯಾಗ ಹಾಕರಲಿಲ್ಲ. ಆಗ ಭಾರೀ ಸಿಟ್ಟು ಬಂದಿರ್ಬೇಕು ನಮ್ಮೆಲ್ಲಾರ ಮ್ಯಾಗ, ಯಾಕೊ, ಸಂಗ್ಯಾ ? ರಾಮಣ್ಣಾ, ಕಡೆಗೇನ್ಮಾಡಿದಾ ಅಂತೀ ? ಒಂಧಿನ ಗುದ್ದಲಿ-ಸಲಿಕೆ ಹಿಡಿಕೊಂಡು ಒಬ್ನೇ ಸುರೂನೇ ಮಾಡ್ಬಿಟ್ಟ !

ಸಣ್ಣಪ್ಪಜ್ಜ:– ಮತ್ತೇನ್ಮಾಡ್ಬೇಕು, ನಿಮ್ಮಂಥಾ ಬರೇ ಮಾತಾಡೋ ಜನ ಇದ್ದ ಮ್ಯಾಗ ?

ಕಾಳಪ್ಪ:– ಏನೆ ಆಗ್ಲಿ, ಅಂತೂ ಸಂಗ್ಯಾನ್ನೋಡಿ ನಾವೆಲ್ಲಾರೂ ಮುಂದಾದಿವಿ.

ರುದ್ರಪ್ಪ:– ಅದೆಲ್ಲಾ ಆಯ್ತಪ, ಈ ಮತ್ತೊಂದೇನೊ ಯಿಚಾರ ನಡೆದಿತ್ತಲ್ಲ ರಾಮಣ್ಣನ್ದು ? ಅದು ಬಗೀ ಹರೀತೇನು ಈಗ ?

ಸಂಗ್ಯಾ:– (ಒಮ್ಮೆಲೆ) ಆ ಇಚಾರ ಬ್ಯಾಡರೆಪ. ನನಗನ್ನಿಸ್ತದ ರಸ್ತೇದ ಉಸ್ವ ಸಿಂಗಪ್ಪನೆ ಮಾಡ್ಬೇಕು ಅಂತ.

[ಎಲ್ಲರೂ "ಏನಂದಿ !! " ಎನ್ನುವಾಗ ರಾಮಣ್ಣನೊಬ್ಬನೆ ಜೊಕ್ ಎಂದು ನಕ್ಕು "ಯುಚ್ಚ" ಎಂದು ತಿರಸ್ಕಾರದಿಂದ ನುಡಿಯುವನು]

ಸಂಗ್ಯಾ:– (ರಾಮಣ್ಣನನ್ನು ನೋಡುತ್ತ ಪಟದ ಜನಿಯಲ್ಲಿ) ಸಿಂಗಪ್ನೇ ಮಾಡ್ಬೇಕು ಅಂತೀನಿ. (ರಾಮಣ್ಣನು ತಲೆ ಅಲ್ಲಾಡಿಸಲು) ಎಲೆ ! ನೀವೋಬ್ನೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಗೊತ್ತಿದ್ದೋವ ಅಂತ ತಿಳೀಬ್ಯಾಡ. ನಾನೂ ನೋಡೀನೇಳು– ನಿನ್ನ ಮಂತ್ರೆಪ್ಪ ಬಂದು ಕತ್ತರಿ ಹಾಕೋದನ್ನ. (ಧರ್ಮಾ, ರುದ್ರಪ್ಪ ನಗುವರು) ಯೆಜ್ಜಾ, ನಾ ಹೇಳ್ತೀನಿ. ಒಂದು ಛಲೋ ಸುಬಸಕುಣದ ದಿನಾ ನೋಡಿ, ಆ ಥಿನ ನಿಂಗಪ್ಪನ ಗಾಡಿಗೆ ಬಣ್ಣಾ ಕೊಟ್ಟು, ಹೋರಿಗಳಿಗೆ ಝೂಲ ಹಾಕಿ, ಆ ರಸ್ತೇದ ಮ್ಯಾಗ ನಿಂಗಪ್ಪ ಮೊದಲ ಗಾಡಿ ಹೊಡೀಬೇಕು.. (ಧರ್ಮಾ ಗಟ್ಟಿ ಗಟ್ಟಿಯಾಗಿ ನಗಲು ಆಧ್ಯೆರ್ಯ ಹೆಚ್ಚಿ ತಡೆಯುವನು).

ಸಣ್ಣಪ್ಪಜ್ಜ:– (ಸಿಟ್ಟಿನಿಂದ ಧರ್ಮಾನಿಗೆ) ಏ–ಮುಚ್ಚಾಕೊ ಬಾಯಿ! (ಧರ್ಮಾ ಇನ್ನಿಷ್ಟು ಗಟ್ಟಿಯಾಗಿ ನಗುವನು.)

ರುದ್ರ:– (ಸಿಡುಕಿನಿಂದ) ಎಲೆ ನಿನ!

ಧರ್ಮಾ:– (ನಗೆಯನ್ನು ತಡೆಯುವೆ ಎಂಬುದನ್ನು ಮೊದಲು ಕೈಸನ್ನೆಯಿಂದ ಸೂಚಿಸುತ್ತ ಕ್ರಮೇಣ ನಗೆಯನ್ನು ತಡೆಯುತ್ತ) ಹಹ! ಅದು– ಅದ್-ಅದ್-– ಮೋಜು ಯೆಜ್ಜಾ—

ಸಣ್ಣಪ್ಪಜ್ಜ:– (ಮನಸ್ಸಿಗೊಪ್ಪದೆ) ಮೋಜು?

ಧರ್ಮಾ:– (ನಗೆಯನ್ನು ತಡೆದು) ಅಲ್ಲ, ಯೆಜ್ಜಾ, ಗಾಡಿ ನಿಂಗಪ್ಪ ಹೊಡೀಬೇಕು. ಅಂದದ್ಕ ನಗೀ ಬಂತು.

ರುದ್ರ:– ಇರ್ಲಿ ಬಿಡಪ!

ಧರ್ಮಾ:– ಹಾಂಗಲ್ಲೊ, ರುದ್ರಾ, ನೋಡು, ರಸ್ತೆ ಕೆಟ್ಟುದು ಅಂತ ಕಣ್ಣ ಯಾರ್ದು ಇದ್ದಾಗೂ ನಿಂಗಪ್ಪನ ಗಾಡಿ ಒಗ್ಗಾಲಿ ಆಯ್ತು. ಈಗ ರಸ್ತೇ ಛಲೋದಾದ್ರೂ ಕಣ್ಣು ಒಂದೇ ಅಂತ ಒಗ್ಗಾಲಿ ಆದರ— (ಎಂಬುದಕ್ಕೆ ಮತ್ತೆ ತಡೆಯದೆ ನಗೆ ಚಿಮ್ಮುವುದು. ಈಗ ಎಲ್ಲರ ಮುಖದಲ್ಲೂ ಮುಗುಳ್ನಗೆ ಮೂಡುವುದು. ನಿಂಗ ಎಲ್ಲರಿಗೂ ಬಲಗೈಯಿಂದ ಸಮಾಧಾನವನ್ನು ಹೇಳುವವರಂತೆ ನಟಿಸುತ್ತಾನೆ.)

[ನಗೆಯ ವಾತಾವರಣ ಸ್ತಿಮಿತಕ್ಕೆ ಬಂದಮೇಲೆ]

ಸಣ್ಣಪ್ಪಜ್ಜ:– (ಸುತ್ತಲೂ ನೋಡುತ್ತ) ಯಾಕ್ರೆಪ? ಈ ಯಿಚಾರ ಹ್ಯಾಂಗ ಅನ್ನಿಸ್ತೇತಿ ನಿಮಗ? ಯಾಕೊ, ರಾಮಣ್ಣಾ, ನಿನಗೇನನ್ನಿಸ್ತೇತಿ?

ರಾಮಣ್ಣ:– (ನಿಲುತ್ತ) ನಿಮ್ಮ ಮರ್ಜಿಗೆ ಬಂಧಾಂಗ ಮಾಡ್ರಿ. ನಾವು ಹೇಳಿದ್ದು ಕೇಳದಿದ್ರೆ ನನ್ನಗ ಕೇಳೋಕೆ ನೀನು ಯಾರಪ್ಪೋ? ಹಂ– (ಎಂದು

Sri Vidyabharathi Book Centre, Shingeri

CC-O. In Public Domain. Digitized by eGangotri

ಮುಖವನ್ನು ನೋಲಕ್ಕೆತ್ತವೆ, ಯಾರಕಡೆಯೂ ನೋಡದೆ ಬಿರಿ ಬಿರಿ ಹೆಜ್ಜೆಗಳನ್ನಿಡುತ್ತ ಹೋಗುವನು).

[ಎಲ್ಲರೂ ಚಕಿತರಾಗಿ ಅವನು ಹೋದತ್ತ ನೋಡುತ್ತ ಒಂದೆರಡು ನಿಮಿಷ ಸ್ತಬ್ಧ]

ರುದ್ರ:– (ಧರ್ಮಾನಿಗೆ) ಇದೆಲ್ಲಾ ನಿನ್ದ ಕಮಾಯಿ !

ಧರ್ಮಾ:– (ಆಶ್ಚರ್ಯವಾದ ದನಿಯಲ್ಲಿ) ಎಲೆ ! ನನ್ದು ?

ಸಣ್ಣಪ್ಪಜ್ಜ:– ಹೋಗ್ಲಿ ಬಿಡು, ರುದ್ರಾ. ರಾಮಣ್ಣನ ಸೊಬಾವ ಗೊತ್ತಿಲ್ಲ ?

ರುದ್ರ:– ಅಲ್ಲ, ಯೆಜ್ಜ, ಅವ ಹ್ಯಾಂಗ್ಯಾಕ ಇರವಲ್ಲನ್ಯಾಕ ? ಧೆರಿಪ್ಪನೂ ಕೆವರಿ ಕೆದರಿ ಕೆಣಕ್ತಾನ !

ಧರ್ಮಾ:– (ಮೇಲಿನಂತೆ) ಎಲ ! ನಾಯೇನು ಮಾಡಿದೆನೊ ?

ರುದ್ರ:– ಯಾವಾಗ್ಲೂ ಮಾಡ್ತೀ ಏಳು. ಮೊನ್ನೆ ಮೊನ್ನೆ ಆ ದಿನಾ– ಹೊಂತುಟ್ಲೆ ಕದಾ ತಗದು ಹೊರಗ ಬಂದವ್ನೆ ಧಬಕ್ಕೆ ಬಿದ್ದ ರಾಮಣ್ಣ,ಆದನ್ನ–

ಸಣ್ಣಪ್ಪಜ್ಜ:–(ನಡುವೆಯೆ ಚಕಿತನಾಗಿ) ಬಿದ್ದ? ಯಾವ್ದಿನ ?ಅಧ್ಯಾಂಗ ?

ಕಾಳಪ್ಪ :– (ಅಪರಾಧವನ್ನೊಪ್ಪುವ ಮುಗುಳ್ನಗೆಯಿಂದ) ಅದು ನನ್ತೆಪ್ಪು, ಯೆಜ್ಜ.

ಸಣ್ಣಪ್ಪಜ್ಜ :– (ಬೆರಗು, ತುಸು ಸಿಟ್ಟು) ಏನ್ರೋ ? ಏನ್ಮಾಡ್ತೀರಿ ? ಕುಂತಕುಂತಲ್ಲೆ ಏನಾರೆ ಕಮಾಯಿ ನಡೆಸಿರ್ತೀರಲ್ರೊ ?

ಧರ್ಮಾ:– ಏನಿಲ್ಲ ಬಿಡು, ಯೆಜ್ಜ, ಸಣ್ಮಾತು.

ಸಣ್ಣಪ್ಪಜ್ಜ:– (ಬೆರಗು) ಎದ್ದ ಮಾರೀಮ್ಯಾಗ ಬಿದ್ದ ರಾಮಣ್ಣ– ಅಂತೀರಿ ; ಮತ್ತ ಸಣ್ಮಾತು, ಅಂತೀರಲ್ರೊ ?

ಕಾಳಪ್ಪ :– ಯೆಜ್ಜಾ, ಸಣ್ಮಾತೇನೋ ಖರೆ. ನಾ ಹೇಳ್ತೀನಿ. ಒಂದಿನ ಮಾತಾಡಿಕೊಂಡೆವಲ್ಲ ? ನನ್ದೂ ರುದ್ರಣ್ಣನ್ದೂ ತಂಟಿ ಆದ ಮಾತಿನ ಸಮ್ಮಂದಿ ? ನೀ ನ್ಯಾಯಾ ಬಗೀ ಹರಿಸಿದಿ, ನೆಪ್ಪಿಲ್ಯೈತ್ತೇನು ?

ಸಣ್ಣಪ್ಪಜ್ಜ:– (ನೆನೆದುಕೊಳ್ಳುತ್ತ) ಯಾ ದಿನ ? ಆ ದಿನಾ ಧೆಂಜಿಗೆ ಗುದ್ದಲಿ ಯತ್ತಿಕೊಂಡು ನಿಂತಿದ್ದಿರಿ ? ಮನೀ ಮುಂದ ಹರಿ ತೋಡಿದ್ದಿರಿ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಳಪ್ಪ:– ಹೌದು–ಆ ದಿನ ನೀ ಹೇಳ್ಬೆಲ್ಲ? – ಊರಾನ್ಮಂದಿ ಕೂಡಿ ಯಿಚಾರ ಹಾಕಿತಲ್ಲ?

ಸಣ್ಣಪ್ಪಜ್ಜ:– (ನೆನಪಾಗಿ) ಹಂ....ಹಂ....ಹೌದು. ನೀವಿಬ್ರೂ ನಿಂ ಮನೀ ಮುಂದ ನೀರು ಹರಿದು ಹೋಗೋಹಾಂಗ ಗಟಾರ–ಹರಿ ಮಾಡ್ಬೇಕು, ಹಂಗೇ ಊರಾನ ಎಲ್ಲಾ ಮಂದಿಗೂ ತಂತಂ ಮನೀ ಮುಂದ ಮಾಡ್ಬೇಕು ಅಂತ—

ಧರ್ಮ್ಯಾ:– (ನಡುವೆಯಿ) 'ಎಲ್ಲಾರೂ' ಅಂತ ನೀವೂ ನಾವೂ ಲೆಕ್ಕ ಹಾಕಿದ್ವಿ. ಆದ್ರ ಆ ರಾಮಣ್ಣ ತಾ ಬ್ಯಾರೆ! ಅಂತ ತಿಳ್ಕೊಂಡಾನ.

ಸಣ್ಣಪ್ಪಜ್ಜ:– ಅಂದ್ರ? ಮತ್ತ ಅವನೂ ತನ್ನ ಮನೀ ಮುಂದ—

ರುದ್ರ:– (ನಡುವೆಯಿ) ಆದು ಅವ ಮಾಡಿದ್ದಲ್ಲ ಯೆಜ್ಜ—

ಸಣ್ಣಪ್ಪಜ್ಜ:– (ತಿಳಿಯಲಿಲ್ಲವೆಂಬಂತೆ) ಅಂದ್ರ?

ಕಾಳಪ್ಪ:– ಅಿದ್ನೆ ಹೇಳ್ತೀನಿ, ಯೆಜ್ಜ. ರಾಮಣ್ಣ ಮಾಡಲಿಲ್ಲ. ಸಾಫ ಮಾಡೋದಿಲ್ಲ ಅಂದ....ನಮಗೆಲ್ಲಾರಿಗೂ ಬೈದ, ಹುಚ್ಚ ಅಂದ–ಏನೇನೇನೊ ಮಾಡಿದ. ಅದಕ್ಕ ಧರೆಪ್ಪ ಅಂದ–"ಆಲ್ಲೊ, ಕಾಳಪ್ಪ, ಇಂಥಾ ದಿನ ಎಲ್ಲಾರ ಮನೀ ಮುಂದ ಗಟಾರ–ಹರಿ ಇರ್ಬೇಕು ಅಂತ ಅಜ್ಜ ಹೇಳ್ಯಾನ. ಈ ಕುಲಕರ್ಣೇರ ಕುದುರಿ ಏರಿ ಕುಂತದ. ಏನ್ಮಾಡ್ಬೇಕ" ಅಂತ"....ಕಡೀಕೆ ಧರೆಪ್ಪ ಅಂದ, 'ನಡರಾತ್ರ್ಯಾಗ ಹೋಗಿ ನಾನೇ ಗುದ್ದಲಿ ಹಾಕಿ ಬರ್ತೀನಿ' ಅಂತ".

ಧರ್ಮ್ಯಾ:– ಹಾಂಗ ಹೇಳಿದ್ರ ನೀನೂ ತಯಾರಾದಿ.

ಕಾಳಪ್ಪ:– ಮತ್ತ ರುದ್ರಪ್ಪನೂ ತಯಾರಾದ.

ರುದ್ರಪ್ಪ:– ಕಡ್ಯಾಕ ಚೀಟಿ ಯೆತ್ತಬೇಕಾಯ್ತು, ರಾಮಣ್ಣನ ಸೇವಾ ಯಾರ್ಮಾಡ್ಬೇಕು ಅಂತ.

ಸಣ್ಣಪ್ಪಜ್ಜ:– (ನಗೆಮೊಗದಿಂದ) ರಾಮಣ್ಣನ ಸೇವಾ ಕರೀವು! ನೀವು ಮಾಡಿದ್ದನ್ನ ಕೇಳಿದ್ರ ಯಾರೋ ಹನ್ಮಂತ ಆಗಿದ್ದಿರಿ ಅಂತ ಕಾಣಸ್ತದ.

[ಸಿಂಗಪ್ಪ– ಕೈಯಿಂದ ಯೋಗ್ಯ ಮಾತು ಎಂಬ ಪಕ್ಷೋದ್ಗಾರವನ್ನು ಸೂಚಿಸುವನು. ಸಂಗ್ಯಾ ನಗುವನು.]

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಳಪ್ಪ:– ನನ್ಗೇನು ಗೊತ್ತು, ಯೆಜ್ಜಾ. ಚೀಟೇ ನಾನೇ ಯೆತ್ತಿದೆ. ನಡರಾತ್ರ್ಯಾಗ ನಾನೇ ಅಗಿದು ಒಂದೆ. ಆವ್ರ ರಾಮಣ್ಣಾಗ ಅದರ ಸುಳಿವೆ ಹತ್ತಲಿಲ್ಲೇನೊ?

ಧರ್ಮಾ:–ಮುಂಜಾಳೆ ಯೆದ್ವಾನ, ಎಲ್ಲಾರ ಮನೀ ಮುಂದ ಯೇನೇ ಇರ್ಲಿ, ತನ್ನ ಮನೀ ಮುಂದ ಹರಿ ಇಲ್ಲ, ನೋಡಿರೊ ಮಕ್ಕಳಾ ಅಂತ ಉಬ್ಬಿ ಬಾಗಿಲಾ ತಗದು ಕಾಲಿಟ್ಟಾನ—

ಸಂಗ್ಯಾ:– (ಪೊಕ್ಕನೆ ನಕ್ಕು) ಪಾತಾಳ ಮುಟ್ಯಾನ! ಹಹ ಹಹ!

ಕಾಳಪ್ಪ:– (ಸುಧಾರಿಸಿಕೊಳ್ಳುತ್ತ) ಅದು ಮಾತ್ರ ನನ್ತೆಪ್ಪಲ್ಲ?

ಸಣ್ಣಪ್ಪಜ್ಜ:– (ತಳಿಯವೆ) ಯಾವ್ದ?

ಕಾಳಪ್ಪ:– ಹರಿ ತಗಿಯೋದು ನನ್ಕೆಲ್ಸ, ಆ ಮ್ಯಾಗ ಕದದ ಮುಂದ ಹರೀ ಮ್ಯಾಗ ಕಲ್ಲು ಇಡೋದು ಧರೆಪ್ಪನ ಕೆಲ್ಸ–ಅಂತ–

ಧರ್ಮಾ:– ಹೊಗೊ ನಿನ ಮುಂಜಾಳ! ನಡರಾತ್ರ್ಯಾಗ ಕಲ್ಲು ಎಲ್ಲಿ ಸಿಗ್ತೇತಿ?

[ಈಗ ಎಲ್ಲರೂ ನಗುವರು. ಕೈಸನ್ನೆಯಿಂದ ನಿಂಗಪ್ಪನೂ ಹರ್ಷವನ್ನು ಸೂಚಿಸುವನು.]

ಸಣ್ಣಪ್ಪಜ್ಜ:– (ಪರಿತನವನ್ನು ನಟಿಸುತ್ತ) ಹೀಂಗ್ಮಾಡ್ತೀರಿ ಮತ್ತ ಮಂಗ್ತನ, ಅವ ಯಾಕ ಸಿಟ್ಟಿಗೇಳ್ವಾರ್ದು? (ಎನ್ನುತ್ತ ಏಳುವನು).

ಧರ್ಮಾ:– ಆವ್ರ ಅವನ ಸಿಟ್ಟು ಕರೇವಂದ್ರ ಬ್ಯಾರೇದಕ್ಕೈತಿ?

ರುದ್ರ:–(ಮೈ ಜಾಡಿಸಿಕೊಂಡು ಏಳುತ್ತ) ಏನಿಲ್ಲ–ನೀನೇ ಅವನ್ನ ಕೆಣಕ್ತೀ.

ಕಾಳಪ್ಪ:– ಬ್ಯಾರೇದಕಂದ್ರ?

ಧರ್ಮಾ:– ಹೇಳಲಿಲ್ಲೇನವ? ಯಾರನಾರೂ ಮಂತ್ರೀನ್ನ ಕಕ್ಕೊಂಡು ಬರ್ತೀನಿ ಅಂದ. ಸರ್ಕಾರದವ್ರು ರೊಕ್ಕ ಕೊಡ್ತಾರ ಅಂದ.

ಸಂಗ್ಯಾ:– ಬರಾಬ್ಬರಿ ಗತ್ತ ಹಿಡಿದಿ ನೋಡು! ಆ ರೊಕ್ಕ ಇವ ಎತ್ತಿ ಹಾಕಾವ!

ಸಣ್ಣಪ್ಪಜ್ಜ:– (ಅಧಿಕಾರದಿಂದ) ಏ–ಹುಜ್ಜೊಟ್ಟಿ–ಏನಾರೆ ಅನ್ಬಾರ್ದು ಸಿಕ್ಕೋರಿಗೆ.

Sri Vidyabharathi Book Centre, Sringeri

 CC-0. In Public Domain. Digitized by eGangotri

ಸಂಗ್ಯಾ:– (ಇನ್ನು ತಡೆಯುವುದು ಶಕ್ಯವಿಲ್ಲ ಎಂಬಂತೆ ಮುಂದೆ ಬಂದು, ಏರಿದ ಧ್ವನಿಯಲ್ಲಿ) ಯೆಜ್ಜಾ, ನೀ ಬೇಕಾದ್ಹೇಳು.ಅವನ ಗತ್ತಿನಾಗ ಇದ್ದವ ನಾನು, ನನಗ ಎಲ್ಲಾ ಗೊತ್ತೈತಿ—

ಕಾಳಪ್ಪ :– (ಎದ್ದು ಅವನ ಬೆನ್ನ ಮೇಲೆ ಕೈಯಿಟ್ಟು) ಇರ್ಲಿ ನಡೀಯಪ! ಈಗ ಯಾವ ಮಂತ್ರೀನೂ ಬರಾಕ ಕುಂತಿಲ್ಲ, ಸರ್ಕಾರದೋರು ರೊಕ್ಕಾನೂ ಕೊಡೋದಿಲ್ಲ—

ರುದ್ರ :– ನೆನ ಪಾಗಿ, ಸಿಟ್ಟಿನಿಂದ) ಅದೇ ಅಂತೀನಿ. ಸರ್ಕಾದೋರು ರೊಕ್ಕಾ ಕೊಡ್ತಾರಂತ. ಇಲ್ಲಿ ಯೇನ್ನಾವು ಕೂಲಿ ಮಾಡಾಕ ಬಂದೀನೆ?

ಸಣ್ಣಪ್ಪಜ್ಜ :– ಏ, ರುದ್ರ್ಯಾ ಮನ್ಯಾಗೂ ಬುಸುಗುಡ್ತೀ, ಹೊರಗೂ ಬುಸುಗುಡ್ತೀಯಲ್ಲೊ? ಯಾವದಾರೆ ಒಂದು ಜಾಗಾ ಗೊತ್ತು ಮಾಡಿಕೊ—(ಮಿಕ್ಕವರು ನಗುವರು. ಆವರಿಗೆ) ನೋಡಿರಲ್ಲ? ಯಾವಾಗ್ಲೂ ಸಿಟ್ಟಿಗೆ ಬಂದ್ರ ಹ್ಯಾಂಗಪ?

ರುದ್ರ :– (ಸಮಾಧಾನದಿಂದ) ಅಲ್ಲ, ಅಜ್ಜ, ಏನಾರೆ ಹೇಳಿದ್ರ—(ಅವನ ಪ್ರಯತ್ನಪೂರ್ವಕ ಸಮಾಧಾನದ್ದಾದ ಧನಿಗಾಗಿ ಮಿಕ್ಕವರು ನಗಲು ತಡೆಯುವನು).

ಸಣ್ಣಪ್ಪಜ್ಜ :– ಏನಾರೆ, ಅಲ್ಲೊ, ರುದ್ರಾ. ಅವನ ಮಾತೂ ಕರೇವೈತಿ. ಇಂತಾ ಕೆಲ್ಸಕ್ಕ ಸರ್ಕಾರ ರೊಕ್ಕಾ ಕೊಡ್ತೈತಿ—ಅಂತ. ಕೊಡ್ಲಿ, ಬಿಡ್ಲಿ, ನಂ ಕೆಲ್ಸ, ನಾವು ಮಾಡಿಕೊಂಡ್ರಾಯ್ತು.

ಧರ್ಮ್ಯಾ :– ಅಲ್ಲೊ, ಯೆಜ್ಜ, ಸಿಗೋ ರೊಕ್ಕ ಬಿಡ್ಬೇಕ್ಯಾಕ ಅಂತೀನಿ.

ಸಣ್ಣಪ್ಪಜ್ಜ :– ಎಲೆ ನಿನ! ರೊಕ್ಕಾ, ರೊಕ್ಕಾ ಅಂತ ಅದನ್ನೇನ್ಸ ಮುಕ್ಕತಿ ಏನು? ಏನು ಅಂತಾ ಕೆಲ್ಸಕ್ಕ ಹರಕತ್ತು ಆಗೇತಿ? ನಾಳೆ ಹರಕತ್ತು ಆಯ್ತು ಅಂದ್ರ ಕೇಳ್ಲಾಕ್ಕೆ ಯಾರ ಬ್ಯಾಡ ಅಂತಾರ? ಬಚ್ಚಲಸೀರಿನಾಗ ಪಲ್ಲೆ ಹಚ್ತೀನಿ ರೊಕ್ಕಾ ಕೊಡ್ರಿ ಅಂದ್ರ?

ಕಾಳಪ್ಪ :– (ತಲೆತೂಗಿ) ಅದೂ ಸುಳ್ಳಲ್ಲ. ನಮ್ಮಿಂದ ಆಗೋ ಕೆಲ ನಾವು ಮೊದಲು ಮಾಡೋಣ—

ಸಣ್ಣಪ್ಪಜ್ಜ :– (ನಮುವೆಯೆ) ಹಂ–ಆಗದ ಕೆಲಸ ಕಟ್ಟಾಗೋಹಾಂಗಿದ್ರ ಕೇಳೋಣ.

CC-O. In Public Domain. Digitized by eGangotri

ಧರ್ಮ್ಯ :– ಅಂದ್ರು ನಿಂಗಪ್ಪನ ಉಸ್ವಾ ಮಾಡೋಣ.

ಕಾಳಪ್ಪ:– (ಸಂಗ್ಯಾನ ಬೆನ್ನು ಚಪ್ಪರಿಸಿ) ಸಂಗ್ಯಾನ ಯುಗತಿ ಭಾರಿ ಆತು. (ಎಲ್ಲರೂ ಹೊರಡುವರು) ಗಾಡಿಗೆ ಬಣ್ಣಾ ಯಾರ್ಕೊಡ್ತಾರ? ಹೋರಿಗೆ ಜರದ ಝೂಲ ಇರ್ಲಿ ಹೌದಲ್ಲೊ? ಕೊಂಬಿಗೆ ಏನಾರೆ ಚುಚ್ಚೇಕು.

ಧರ್ಮ್ಯ :– ಏನಾರೆ ಯಾಕೊ? ಎಲ್ಲಾರ್ಗಿಂತ ಮ್ಯಾಗಿನವ ಆಂತ ಹಾರಾಡ್ತಾನಲ್ಲ ರಾಮಣ್ಣ, ಅವನ್ನೆ ಚುಚ್ಚಿ ಬಿಟ್ಟರಾತು–ಹಹ! (ಉಳಿದವರು ನಗುವಾಗ)

(ತೆರೆ)

Sri Vidyabharathi Book Centre, Sringeri

CC-O. In Public Domain. Digitized by eGangotri

ದೃಶ್ಯ ೫.

[ರಾಮಣ್ಣನೊಬ್ಬನೆ ಹೊರಟಿದ್ದಾನೆ. ಕೆರೆಯ ಪತ್ತಿರದಲ್ಲಿಯೆ ಊರಿಂದ ಹೊರಗೆ ಹೋಗುವ ದಾರಿ. ಸಂಜೆಯ ಸಮಯ. ರಾಮಣ್ಣನ ಕೈಯಲ್ಲಿ ಒಂದು ಸುರುಳಿ ಕಟ್ಟಿದ ಗಂಟು ಇದೆ. ಮುಖ ಬಾಡಿದಂತಿದೆ. ಅತ್ತಿತ್ತ ನೋಡುವನು. ಯಾರ ಸುಳಿವೂ ಇಲ್ಲ. ಕೊನೆಗೆ ಪಣಿದವನಂತೆ ಉಸುರ್ಗರೆದು ಸುರುಳಿಯ ಗಂಟನ್ನು ಕೆಳಗೆ ಒಗೆದು ಅದರ ಮೇಲೆ ಕೂಡ್ರುವನು. ಆಪ್ಪರಲ್ಲಿ ಯಾರದೊ ಹೆಜ್ಜೆ ಸಪ್ಪಳ ಕೇಳಿಸಿದಂತಾಗಿ ಪುಟಿದೆದ್ದು ಗಂಟನ್ನು ಎತ್ತಿಕೊಳ್ಳುವಷ್ಟರಲ್ಲಿ ಬಂಗಾರೆವ್ವ ಬರುವಳು. ಆಕೆಯ ತಲೆಯಮೇಲೆ ಬುಟ್ಟಿ- ಅದರಲ್ಲಿ ಪುಲ್ಲು ಕೊಯ್ಯುವ ಕುರಸಿ ಮುಂತಾದವು ಇವೆ. ಕೆಲಸ ಮಾಡಿ ಮನೆಗೆ ಹೊರಟಂತಿದೆ. ರಾಮಣ್ಣ ಆ ರೀತಿ ನಿಂತುದನ್ನು ನೋಡಿ ಆಕೆಯೂ ಬೆಚ್ಚುವಳು- ಒಂದು ನಿಮಿಷ. ರಾಮಣ್ಣ ತನಗೆ ಮುಖವನ್ನು ತೋರಿಸಬಾರದೆಂಬ ಯತ್ನದಲ್ಲಿದ್ದುದನ್ನು ಕಂಡು-]

ಬಂಗಾರೆವ್ವ:- (ಆಶ್ಚರ್ಯಸೂಚಕವಾಗಿ) ರಾಮಣ್ಣಾ !

ರಾಮಣ್ಣ :- (ಮಾತನಾಡುವುದಿಲ್ಲ).

ಬಂಗಾರೆವ್ವ:- ಯಾಕಪ, ರಾಮಣ್ಣಾ, ಎಲ್ಲೆಯೂ ಕಾಣಲೇ ಇಲ್ಲ.

ರಾಮಣ್ಣ:- (ಇನ್ನೂ ಮಾತನಾಡುವುದಿಲ್ಲ).

ಬಂಗಾರೆವ್ವ:- (ದಿಟ್ಟಿಸಿ ನೋಡಿ) ಅಯ್ಯ ! ಕೈಯಾಗ ಏನ್ಹಿಡಿದೀದಿ ? ಎಲ್ಲಿ ಹೊಂಟೀದೇನು ?

ರಾಮಣ್ಣ:- (ನಿರುಪಾಯನಂತೆ) ಹೌದು.

ಬಂಗಾರೆವ್ವ:- ಯಾವೂರಿಗೆ?

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಮಣ್ಣ :– (ಚಕಿತನಾದವನಂತೆ) ಯಾವ ಊರಿಗೆ? ಯಾವ–? ಹೀಂಗೇ ಹೊಂಟೀನಿ.

ಬಂಗಾರೆವ್ವ:– (ತಳಿಯುವಿ) ಅಂದ್ರ ?

ರಾಮಣ್ಣ :– ಬಂಗಾರೆವ್ವ, ನಾ ಹೋಗೋತನಕ ಯಾರಿಗೂ ಹೇಳಿ ಬ್ಯಾಡ....ಇಲ್ಲಿ ನೋಡು, ಯಾವ ಊರಿಗೆ ಗೊತ್ತಿಲ್ಲ, ಒಟ್ಟು ಈ ಊರು ಬಿಟ್ಟು ಹೋಗ್ತೀನಿ.

ಬಂಗಾರೆವ್ವ:–(ಚಕಿತಳಾಗಿ) ಊರ ಬಿಟ್ಟು ! ಅಂದ್ರ ಬಿಟ್ಟೇ ಬಿಟ್ಟು ? ಕಡ್ಯಾಕೇ ?

ರಾಮಣ್ಣ :– ಹುಂ.

ಬಂಗಾರೆವ್ವ:– ಅಯ್ಯ ! ಅದ್ಯಾಕೊ, ನಮ್ಮಪ್ಪ? ಊರಾಗ ಈಟೊಂದು ಗಡಬಿಡಿ ಎದ್ದೀತಿ?

ರಾಮಣ್ಣ:– (ಉಸುರ್ಗರೆದು) ನನ್ದೇನು ಕೆಲಸ ?

ಬಂಗಾರೆವ್ವ:– ಮತ್ತ ಯಾರದೈತಿ? ಕಲಿತವ, ಸಾಲೆ ಬರೆದವ, ಎಲ್ಲಾ ಹೇಳಿಕೊಡುವವ ನೀ–

ರಾಮಣ್ಣ:– (ಸೊಂಪ ದನಿಯಲ್ಲಿ) ನಿನಗ್ಗೊತ್ತಿಲ್ಲ, ಬಂಗಾರೆವ್ವ, ನಾ ಯಾರಿಗೂ ಬ್ಯಾಡ–

ಬಂಗಾರೆವ್ವ:– (ನಡುನೆಯಿ) ತಗೀಯೊ ನಿನ !

ರಾಮಣ್ಣ:– (ಪಟದಿಂದ) ಇಲ್ಲ, ಬಂಗಾರೆವ್ವ, ನಾ ಹೇಳೋದು ಖರೇ. ಆ ಸಂಗ್ಯಾ ಸಹಿತ ನನ್ನ ಮ್ಯಾಲೆ ತಿರುಗಿ ಬಿದ್ದ.

ಬಂಗಾರೆವ್ವ.– (ನಕ್ಕು) ಅಯ್ಯ ! 'ಮಂಗ್ಯಾ ಬಾರೊ' ಅಂದ್ರ ಸಂಗ್ಯಾ ಬರ್ತೈತಿ, ಇದರ ಮಾತಿನಮ್ಯಾಗ ನಿನ್ನ ಯಿಸ್ವಾಸೇನು ?

ರಾಮಣ್ಣ:– ಇಲ್ಲ, ಎಲ್ಲಾರೂ ನನ್ನ ಮ್ಯಾಲೆ ತಿರುಗಿ ಬಿದ್ದಾರ !

ಬಂಗಾರೆವ್ವ:– ಅಂಥಾದೇನ್ಯಾಡ್ತೀಯಂತ ನೀ? ನಡಿಯೊ ನಿನ ! ನೀ ಹ್ವಾದದ್ದು ಗೊತ್ತಾದ್ರ ಸಣ್ಣಪ್ಪಜ್ಜ ಏನಂದಾನು ?

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಮಣ್ಣ:– ಅದಕ್ಕ ನಾ ಹೋಗೋತನಕ ಯೂರ್ಮ್ಯಂದೂ ಹೇಳ ಬ್ಯಾಡ ಅಂತ–

ಬಂಗಾರೆವ್ವ:– (ನಡುವಯಿ) ನೀಯೇನು ಹೋಗಾಕ ಕುಂತಿಲ್ಲ. ಏಳು. ಗಂಟು ಎತ್ತು, ಮನೀಕಡೆ ನಡೀ.

ರಾಮಣ್ಣ:– (ತಲೆ ಆಲ್ಲಾಡಿಸಿ) ನನ್ನ ಯಾರೂ ಮುಂದ ಸಹಿತ ಕರೆಯೋದಿಲ್ಲ.

ಬಂಗಾರೆವ್ವ:– (ತುಸು ಸಿಟ್ಟಿನ ದನಿಯಲ್ಲಿ) ಯಾರು ಹಂತಾ ಬಿರಸ್ಪತಿ ಅಂತ ಹೆದರತಿ! ಊರ್ತುಂಬಿ ಗಂಡಸದಾವು, ಒಂದಕ್ಕ 'ಅ' ಅಂದ್ರ 'ಧ' ಗೊತ್ತಿಲ್ಲ. ಎಲ್ಲಾರ್ನೂ ನೀನೂ ಮುಂದ ಕರೆದೀ ಅಂತ.... ಸಣ್ಣಪ್ಪಜ್ಜ ಈವೊತ್ತಿ ಹೇಳ್ತಿದ್ದ–

ರಾಮಣ್ಣ:– (ಸಂಶಯದಿಂದ) ಏನು? ಏನಂತ ಹೇಳ್ತಿದ್ದ? ನನ್ಪತಿಂದ?

ಬಂಗಾರೆವ್ವ:– ಹೌದು ಮತ್ತ? ನಿನ್ಹೊರತು ಅದಾರ್ಯಾರು ಊರಾಗ? ಎಲ್ಲಾರಿಗೂ ಹೇಳ್ತಿದ್ದ "ಇಂದಿಲ್ಲ ನಾಳೆ ರಾಮಣ್ಣಗ ಹೇಳ್ತೀನಿ, ನಮಗ ಎಲ್ಲಾರಿಗೂ ಓದಾಕ ಕಲಿಸು" ಅಂತ–

ರಾಮಣ್ಣ:– (ಆಸೆಯೊಜೆದು) ಏನು? ನಾನು? ಓದಲಿಕ್ಕೆ ಕಲಿಸೋದು? ಆದರೆ ಕಲೀತಾರೆ ಯಾರ ನನ್ಮಡಿಂದ?

ಬಂಗಾರೆವ್ವ:– ಕಲೀದೇ ಏನ್ಮಾಡ್ಯಾವು?

ರಾಮಣ್ಣ:– ನನ್ನ ಮ್ಯಾಲೆ ಯಾರದೂ ವಿಶ್ವಾಸ ಇದ್ಹಾಂಗಿಲ್ಲ, ಅದಕ್ಕೆ ಳಿದೆ.

ಬಂಗಾರೆವ್ವ:– (ನಕ್ಕು) ನೀನೂ ಅಂಥವನೆ!

ರಾಮಣ್ಣ:– (ತಿಳಿಯದೆ) ಅಂದ್ರ?

ಬಂಗಾರೆವ್ವ:– ಗುದ್ದಲಿ–ಸಲಿಕೆ ಹಿಡ್ಯಾಕ ಬ್ಯಾಡ ನಿನ್ಗ. ಅದಕ್ಕ ಚಾಷ್ಟಿ ಮಾಡ್ತಾವು. ಹೋಗಲಿ ಬಿಡು, ನೀ ಗುದ್ದಲಿ ಹಿಡಿದು ಆಗಿದರ ಏನು ಭಾಂವಿ ಹೊರಡೋದು ಅಷ್ಟರಾಗೇ ಇದ.

ರಾಮಣ್ಣ:– (ಅಭಿಮಾನದಿಂದ) ನನ್ಗೇನು ಬರೋದಿಲ್ಲಂತೀ ಏನು?

Sri Vidyabharathi Book Centre, Sringeri

CC-O. In Public Domain. Digitized by eGangotri

ಬಂಗಾರೆವ್ವ:– (ನಗೆಯಿಂದ) ಬಂದೀತಪ.... ಆದ್ರ ಅದ್ಯೂ ಛಲೋ ಕುಂತು ಹೊದಾಕ ಬರ್ತೇತಿ. ಯಾರಿಗೆ ಯಾವುದು ಸಾದಸ್ತತಿ ಅವರು ಅದನ್ನ ಮಾಡ್ಸೇಕು. ಹೌದಂತೀಯೊ ಇಲ್ಲೊ ?

ರಾಮಣ್ಣ:– (ಆಶಾಭ್ರಿತನಾಗಿ) ಅಂದ್ರ ನನ್ನ ಕೂಡಿಸಿಕೋತಾರನ್ನು ತಮ್ಮೊಳಗ

ಬಂಗಾರೆವ್ವ:– ನೊದಲಿಗೆ ಗಂಟಂತೂ ಎತ್ತು, ಮನೀ ಕಡೆ ನಡೀ.

ರಾಮಣ್ಣ:– ಬರ್ತೀನಿ–ಬಂದೆ ನಡೀ. (ಬಂಗಾರೆವ್ವ ಹೊರಡುವಳು).

ಬಂಗಾರೆವ್ವ:– (ಹೊರಡುತ್ತ) ಇಲ್ಲಾ ಅಜ್ಜನ್ನ ಕಳಿಸಿಕೊಡ್ತೀನಿ ನೋಡು (ಎನ್ನುತ್ತ ಹೋಗುವಳು).

ರಾಮಣ್ಣ:– ಇಲ್ಲಿಲ್ಲ ಬಂದೆ (ಎಂದು ಗಂಟನ್ನೆತ್ತಿಕೊಂಡು ಮುತ್ತೆ ಅನುಮಾನಿಸುತ್ತ ನಿಲ್ಲುವನು).

[ಒಂದೆರಡು ನಿಮಿಷಗಳಲ್ಲಿ ಸಣ್ಣಪ್ಪಜ್ಜ ಬರುವನು]

ಸಣ್ಣಪ್ಪಜ್ಜ:– (ಮಂ– ಎಂದು ರಾಮಣ್ಣನನ್ನು ದಿಟ್ಟಿಸುತ್ತ ನಿಲ್ಲುವನು).

ರಾಮಣ್ಣ:– (ಮಂ– ಎಂಬ ಸದ್ದನ್ನು ಕೇಳಿದೊಡನೆ ಗಂಟನ್ನು ಹಿಂದಿನಿಂದ ಕೆಳಗೆ ಬಿಟ್ಟು ಅದರ ಮೇಲೆ ಕೂಡ್ರುವನು).

ಸಣ್ಣಪ್ಪಜ್ಜ:– ಯಾಕಸ, ರಾಮಣ್ಣ–

ರಾಮಣ್ಣ:– (ನಡುವೆಯೆ) ಏನಿಲ್ಲ, ಹೀಂಗೇ ವಿಚಾರ ಮಾಡ್ತಾ ನಿಂತಿದ್ದೆ.

ಸಣ್ಣಪ್ಪಜ್ಜ:– (ನಗೆಯಿಂದ) ಈಗೇನು–ಯಿಚಾರದ ಮ್ಯಾಗ ಕುಂತ್ಬಿಟ್ಟೆ ಏನು ?

ರಾಮಣ್ಣ:– ಇಲ್ಲಿಲ್ಲ–ಬಂಗಾರೆವ್ವ ಛಿಟ್ಟಿಯಾದಳು, ಏನೊ ಹೇಳಿದಳು–

ಸಣ್ಣಪ್ಪಜ್ಜ:– ನನ್ನೂ ಹೇಳಿದ್ಲು. ನೀ ಯಲ್ಲಿಯೊ ಜರೂರ ಕೆಲ್ಸಕ ಹೊಂಟೀದಿ ಅಂತ.... ಹೌದೇನು ?.... ಅಂದ್ರ ನಮ್ಮ ಕೈ ಬಿಡ್ತೀ ಅಪ ?

ರಾಮಣ್ಣ:– (ತುಸು ವಿಚಾರಿಸಿ) ಸಣ್ಣಪ್ಪಜ್ಜ, ಖರೇ ಹೇಳೋದಂದ್ರ ನಾ ಯಾರಿಗೂ ಬ್ಯಾಡಾಗೀನಿ ಇಲ್ಲಿ. ನೋಡಿದಿಯಲ್ಲ, ತಲೆಗೆ ಒಂದು ಚುಚ್ಚಿ ಮಾತಾಡ್ತಾರ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಣ್ಣಪ್ಪಜ್ಜ:- (ನಕ್ಕು) ಥೂ ಹುಜ್ಗೊಟ್ಟಿ! ಅವಕ ಬ್ಯಾರೀ ಹ್ವಾರೆ ಇಲ್ಲ, ಮಾತಾಡ್ತಾವ.... ಮತ್ತ ನೀಯೇನು ಕಡಿವೆ ಮಾತಾಡೋವವ ಅಂತ ಸೋತು ಹೊಂಟೀದಿ?

ರಾಮಣ್ಣ:- (ಸೊಂಪವನಂತೆ) ಮತ್ತ ನಾ ಹೇಳಿದ್ದಕೆಲ್ಲ ವಿರುದ್ಧ ಮಾತಾಡ್ತಾರ—

ಸಣ್ಣಪ್ಪಜ್ಜ:- (ಪತ್ತಿರ ಬಂದು ಕುಳಿತು ಹೆಗಲ ಮೇಲೆ ಕೈಯಿಟ್ಟು) ನೋಡು, ರಾಮಣ್ಣಾ, ನಾ ಹೇಳಲಿಯಾ ನಿನಗ? ನಾ ಮುದುಕ ಆಗೀನಿ, ನನ್ನ ತಿಳೀತೀತಿ ಅನ್ನು, ನೀ ಯಾಕ ಹಾಂಗ ಮಾಡ್ತೀ ಅನ್ನೋದ.

ರಾಮಣ್ಣ:- (ಸಂಶಯದಿಂದ) ನಾಯೇನ್ಮಾಡ್ತೀನಿ?

ಸಣ್ಣಪ್ಪಜ್ಜ:- ನೀ ಕಲಿತೀದಿ, ಸುಳ್ಳಲ್ಲ. ಅದ್ರ ಸಾಲೀ ಕಲಿಯಲಾರ ಜೋರಿಗೆ ಬುದ್ದೀನೇ ಇಲ್ಲ ಅಂದ್ರ ಹ್ಯಾಂಗ?

ರಾಮಣ್ಣ:- ಹಾಂಗ ಅಂದೀನೇ ನಾನು?

ಸಣ್ಣಪ್ಪಜ್ಜ- ಹೋಗಲಿ ಬಿಡು. ನಮಗ ಫಡ್ಡರು ಅಂತ ಬಯ್ಯೋದನ್ನ ಬಿಟ್ಟು, ನಮ್ಮ ಊರವರು ಅಂತ ತಿಳಿಸಿಕೊಡು.

ರಾಮಣ್ಣ:- ಮತ್ತ ನಾಯೇನ್ಮಾಡಿದೆ ಹೇಳು, ಅಜ್ಜ? ನೀವು ಸುಮ್ಮ್ರ ಸುಮ್ಮನೆ ಇದು ಇದು ಏನೇನೊ ಮಾಡಬೇಕಂದ್ರಿ. ಅದಕ್ಕ ನಾ ಹೇಳಿದೆ ಸರ ಕಾರದವರೂ ಅವನ್ನೆ ಮಾಡ್ಬೇಕಂತಾರ, ನೀವು ಕೇಳಿರಿ, ಎಲ್ಲಾ ರೀತಿಯಿಂದ ಸಹಾಯ ಮಾಡ್ತಾರ. ಅದಕ್ಕ ಯಾವನ್ನಾದರೂ ಮಂತ್ರೀನ್ನ ಕರಿಸಿ ನಾವು ಮಾಡಿದ್ದನ್ನ ತೋರಿಸೋಣ, ಅಂದ್ರ—

ಸಣ್ಣಪ್ಪಜ್ಜ:- (ನಡುನೆಯಿ) ಅದೆಲ್ಲಾ ನನಗ ತಿಳೀತೈತಿಯೊ, ರಾಮಣ್ಣಾ. ಆದ್ರ ಈ ಜನಕ್ಕ ಹ್ಯಾಂಗ ಹೇಳಬೇಕು ಹಾಂಗ ಹೇಳಿದ್ರೇನೆ ಕೇಳ್ತಾರ. ನೀಯಲ್ಲಾ ಹೇಳತಿ; ಆದ್ರ ನೀ ಯಾರು ಹೇಳಾಕ-ಅಂತಾರ. ಖುತಿಯಿಂದ ಜನ ಕೆಲ್ಸ ಮಾಡ್ತಿದ್ರ ಜಬರ ಯಾಕ ಮಾಡ್ಬೇಕು, ಹೌದಂತಿಯೊ ಇಲ್ಲೊ?

ರಾಮಣ್ಣ:- (ಆಸೆಯಿಂದ) ಅಂದ್ರ–ಮಾಡ್ತಾರ ಅಂತೀ ಯಾ, ಸಣ್ಣಪ್ಪಜ್ಜ? ಖರೇ ಹೇಳೋದಂದ್ರ, ಈ ಜನ ಏನೂ ಮಾಡೋದಿಲ್ಲ, ಇವರಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಏನೂ ತಿಳಿಯೋದಿಲ್ಲ ಅಂತ ಅನ್ನಿಸಿ ಸಿಟ್ಟು ಬರ್ತಿತ್ತು. ನೋಡು. ವರ್ತಮಾನ ಪತ್ರದಾಗ ಅಲ್ಲಿ ಹಾಂಗ ಆಯ್ತು, ಇಲ್ಲಿ ಹೀಂಗ ಆಯ್ತು ಅಂತ ಓದಿ ನಮ್ಮೂರಿಗೆ ಈ ಜನರ ದಶಿಂದ ಏನೂ ಆಗೋದಿಲ್ಲ ಅಂತ—

ಸಣ್ಣಪ್ಪಜ್ಜ:– (ನಡುವೆಯೆ) ಹಾಂಗ ಅನ್ನಿಸಿದರ ಮುಂದಾಗಿ ಮಾಡಿ ತೋರಿಸಿದ್ರಾತು, ಬಯ್ಯೋದ್ಯಾಕ?

ರಾಮಣ್ಣ:– (ಒಮ್ಮೆಲೆ ಗಂಟನ್ನು ಹಿಡಿದುಕೊಂಡೆದ್ದು) ಮುಂದಾಗಲಿಕ್ಕೆ ಒಲ್ಲೆ ಅಂತೀನೆ? ನಡೀ ಸಣ್ಣಪ್ಪಜ್ಜ, ಬೇಕಾದಕ ಮುಂದಾಗ್ತೀನಿ....ಬೇಕಾದ್ರ, ನಿಂಗನ ಗಾಡಿ ಎಳೀಲಿಕ್ಕೂ ಎತ್ತಿನ ಬದಲಿ ನಾನೇ ಮುಂದಾಗ್ತೀನಿ.

ಸಣ್ಣಪ್ಪಜ್ಜ:– (ಗಟ್ಟಿಯಾಗಿ ನಗುತ್ತ) ಭಪ್ಪರೆ! ಹಹ! ನಿಂಗ್ಯಾಗ ಹೇಳ್ಬೇಕು. ಬುದ್ದಿ ಇದ್ದೋರು ಗಾಡಿ ಎಳೀತಾರ, ಹೆದರಬ್ಯಾಡ ಅಂತ.

ರಾಮಣ್ಣ:– (ನಗೆಯಿಂದ) ಬುದ್ಧಿ ಇದ್ದವರು ಅಂತ ಜಾಷ್ಟಿ ಮಾಡ್ತಿ, ಅಜ್ಜ, ಅಂ? ಬುದ್ಧಿ ಎಲ್ಲಾರಿಗೂ ಅದ. ಆದರೆ ತನ್ನ ಹಾಂಗ ಮಂದೀಗೂ ಬುದ್ಧಿ ಅದ ಅನ್ನೋ ಬುದ್ಧಿಮಾತ್ರ ಭಾಳ ಜನಕ್ಕ ಇಲ್ಲ. ಆಯ್ದು ವರ್ಷದಾಗ ಅವನ್ನೂ ಸಾಧಿಸಿ ಬಿಡೋಣ ನಮ್ಮೂರಾಗ.

ಸಣ್ಣಪ್ಪಜ್ಜ:– (ಆಶ್ಚರ್ಯ ತೋರಿಸಿ) ಆಯ್ದು ವರ್ಷ! ಅಂದ್ರ ಈ ಮುದುಕನ ಆವ್ಸ ಆಕಟಕೇ ಮುಗೀತೇತಿ ಅಂತ ಲೆಕ್ಕಾ ಹಾಕೇದಿ ಅನ್ನು.

ರಾಮಣ್ಣ:– ಹಾಂಗಲ್ಲ, ಅಜ್ಜ. ಆಯ್ದು ವರ್ಷದಾಗ ನಮ್ಮ ಜನಕ್ಕ ಎಲ್ಲಾ ತರದಿಂದ ಸುಖ, ಗೆಳಕೆ, ಆರೋಗ್ಯ ಹೆಚ್ಚಾಗಬೇಕು ಅಂತ ಸರಕಾರದವರು ಒಂದು ಯೋಜನಾ ಮಾಡ್ಯಾರ, ಪಂಚವರ್ಷೀಯ ಯೋಜನಾ. ಅವರ ಜೋಡಿ ಜಿದ್ದಿಗೆ ಬೀಳೋಣ ನಾವು—

ಸಣ್ಣಪ್ಪಜ್ಜ:– (ವಿಚಾರದಲ್ಲಿ ತೊಡಗಿದವನಂತೆ) ಹಂ-. ಐದು ವರ್ಷ.... ಯೋಜನಾ..ರಾಮಣ್ಣಾ. ಒಂದ್ಮಾತ್ತ್ಗೇಳ್ತೀನಿ. ಕೆಲಸ ಸಣ್ಣದಿರಲಿ ದೊಡ್ಡದಿರಲಿ, ಮಾಡೋವವ ಮಡ್ಡ ಮನಸ್ಯಾ ಇರಲಿ, ಭಾರೀ ಸರಕಾರ ಇರಲಿ, ಮನಸ ಗಟ್ಟಿ ಬೇಕು. ಆಯ್ದು ವರ್ಷ ಯಾಕ? ನಾಲ್ಕೇ ವರ್ಷ ಆದೀತು, ಒಂಬ್ಯಾಳೀ ಆರು ವರಸಾದೀತು. ಆದರ ಹಿಡಿದ ಕೆಲಸ ಮುಗಿಸೇ ಬಿಡ್ತೀನಿ ಅಂತ ಹಟ

Sri Vidyabharathi Book Centre, Sringeri

CC-0. In Public Domain. Digitized by eGangotri

ಇದ್ದರ ವರ್ಸದ ಲೆಕ್ಕ ಯಾಕ? ಇಲ್ದಿದ್ರ ಅಯ್ದು ವರ್ಸ ಆತು, ಕೆಲಸ ಪೂರಾ ಆಗಲಿಲ್ಲ ಅಂತ ಒಬ್ಬರೊಬ್ಬರ್ನ ಬೈಕೊಂತ ಕುಂತೇವು. ಹೌದಂತೀಯೋ ಇಲ್ಲೊ? ಕೆಲಸ ಮಾಡಬೇಕು. ಆದರ ಮನಸ್ಯಾಡೋದು ಮುಖ್ಯ. ಹೌದಂತೀಯೋ ಇಲ್ಲೊ?

ರಾಮಣ್ಣ:- ನಡೀ, ಅಜ್ಜ, ಏನೂ ಆಸ್ನೋದೇ ಬ್ಯಾಡ. ನೋಡಾದ್ರೂ ನೋಡು, ಊರಿನ ಮಕಾನೇ ಬದಲಾಗಿರ್ಬೇಕು-ಹಾಂಗ ಮಾಡೋಣಂತ.

ಸಣ್ಣಪ್ಪಜ್ಜ:- ಹೌದಪ-ಚಾದ ಅಂಗ್ಡಿ, ಸಿನೆಮಾ ಮಾಡಿ ನಮ್ಮೂರ ಪ್ಯಾಟೆ ಊರ ಮಾಡೋರು ನೀವೆಲ್ಲಾ ಹುಡುಗ್ರು. ಆದಕ್ಕ ನಾ ಮುಗದಾಣ ಹಿಡಿದದ್ದ.

ರಾಮಣ್ಣ:- (ಸಂಶಯದಿಂದ) ಅಂದ್ರ?

ಸಣ್ಣಪ್ಪಜ್ಜ:-ನೋಡು,ರಾಮಣ್ಣಾ, ಹುಟ್ಟಿ ಈಟ ವರುಸ ಇಲ್ಲಿ ಬೆಳ್ದೀನಿ. ಹಳ್ಳಿ ಈ ಊರು. ಹಳ್ಳೀನೇ ಉಳೀಲಾಕ ಬೇಕು ಅಂತ ನನಗನಿಸಿದರ ತಪ್ಪೇನು?

ರಾಮಣ್ಣ:- ಹಳ್ಳೀನೇ ಉಳೀಬೇಕು? ಅಂದ್ರ – ಯಾವ್ದೂ ಬ್ಯಾಡ ಅಂತೀ ಏನು?

ಸಣ್ಣಪ್ಪಜ್ಜ:- ಬೇಕಪ. ದುಡ್ಡು ಕೊಟ್ಟದ್ದಕ್ಕ ಸುಕ ಅನ್ನಿಸೋದೆಲ್ಲಾ ಬೇಕು. ಸಾಲೆ ಬೇಕು, ದವಾಖಾನಿ ಬೇಕು, ದನಕ್ಕ ಬ್ಯಾನಿ - ಬ್ಯಾಸರಕೆ ಹೋಗ್ಬೇಕು–ಇಂತಾದೆಲ್ಲಾ ಬೇಕು. ಆದರ ದುಡ್ಡ ಕೊಟ್ಟು ಕುಡಿದು ಜಗಳಾಡೋದು, ಕುಂತ ಬೀಡಿ ಸೇದೋದು–ಇಂಥಾವ ಬ್ಯಾಡ.

ರಾಮಣ್ಣ:- (ಆವನನ್ನು ಕುತೂಹಲದಿಂದ ದಿಟ್ಟಿಸಿ ನೋಡುವನು).

ಸಣ್ಣಪ್ಪಜ್ಜ:- (ಸಂಶಯದಿಂದ) ಯಾಕಪ? ಏನ್ತೆಪ್ಪಿತು.

ರಾಮಣ್ಣ:- (ನಗೆಯಿಂದ) ಎಲ್ಲಾ ತಪ್ಪಿತು—

ಸಣಪ್ಪಜ್ಜ:- ಏನಂದಿ?

ರಾಮಣ್ಣ:- ಆದರೆ ತಪ್ಪು ನಿನ್ದಲ್ಲ, ನಮ್ಮದು.

ಸಣ್ಣಪ್ಪಜ್ಜ:- ಅಂತೀಯಾದ್ರೂ ಏನೊ?

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಮಣ್ಣ:– ತಪ್ಪು ನಮ್ಮದು ಅಂದೆ. ನೀನು ಮಂತ್ರಿ ಆಗ್ಬೇಕಿತ್ತು.

ಸಣ್ಣಪ್ಪಜ್ಜ :– (ಚಕಿತನಾಗಿ) ಅಂ? (ಒಮ್ಮೆಲೆ ಮೋಜೆನ್ನಿಸಿ) ಅಂ? ಏನಾಗ್ಬೇಕಾಗಿತ್ತಂದಿ? ಹಹ!

ರಾಮಣ್ಣ:– ಹೋಗಲಿ ಬಿಡು. ಮಂತ್ರಿ ಆಗಿದ್ದರ ಊರ ಬಿಟ್ಟು ಹೋಗ್ತಿದ್ದಿ. ಛಲೋನೇ ಆಯ್ತು. ಊರಿಗೆ ಹಿರಿಪಂಚ ಆಗು—ಆ ಮ್ಯಾಲೆ ನೋಡೀಯಂತ. ಬೇಕಾದ್ದನ್ನ ಮಾಡೀವಂತ. ಹೇಳಿಲ್ಲ, ಮರ್ತ್ಯಲೋಕ ಅಂದ್ರ, ಕರ್ತಾರನ ಕಮ್ಮಟ ಅಂತ? ದುಡಿಯುವವರಿಗೆ ದೇವಲೋಕ ಆದೀತು.

ಸಣ್ಣಪಜ್ಜ:– (ತಿಳಿಯದೆ) ಎಲೆ! ಎಲ್ಲಿಂದೆಲ್ಲಿಗೊಯ್ದಿಯೊ ಮಾತು?

[ರಂಗಭೂಮಿಯನ್ನು ಒಮ್ಮೆಲೆ ಕತ್ತಲಾಗಿಸಬೇಕು. ಸಂಗ್ಯಾನ ಹಾಡು ಕೇಳಿ ಬರುವುದು. ಕ್ರಮೇಣ ಆ ಹಾಡು ಮೇಳಸಂಗೀತವಾಗಿ ಪರಿಣಮಿಸುವುದು. ಹಾಡು ಮುಗಿಯುವ ಸಮಯಕ್ಕೆ ರಂಗಭೂಮಿಯಲ್ಲಿ ಮತ್ತೆ ಪ್ರಕಾಶಗೊಳಿಸಿ-]

ಕೊನೆಯ ದೃಶ್ಯ

(ಪಳ್ಳಿಯ ಜೀವನದ ಬದಲಾವಣೆಗಳ ದ್ಯೋತಕವಾಗಿ ಒಂದೆರಡು ಸ್ತಬ್ಧಸಂನಿವೇಶಗಳನ್ನು ತೋರಿಸಬೇಕು. ಈ ನಿಮಿತ್ತವಾಗಿ ಎಲ್ಲ ಪಾತ್ರಗಳು ರಂಗಭೂಮಿಯ ಮೇಲೆ ಹಾಯ್ದು ಹೋಗಬೇಕು. ಕೊನೆಯದಾಗಿ ಎಲ್ಲ ಪಾತ್ರಗಳು ಏಕ ಕಾಲಕ್ಕೆ ಜಾನಪದ ನೃತ್ಯವೊಂದನ್ನು ಕುಣಿಯುತ್ತ ರಂಗಸ್ಥಲವನ್ನು ಪಾಟಿ ಹೋಗಬೇಕು. ನಾಟಕದ ಮೂಲೋದ್ದೇಶದ ನಿರೂಪಕವಾಗಿರುವಂತೆ ಈ ಸಂನಿವೇಶಗಳನ್ನು ನಿರ್ದೇಶಕನು ಯೋಜಿಸಿಕೊಳ್ಳಬಹುದು).

(ತೆರೆ)

ಮುಗಿದುದು

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀರಂಗರ ಬೇರೆ ಕೃತಿಗಳು

ನಾಟಕಗಳು

೧* ಹರಿಜನ್ವಾರ
೨* ಪರಮೇಶ್ವರ ಪುಲಕೇಶಿ
೩* ಸಂಧ್ಯಾಕಾಲ
೪ ವಿರಾಟ ಪುರುಷ
೫ ಪ್ರಪಂಚ ಪಾಣಿಪತ್ತು
೬ ಜರಾಸಂಧಿ
೭* ಸಂಧ್ಯಾಕಾಲ
೮ ಶೋಕಚಕ್ರ (ಅಚ್ಚಿನಲ್ಲಿದೆ)
೯ ಜೀವನ ಜೋಕಾಲಿ (ಅಚ್ಚಿನಲ್ಲಿದೆ)
೧೦ ಸಂಸಾರಿಗ ಕಂಸ
೧೧* ಪೂರ್ವರಂಗ (ಏಕಾಂಕ ಸಂಗ್ರಹ)
೧೨ ಜೀವನರಂಗ
೧೩ ನಿರಾಹಾರ
೧೪* ವೈದ್ಯರಾಜ
೧೫* ದರಿದ್ರನಾರಾಯಣ

ಕಾದಂಬರಿಗಳು

೧* ವಿಶ್ವಾಮಿತ್ರನ ಸೃಷ್ಟಿ
೨* ಭರಮಪ್ಪನ ಭೂತ
೩ ಪುರುಷಾರ್ಥ
೪ ಕುಮಾರ ಸಂಭವ
೫ ಅನಾದಿ
೬ ಪ್ರಕೃತಿ
೭ ಪುರುಷ (ಅಚ್ಚಿನಲ್ಲಿದೆ)

ಇತರ ಗ್ರಂಥಗಳು

೧ ಸ್ವಲ್ಪದ್ರಲ್ಲಿ ಸ್ವಾರಸ್ಯ (ಹರಟೆ)
೨ ನಗೆ (ವಿಮರ್ಶಾತ್ಮಕ ಪ್ರಬಂಧ)
೩ ಗೀತಾಗಾಂಭೀರ್ಯ
೪ ಗಣರಾಜ್ಯ ಘಟನೆ ಮುಂ.

---

* ಈ ಗುರುತಿನ ಪ್ರತಿಗಳು ತೀರಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri